
ಕಲ್ಯಾಣ ಕಿರಣ

ಸಂಪುಟ ೬
ಸಂಚಿಕೆ ೧೨
ಏಪ್ರಿಲ್ ೧೯೮೧
ಬಸವ ಶಕೆ ೮೭೪
ಬೆಲೆ : ೧–೫೦



ಕಲ್ಯಾಣ ಕಿರಣ

ಮಾಸ ಪತ್ರಿಕೆ

ವಾರ್ಷಿಕ ಚಂದಾ ರೂ. ೧೬ ಆಜೀವ ಸದಸ್ಯತ್ವ ೧೫೧ ರೂ.

ಬಿಡಿ ಪ್ರತಿ ೧-೫೦ ರೂ.

ಕಿರಣಗನ್ನಡಿ

ಮುಖಪುಟ : ವೈರಾಗ್ಯನಿಧಿ ಅಕ್ಕಮಹಾದೇವಿ. (ಹನ್ನೆರಡನೆಯ ಶತಮಾನ)

ಕಲ್ಯಾಣ ಕಿರಣ

ಸಂಪುಟ ೬] ಏಪ್ರಿಲ್ 1981 [ಸಂಚಿಕೆ ೧೨

Nudinaivedya **Prayer to the feet of Lord Basava**

Filling the platter of my heart
with the juice of pure devotion
I pour it humbly at thy feet Oh ! my Father. 2

I offer to thy feet both the sweet and bitter tastes
Of all my pleasures and pains, oh my Father ! 4

Being an inarticulate pen held in thy intelligent hand
I write as thou do'st bid me write oh my Father
I am a veena between thy fingers held
I sing as thou do'st pluck the strings oh my Father ! 8

Thou rub and worriest me, put me to several tests
However you test me but still, thou art my Father !
Thy mercy is deliverence Thy love my soul's strength
Thou art my life's incentive, its cream oh Father ! 12

Make me live for thee alone
Kindle in me love for service
Make me able to broadcast thy voice oh Father
O Basava Lord sent down as His herald
Beloved son of Sachidananda bless me my Father ! 16

— **Jagadguru Mate Mahadeviji**

(ಹೃದಯ ಬಟ್ಟಲ ಮಾಡಿ ಪದ್ಯದ ಭಾಷಾಂತರ)

ಕಲ್ಯಾಣ ಕಿರಣ
ಮಾಸ ಪತ್ರಿಕೆ

ಸಂಸ್ಕೃತಿ, ಸಾಹಿತ್ಯ, ನೀತಿ, ಆಧ್ಯಾತ್ಮ ಮೌಲ್ಯಗಳಪ್ರಸಾರಕ್ಕೆ ಮೀಸಲಾದ ಪತ್ರಿಕೆ

ಪ್ರಧಾನ ಸಂಪಾದಕರು :
ಜಗದ್ಗುರು ಮಾತೆ ಮಹಾದೇವಿ

ಪ್ರಕಾಶಕರು :
ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದ ಪರವಾಗಿ ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಪ್ರಕಾಶನ ಪಡಿಸುವುದು.


ಕೇಂದ್ರ ಕಾರ್ಯಾಲಯ :
ಕಲ್ಯಾಣ ಕಿರಣ ಮಾಸ ಪತ್ರಿಕೆ
ಬಸವ ಮಂಟಪ, ನಂ. ೨೪, ಎರಡನೇ ವಿಭಾಗ, ಕಾರ್ಡ್‌ರೋಡ್ ರಾಜಾಜಿನಗರ
ಬೆಂಗಳೂರು-೫೬೦೦೧೦

ಕಲೆ :
ಬಿ. ಪಿ. ಕೃಷ್ಣಯ್ಯ

ಚಂದಾ ವಿವರ :

ಬಿಡಿ ಸಂಚಿಕೆ	: ರೂ.	೧-೫೦
ವಾರ್ಷಿಕ	: ರೂ.	೧೬-೦೦
ದ್ವೈವಾರ್ಷಿಕ	: ರೂ.	೩೧-೦೦
ಆಜೀವ ಸದಸ್ಯತ್ವ	: ರೂ.	೧೫೧-೦೦
ಪೋಷಕರು	: ರೂ.	೫೦೧-೦೦
ಮಹಾಪೋಷಕರು	: ರೂ.	೧೦೦೧-೦೦

* ಪತ್ರಿಕೆಯು ಪ್ರತಿ ತಿಂಗಳ ದಿನಾಂಕ ಒಂದರಂದು ಪ್ರಕಟವಾಗುವುದು.
* ಲೇಖಕರು ಲೇಖನಗಳನ್ನು ಪ್ರತಿತಿಂಗಳ ೧೦ನೇ ದಿನಾಂಕದೊಳಗೆ ಕಳಿಸಬೇಕು.
* ಪತ್ರಿಕೆ ಉದ್ದೇಶವಾದ ಧಾರ್ಮಿಕ, ಸಾಂಸ್ಕೃತಿಕ ಎಲ್ಲಾ ಬಗೆಯ ತಾತ್ವಿಕ ಲೆವಿಚಾರಗಳಲೇಖನ, ಕಥೆ, ಕವನಗಳಿಗೆ ಸ್ವಾಗತವಿದೆ.
* ಲೇಖನಗಳನ್ನು ಕಾಗದದ ಒಂದು ಮಗ್ಗುಲಿಗೆ ಸ್ಪಷ್ಟವಾಗಿ ಬರೆದಿರಬೇಕು.
* ಲೇಖಕರು ತಮ್ಮ ಹೆಸರು ವಿಳಾಸ ಗಳನ್ನು ಸ್ಪುಟವಾಗಿ ತಿಳಿಸಬೇಕಲ್ಲದೆ ಅನುವಾದ ರೂಪಾಂತರ ಅಥವಾ ಸಾಧಾರ ಲೇಖನಗಳಾದರೆ ಅದನು ಸ್ಪಷ್ಟವಾಗಿ ತಿಳಿಸಿ, ಮೂಲ ಲೇಖಕರ ಮತ್ತು ಪ್ರಕಾಶಕರ ಹೆಸರನ್ನು ಕಾಣಿಸ ಬೇಕು.
* ಅಸ್ವೀಕೃತ ಲೇಖನ ಬೇಕಾಗಿದ್ದಲ್ಲಿ ಮರಳಿಸಲು ಬೇಕಾದ ಅಂಚೆವೆಚ್ಚಕ್ಕೆ ಅವಶ್ಯಕವಿರುವ ಸ್ಟ್ಯಾಂಪುಗಳನ್ನು ಕಳಿಸ ಬೇಕು. ಲೇಖನಗಳಲ್ಲಿ ಸೂಕ್ತ ಬದ ಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗಿದೆ.
* ಚಂದಾ ಹಣ ಕೊಡದೆ ಇದ್ದವರು ಪತ್ರಿಕೆಯು ತಲುಪಿದ ತಕ್ಷಣ ಕಳಿಸ ಬೇಕು.
ಹೊಸ ಚಂದಾದಾರರು ೧೬-೦೦ (ಹದಿನಾರು ರೂಪಾಯಿ) ಎಂ. ಓ. ಮಾಡಬೇಕು. (ವಿ. ಪಿ. ಇಲ್ಲ.)
* ಚಂದಾದಾರರು ಪತ್ರ ವ್ಯವಹಾರಗಳಲ್ಲಿ ವಿಳಾಸದ ಮೊದಲಲ್ಲಿ ಬರೆದ ಚಂದಾ ಸಂಖ್ಯೆಯನ್ನು ನಮೂದಿಸಬೇಕು.
* ವಿಳಾಸ ಬದಲಾವಣೆಗಳನ್ನು ತಿಳಿಸಬೇಕು ಚಂದಾದಾರರಾದ ತಿಂಗಳಿನಿಂದ ಮರು ವರ್ಷದ ಹಿಂದಿನ ತಿಂಗಳವರೆಗೆ ಪತ್ರಿಕೆ ಗಳನ್ನು ಕಳಿಸಲಾಗುವುದು.



ಲಿಂಗಾಯತರು ಮತ್ತು ಹಿಂದುತ್ವ

ಆಂಗ್ಲ ಭಾಷೆಯ ಒಂದು ಕಥೆಯಲ್ಲಿ ಮೋಜಿನ ಪ್ರಸಂಗವೊಂದಿದೆ. ಓರ್ವ ಕಾಡಿಗೆ ಹೋಗಿ, ದೀರ್ಘನಿದ್ರೆಗೆ ಒಳಗಾಗುತ್ತಾನೆ. ಎಚ್ಚರಗೊಂಡಾಗ ಕಾಲ ವಿಪರೀತ ಸಂದುಹೋಗಿರುತ್ತದೆ. ಅಲ್ಲಿಂದೆದ್ದು ತನ್ನೂರತ್ತ ಸಾಗುತ್ತಾನೆ. ಎಲ್ಲೆಲ್ಲಿಯೂ ಏನೇನೋ ಬದಲಾವಣೆ, ವಿಚಿತ್ರ. ಹಾಗೆಯೇ ನಾಲ್ಕು ತಿಂಗಳ ಕಾಲಮಾನವನ್ನು ವಿದೇಶದಲ್ಲಿ ಧರ್ಮಪ್ರಸಾರ ಮಾಡುತ್ತ ಕಳೆದು, ಇಲ್ಲಿಯ ವರ್ತಮಾನವೇನೂ ದೊರೆಯದೆ ಸುಮ್ಮನಿದ್ದು ವಾಪಸ್ಸು ಬಂದಾಗ ಇಲ್ಲಿ ಏನೇನೋ ವಾದ-ವಿವಾದ, ತರ್ಕ-ವಿತರ್ಕ. ವೀರಶೈವ (ಲಿಂಗವಂತ)ರು ಹಿಂದುಗಳಲ್ಲ ಎಂಬ ಬಿಸಿ ಬಿಸಿ ಚರ್ಚೆ.

ಹಿಂದೂ ಸಮಾಜದ ಬಹುದೊಡ್ಡ ದೋಷ ಮುಕ್ತ ಚರ್ಚೆ ಮಾಡದಿರುವುದು. ತಾವು ನಂಬಿದ ಅಥವಾ ಜಗತ್ತು ನಂಬಬೇಕೆಂಬ ವಿಚಾರಗಳನ್ನು ಸರಿಯಿರಲಿ ತಪ್ಪಿರಲಿ ಸಮರ್ಥಿಸಿಕೊಳ್ಳುತ್ತ ಹಳೆಯ ನಂಬಿಗೆಗಳ ಹರಕು ಕೌದಿಯಲ್ಲಿ ಮುದುಡಿ ಕುಳಿತುಕೊಳ್ಳುವ ಹವ್ಯಾಸ ರಕ್ತಗತವಾಗಿದೆ ಈ ಜನರಲ್ಲಿ. ವ್ಯಾಖ್ಯಾನವನ್ನೇ ಆಗಲೀ, ತತ್ತ್ವವಿಚಾರವನ್ನೇ ಆಗಲಿ ಎಲ್ಲರೂ ಸೇರಿ ಒಟ್ಟಾಗಿ ಚರ್ಚಿಸಿ, ಅದರಿಂದ ಹೊರಹೊಮ್ಮುವ ನಿರ್ಧಾರಕ್ಕೆ ಅಂಟಿಕೊಳ್ಳಬೇಕೆಂಬ ಪ್ರವೃತ್ತಿಗಿಂತಲೂ, ತಾವೇನನ್ನು ನಂಬಿರುವರೋ ಅದನ್ನು ಪುನಶ್ಚಿಂತನೆಗೆ ಈಡು ಮಾಡದೆ ಸಮರ್ಥಿಸಿಕೊಳ್ಳುವುದು ಇಂದು ಸ್ವಭಾವಜನ್ಯವಾಗಿ ಬಿಟ್ಟಿದೆ.

ಲಿಂಗಾಯತರು (ಅಥವಾ ವೀರಶೈವರು) ಹಿಂದುಗಳೇ ಅಲ್ಲವೇ ಎಂಬ ಬಗ್ಗೆ ದ್ವಂದ್ವ ಅಭಿಪ್ರಾಯಗಳಿವೆ. ಕೆಲವರು ಹೌದು ಎಂದು, ಕೆಲವರು ಅಲ್ಲವೆಂದು ವಾದಿಸುತ್ತಾರೆ.

ಯಾರನ್ನೇ ಆಗಲಿ ಹಿಂದು-ಅಹಿಂದು, ಭಾರತೀಯ-ಅಭಾರತೀಯ ಎಂದು ನಿರ್ಧರಿಸುವ ಮುನ್ನ ಆ ಶಬ್ದಗಳ ವ್ಯಾಖ್ಯಾನ ಬಹು ಮುಖ್ಯ. ಭಾರತದ ಸಂವಿಧಾನಕ್ಕೆ ಬದ್ಧರಾಗಿ, ಅದರ ಧ್ವಜಕ್ಕೆ ಗೌರವ ನೀಡಿ, ರಾಷ್ಟ್ರಗೀತೆಯಲ್ಲಿ ಅನನ್ಯ ಶ್ರದ್ಧೆಯಿಟ್ಟು ನಡೆಯುವವರು ಭಾರತೀಯರು ಎಂದು ವ್ಯಾಖ್ಯಾನಿಸುತ್ತೇವೆ ಎಂದಿಟ್ಟುಕೊಳ್ಳೋಣ. ಆಗ ಈ ತತ್ತ್ವಗಳನ್ನೊಪ್ಪದವನು ನಿಜವಾದ ಭಾರತೀಯ ನಲ್ಲ.

ಹಿಂದುವಿನ ವ್ಯಾಖ್ಯಾನವೇನು ? ವೇದಗಳನ್ನೊಪ್ಪುವವನು ಹಿಂದು ವೆಂತಲೋ, ಗೋವನ್ನು ಪೂಜಿಸುವವನು ಹಿಂದುವೆಂತಲೋ, ಚತುರ್ವರ್ಣಗಳನ್ನು (ದೇವನಿರ್ಮಿತವೆಂದು) ನಂಬುವವನು ಹಿಂದುವೆಂತಲೋ, ಗಾಯತ್ರಿ ಮಂತ್ರವನ್ನು ಪಠಿಸುವವನು ಹಿಂದುವೆಂತಲೋ ವ್ಯಾಖ್ಯಾನಿಸಿದರೆ ಆಗ ಖಂಡಿತವಾಗಿಯೂ, ವೇದ ಧರ್ಮಾನುಯಾಯಿಗಳನ್ನು ಬಿಟ್ಟರೆ, ಬಾಕಿ ಧರ್ಮಗಳವರು-ಅಂದರೆ (ದ್ರಾವಿಡ), ಶೈವ, ಬೌದ್ಧ, ಜೈನ, ಲಿಂಗಾಯತ ಮತ್ತು ಸಿಖ್, ಯಾರೂ ಹಿಂದುಗಳಲ್ಲ. ಇಷ್ಟು ಮಾತ್ರವಲ್ಲ ಜನಿವಾರ ಧರಿಸಿದವನು ಅಥವಾ ಗಾಯತ್ರಿ ಮಂತ್ರವನ್ನು ಪಠಿಸು ವವನು ಹಿಂದು ಎಂದು ವ್ಯಾಖ್ಯಾನಿಸಿದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರ ಹೊರತಾಗಿ ಯಾರೂ ಹಿಂದುಗಳಲ್ಲ. ಶೂದ್ರರ ಸ್ಥಾನದಲ್ಲಿರಿಸಲ್ಪಟ್ಟವರು, ಅಸ್ಪೃಶ್ಯರೆಂದು ಕರೆಯಲ್ಪಟ್ಟವರು, ಸಮಸ್ತ ಸ್ತ್ರೀವರ್ಗ (ಬ್ರಾಹ್ಮಣ ಕ್ಷತ್ರಿಯ ವೈಶ್ಯರ ಸ್ತ್ರೀಯರನ್ನು ಹಿಡಿದು) ಎಲ್ಲರೂ ಅಹಿಂದುಗಳಾಗುವರು. ಆದ್ದರಿಂದ ಹಿಂದುತ್ವದ ವ್ಯಾಖ್ಯೆ ಅತ್ಯಂತ ಜಟಿಲವೂ, ಸೂಕ್ಷ್ಮವೂ ಇದೆ. ಹಿಂದುತ್ವದ ವ್ಯಾಖ್ಯೆಯನ್ನು ನಿರ್ಣಯಿಸದೆ ಯಾರು ಹಿಂದುಗಳು, ಯಾರು ಹಿಂದುಗಳಲ್ಲ ಎಂದು ನಿರ್ಧರಿಸುವುದು ಕಷ್ಟಸಾಧ್ಯ.

ಹಿಂದು ಎನ್ನುವುದು ಒಂದು ಧರ್ಮವಲ್ಲ, ಒಂದು ಮತ ಪಂಥವಲ್ಲ. ಒಂದು ಧರ್ಮವೆಂದರೆ ಅದಕ್ಕೆ ಒಂದೇ ಒಂದು ತತ್ತ್ವಜ್ಞಾನ (metaphysics) ಸಾಧನೆ, ದರ್ಶನ, ಸಂಸ್ಕಾರ ಪದ್ಧತಿ ಇದ್ದಿರಬೇಕಾಗುತ್ತದೆ. ಈ ಹೊತ್ತು ಹಿಂದುಗಳು ಎನ್ನಿಸಿಕೊಳ್ಳುವವರ ಜೀವನ ವಿಧಾನ ನೋಡಿದರೆ ಆ ಏಕರೂಪತೆ ಇಲ್ಲ; ಭಿನ್ನತೆ ಮತ್ತು ವೈವಿಧ್ಯತೆ ಇದೆ. ಆಚರಣೆಯಲ್ಲಿ ಹಲವರು ತಮ್ಮ ತಮ್ಮ ಧರ್ಮ (religions) ಗಳನ್ನು ಪಾಲಿಸುವುದನ್ನು ಕಾಣುತ್ತೇವೆ. ಇಂಥ ವೈವಿಧ್ಯತೆಯ ನಡುವೆಯು ಒಂದು ಏಕತಾನತೆ, ಸಾಮ್ಯವಿರುವುದನ್ನು ಕಾಣುತ್ತೇವೆ. 'ಹಿಂದೂ' ತತ್ತ್ವವು ಒಂದು ನೆಲದೊಡನೆ ಬೆಸೆದುಕೊಂಡು, ಹೆಣೆದುಕೊಂಡು ಸಾಗಿ ಬಂದಿರುವ ಸಂಸ್ಕೃತಿಯನ್ನು, ಪರಂಪರೆಯನ್ನು ಪ್ರತಿನಿಧಿಸುತ್ತದೆ. ವೇದ ಪೂರ್ವಕಾಲದ ಶೈವ

ಸಂಸ್ಕೃತಿಯಾಗಿ ಮೈತಳೆದ ಸಿಂಧೂ ಬಯಲ ಸಾಂಸ್ಕೃತಿಕ ಪರಂಪರೆ ಹಿಂದೂವಾಹಿನಿಯ ಉಗಮ ಬಿಂದು. ವಿಶ್ವದ ಮೊದಲ ಯೋಗಿರಾಜ ಶಿವನ ಆರಾಧನೆಯೊಡನೆ ಮೈದಳೆದ ಹಿಂದೂ ಸಂಸ್ಕೃತಿ, ಮೂಲತಃ ದ್ರವಿಡ ಜನಾಂಗದ ಕೊಡುಗೆಯಾದರೂ ನಂತರ ಬಂದ ಆರ್ಯ ಬಂಧುಗಳನ್ನು ಸ್ವಾಗತಿಸಿತು. ಉಭಯವಾಹಿನಿಗಳ ವಿವಿಧ ಅಂಶಗಳು ಪರಸ್ಪರ ಸಂಗಮಿಸಿ, 'ಹಿಂದೂ' ಪರಂಪರೆ ಬೃಹತ್‌ರೂಪದೊಡನೆ ಹರಿಯತೊಡಗಿತು. ತಾತ್ತ್ವಿಕ ಹಿನ್ನೆಲೆಗಿಂತ ಹೆಚ್ಚಾಗಿ ಭೌಗೋಲಿಕ ಹಿನ್ನೆಲೆಯಲ್ಲಿ ವಿಸ್ತೀರ್ಣಗೊಂಡು ಜಗತ್ತಿನ ಬಹುಭಾಗವನ್ನೂ ವ್ಯಾಪಿಸಿತು.

ಈ ಹಿಂದೂ ಸಾಂಸ್ಕೃತಿಕ ಪರಂಪರೆಯಲ್ಲಿ ಬೆಳೆದು ಬಂದ ಅಥವಾ ನುಸುಳಿದ ಹಲವಾರು ಲೋಪದೋಷಗಳನ್ನು ಪ್ರತಿಭಟಿಸಿ ಬುದ್ಧ, ಮಹಾವೀರ, ಬಸವೇಶ್ವರ, ನಾನಕ, ದಯಾನಂದ ಸರಸ್ವತಿ ಮುಂತಾದ ಹಲವು ಪ್ರವಾದಿಗಳು ಸುಧಾರಣಾತ್ಮಕ ಧರ್ಮಗಳನ್ನು (religions) ಸ್ಥಾಪಿಸಿದರು, ಜಾತ್ಯಾತೀತ ಸಂವಿಧಾನಗಳನ್ನು ನೀಡಲೆಳಸಿ ದರು. ಸಾಂಪ್ರದಾಯಿಕ ಆಚರಣೆಯ ವಿರುದ್ಧ ಅಥವಾ ಸಾಂಪ್ರದಾಯಿಕ ಧರ್ಮದ ಕೆಲವು ಆಚರಣೆಯ ವಿರುದ್ಧ ಅವರು ಹೋರಾಡಿದರೇ ವಿನಾ, ಹಿಂದೂ ಪರಂಪರೆಯ (heritage) ಹೊರಗೆ ಹೋಗಲು ಅವರೇನು ಎಳಸಲಿಲ್ಲ ಎಂದು ನಮ್ಮ ಸ್ಪಷ್ಟ ಅಭಿಪ್ರಾಯ. ವಿಶ್ವಗುರು ಬಸವಣ್ಣನವರು ವೇದಗಳ ಕರ್ಮಕಾಂಡ ಭಾಗವನ್ನು, ಯಜ್ಞ-ಯಾಗಾದಿಗಳನ್ನು, ಪುರಾಣಗಳ ಬಹುದೇವೋಪಾಸನೆಯ ಕಲ್ಪನೆಯನ್ನು ಖಂಡಿಸಿದರೂ, 'ಕೂಡಲ ಸಂಗಮದೇವನಲ್ಲದೆ ಇಲ್ಲವೆಂದಿತ್ತು ವೇದ' ಎಂಬಲ್ಲಿ ವೇದದ ಒಂದು ತತ್ತ್ವವನ್ನು ಆಧಾರವಾಗಿ ಉಲ್ಲೇಖಿಸುತ್ತಾರೆ, "ಓಂ ನಮಃ ಶಿವಾಯ" ಷಡಕ್ಷರಿ ಮಂತ್ರದ ಪಠಣೆ, ಓಂಕಾರವು ಲಿಂಗಾಯತ ಧರ್ಮ ಸಾಹಿತ್ಯದಲ್ಲಿ ಹಾಸು ಹೊಕ್ಕಾಗಿ ಹೆಣೆಯಲ್ಪಟ್ಟಿರುವುದು, ಅವರು ಹಿಂದೂ ಕಕ್ಷೆ (Arena) ಬಿಟ್ಟು ಹೋಗಲು ಇಚ್ಛಿಸಲಿಲ್ಲ ಎಂಬುದನ್ನು ಸಿದ್ಧಪಡಿಸುತ್ತದೆ. ಬೆಂಗಳೂರಿನಲ್ಲಿ ವಾಸಿಸುವ ಓರ್ವನು ತನ್ನ ಅಣ್ಣನ ಸ್ವಾರ್ಥವನ್ನೋ ಮೂಢನಂಬಿಕೆಯನ್ನೋ ಒಪ್ಪದೆ ಪ್ರತಿಭಟಿಸಿ ಪಿತ್ರಾರ್ಜಿತ ಮನೆಯನ್ನು ತೊರೆದು ಹೋಗಿ ಹೊಸ ಮನೆಯೊಂದನ್ನು ಚೆಂದವಾಗಿ ಕಟ್ಟಿದ ಮಾತ್ರಕ್ಕೆ ಅವನು ಬೆಂಗಳೂರನ್ನಾಗಲೀ, ಕರ್ನಾಟಕವನ್ನಾಗಲೀ ತೊರೆದ ನೆಂದು ಅರ್ಥವಲ್ಲ.

ಹಿಂದೂ ತತ್ತ್ವ ಒಂದು ಜನಾಂಗವಾಚಕ ಶಬ್ದ. ಅಮೆರಿಕಾದ ಸಂಯುಕ್ತ ಸಂಸ್ಥಾನ ಎಂದಂತೆ, ಹಲವಾರು ಧರ್ಮಗಳನ್ನು ಪಾಲಿಸುತ್ತಿರುವ ವಿವಿಧ ಅನು ಯಾಯಿಗಳ ಒಂದು ಒಕ್ಕೂಟ (Federation or congregation) ಇದು. "ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು" ಎಂದಾಗ ಅದರಲ್ಲಿ ಬೇರೆ ಬೇರೆ ವಿಷಯ

ಮಾತೃಹರಕೆ

ಗಳನ್ನು ಅಭ್ಯಸಿಸುವ, ತಮ್ಮವೇ ಆದ ಪಠ್ಯಪುಸ್ತಕಗಳನ್ನು ಹೊಂದಿರುವ ವಿವಿಧ ವಿದ್ಯಾರ್ಥಿಗಳು ಇರುವಂತೆ, ಹಿಂದೂ ಕಕ್ಷೆಯಲ್ಲಿ ಬರುವ ಹಿಂದುಗಳಲ್ಲಿ ವಿವಿಧ ಧರ್ಮೀಯರುಂಟು. ಅವರಿಗೆ ತಮ್ಮವೇ ಆದ ಧರ್ಮಗ್ರಂಥಗಳುಂಟು ; ತಮ್ಮವರೇ ಆದ ಪ್ರವಾದಿಗಳುಂಟು, ಆದರೆ ಯಾವುದೋ ಒಂದು ಬೆಸುಗೆ, ಸಂಸ್ಕೃತಿಯ ರೂಪದಲ್ಲೋ ಪರಂಪರೆಯ ರೂಪದಲ್ಲೋ ಬೆಸೆದಿರುವುದರಿಂದ ಎಲ್ಲರಲ್ಲೂ ಸಾಮರಸ್ಯ ವಿದೆ. ಕೆಲವು ತತ್ತ್ವಗಳಲ್ಲಿ ಎಲ್ಲರಿಗೂ ನಂಬಿಗೆ ಇದೆ. 1. ಓಂಕಾರವನ್ನು ಉಚ್ಚರಿಸುವುದರಲ್ಲಿ 2. ಆತ್ಮ ತತ್ತ್ವವನ್ನು 3. ಕರ್ಮ ಸಿದ್ಧಾಂತವನ್ನು 4. ಮುಕ್ತಿ ತತ್ವವನ್ನು ನಂಬುವುದರಲ್ಲಿ 5. ಯೋಗಮಾರ್ಗ (ಅದಾವುದೇ ಇರಲಿ)ವನ್ನು ಅನುಸರಿಸುವುದರಲ್ಲಿ 6. ಗುರುತತ್ತ್ವವನ್ನು ಮನ್ನಿಸುವುದರಲ್ಲಿ ಈ ಎಲ್ಲ ಧರ್ಮೀಯರಿಗೂ ನಂಬಿಕೆ ಇದೆ. ಆದ್ದರಿಂದ ವೇದ ಧರ್ಮ ಅಥವಾ ಸನಾತನ ಧರ್ಮವೇ ಹಿಂದೂ ಧರ್ಮ ಎಂದು ಅವಸರದಿಂದ ನಿರ್ಧರಿಸಿ, ನಾವು ಹಿಂದುಗಳಲ್ಲ ಎಂದು ಘೋಷಿಸಿಕೊಳ್ಳುವ ಪ್ರಯತ್ನವನ್ನು ಶೈವ (ದ್ರಾವಿಡ), ಜೈನ, ಬೌದ್ಧ, ಲಿಂಗಾಯತ, ಸಿಖ್ಖರು ಮಾಡದೆ, ತಾವೂ ಆ ಸಾಂಸ್ಕೃತಿಕ ಪರಂಪರೆಯವರೇ ಎಂಬುದನ್ನು ಅರಿಯ ಬೇಕು, ಮತ್ತು ಈ, ಐದು ಸ್ವತಂತ್ರ ಧರ್ಮಗಳು, ತಮ್ಮ ಸಂವಿಧಾನಕ್ಕೆ ಬದ್ಧವಾಗಿ, ತಮ್ಮ ವೈಶಿಷ್ಟ್ಯ (individuality) ಕಳೆದುಕೊಳ್ಳದೆಯೇ ಹಿಂದೂ ಕಕ್ಷೆಯಲ್ಲಿ ಇರಲಿಕ್ಕೆ ಸಾಧ್ಯವಿದೆ. ಒಂದು ಸುಂದರ ಹಣ್ಣಿನ ತೋಟದಲ್ಲಿ ಎಲ್ಲ ಗಿಡಗಳು ತಮ್ಮ ವೈಶಿಷ್ಟ್ಯ ಉಳಿಸಿಕೊಂಡು ತೋಟದ ಅಂದ ಹೆಚ್ಚಿಸಲು ಬರುವಂತೆ ಈ ಐದು ಧರ್ಮಗಳು ಹಿಂದೂ ಕಕ್ಷೆಯಲ್ಲಿ ಉಳಿದರೇ ಸುರಕ್ಷಿತ. ಈ ದೇಶದ ಮತ್ತು ಹಿಂದೂ ಜನಾಂಗದ ಭವಿಷ್ಯ ದೃಷ್ಟಿಯಿಂದ ಸಂಘಟನೆ ಅವಶ್ಯಕ. ತಪ್ಪು ತಪ್ಪು ವ್ಯಾಖ್ಯೆ ನೀಡಿ ಹಿಂದೂ ಸಂಖ್ಯೆ ಯನ್ನು ಕುಗ್ಗಿಸುವುದಕ್ಕಿಂತ ವಿಶಾಲ ಕಕ್ಷೆಯೊಳಗೆ ಇದ್ದು ಬಲಗೊಳ್ಳುವುದು ಒಳ್ಳೆಯದು.

ಸರ್ವಸಮನ್ವಯ ದೃಷ್ಟಿಕೋನದ ಹಿಂದೂ ಪರಂಪರೆಯಲ್ಲಿ ಬರುವವರು ಎಲ್ಲ ಮಹಾತ್ಮರನ್ನು ಗೌರವಿಸುವದನ್ನು ಅಳವಡಿಸಿಕೊಳ್ಳಬೇಕು. 1) ತನ್ನ ಧರ್ಮ ಗುರುವನ್ನು ತನ್ನ ಪಿತನೆಂದು ಭಾವಿಸಿದರೆ ಅವನಿಗಿಂತಲೂ ಹಿಂದಿನ ಸಂತರನ್ನು ತನ್ನ ದೊಡ್ಡಪ್ಪರಂತೆ, ನಂತರದ ಸಂತರನ್ನು ಚಿಕ್ಕಪ್ಪರಂತೆ ಕಾಣಬೇಕು. ಬಸವಣ್ಣ ನವರನ್ನು ತನ್ನ ಧರ್ಮಪಿತ ಎಂದು ಭಾವಿಸಿದವನು ಶಿವ, ಶಂಕರಾಚಾರ್ಯ, ಬುದ್ಧ, ಮಹಾವೀರರಂತಹ ಹಿಂದಿನ ಸಂತರನ್ನು ದೊಡ್ಡಪ್ಪಂದಿರೆಂದು, ನಂತರದ ನಾನಕ, ವಿವೇಕಾನಂದ ಅರವಿಂದರನ್ನು ಚಿಕ್ಕಪ್ಪರೆಂದು ಭಾವಿಸಬೇಕು. ತಂದೆ ಒಬ್ಬನೆ, ದೊಡ್ಡಪ್ಪ-ಚಿಕ್ಕಪ್ಪಂದಿರು ಹಲವರಿರಬಹುದು, ಶಂಕರಾಚಾರ್ಯರನ್ನು ತನ್ನ ಧರ್ಮ

ಪಿತರೆಂದು ಭಾವಿಸುವವರು ಬಸವಣ್ಣ, ರಾಮಾನುಜ, ಅರವಿಂದರನ್ನು ತಮ್ಮ ಚಿಕ್ಕಪ್ಪಂದಿರೆಂದು, ಶಿವ, ಬುದ್ಧ, ಮಹಾವೀರರನ್ನು ದೊಡ್ಡಪ್ಪಂದಿರೆಂದು ಭಾವಿಸಬೇಕು. 2) ತನ್ನ ಧರ್ಮಗ್ರಂಥಗಳನ್ನು ಪಠ್ಯಪುಸ್ತಕಗಳಂತೆ ಭಾವಿಸಿದರೆ ಇತರರ ಧರ್ಮ ಗ್ರಂಥಗಳನ್ನು ಜ್ಞಾನಗ್ರಂಥಗಳೆಂದು ಭಾವಿಸಬೇಕು. ವೇದೋಪನಿಷತ್ತು ಭಗವದ್ಗೀತೆ ಗಳನ್ನು ತನ್ನ ಧರ್ಮಶಾಸ್ತ್ರ(ಪಠ್ಯಪುಸ್ತಕ)ವೆಂದು ಭಾವಿಸಿದ ಸನಾತನ ಧರ್ಮಿಯು, ಬಸವಗೀತೆ, ಬುದ್ಧವಾಣಿಯನ್ನು ಜ್ಞಾನಗ್ರಂಥವೆಂದು (Reference book) ಭಾವಿಸಬೇಕು. ಬಸವಗೀತೆಯನ್ನು ತನ್ನ ಪಠ್ಯಪುಸ್ತಕ ಎಂದು ಭಾವಿಸಿದವನು ತ್ರಿಪಿಟಕ ಭಗವದ್ಗೀತೆಗಳನ್ನು ಜ್ಞಾನಗ್ರಂಥಗಳೆಂದು ಗೌರವಿಸಬೇಕು. 3) ತನಗೆ ದೀಕ್ಷೆಕೊಟ್ಟ ಗುರುವನ್ನು ದೀಕ್ಷಾಗುರುವೆಂದು ಮನ್ನಿಸಿದರೆ, ಜ್ಞಾನ ನೀಡುವ ಯಾವುದೇ ಹಿಂದೂ ಸಂತನನ್ನು ಜ್ಞಾನಗುರುವೆಂದು ಮನ್ನಿಸಬೇಕು. ನನ್ನಿಂದ ದೀಕ್ಷಾನುಗ್ರಹ ಪಡೆದವರು ಅನ್ಯ ಧರ್ಮಗುರುಗಳನ್ನು ಅಂದರೆ ಶ್ರೀ ಜ.ಚ.ನಿ ಯವರನ್ನಾಗಲೀ, ಸುತ್ತೂರು ಶ್ರೀಗಳನ್ನಾಗಲೀ ಜ್ಞಾನಗುರುಗಳೆಂದು ಗೌರವಿಸಬೇಕು. ಅವರುಗಳಿಂದ ದೀಕ್ಷಾನುಗ್ರಹ ಪಡೆದವರು ನಮ್ಮನ್ನಾಗಲೀ, ಪೇಜಾವರ ಶ್ರೀಗಳನ್ನಾ ಗಲೀ, ಇನ್ನಾರೇ ಯಾವುದೇ ಧರ್ಮದ ಗುರುಗಳನ್ನಾಗಲೀ ಜ್ಞಾನಗುರುಗಳೆಂದು ಗೌರವಿಸಬೇಕು. ಈ ಸೌಹಾರ್ದತೆ ಹಿಂದೂ ಸಮಾಜಕ್ಕೆ ತೀರಾ ಅವಶ್ಯಕ. ಹಿಂದು ಸಂಸ್ಕೃತಿಯು ಸಿಂಧುವಿನಂತಹ ಅಂದರೆ ಸಮುದ್ರದಂತಹ ಸಂಸ್ಕೃತಿ. ಪರಸ್ಪರ ಪ್ರೇಮ ಸಹಿಷ್ಣುತೆಗೆ ಹೆಸರಾದುದು. ಇದರಿಂದ ಇತಿಹಾಸದಲ್ಲಿ ಸಾಕಷ್ಟು ಕಷ್ಟವನ್ನು ಅನುಭವಿ ಸಿದ್ದರೂ ಚಿಂತೆಯಿಲ್ಲ ಹೆಮ್ಮೆ ಪಡುವ ಮನೋಭಾವವಿದು. ಹೀಗೆ ಒಂದು ಭವ್ಯ ಪರಂಪರೆಯ ಅವಿಭಾಜ್ಯ ಅಂಗವಾಗಿ ಬೆಳೆದು ಬಂದ ಅಸಂಖ್ಯಾತ ಧರ್ಮ ಮತ ಪಂಥ ಗಳವರು, ಅಂತೆಯೇ ಕೂಡಿ ಸಾಗುವುದು ಒಳ್ಳೆಯದು. ಹಿಂದೂ ಜನಾಂಗದ ಭವ್ಯ ಒಕ್ಕೂಟದಲ್ಲಿ ವೇದಪೂರ್ವದ ಶೈವ ಧರ್ಮ, ವೇದೋಪನಿಷತ್ತುಗಳ ಸಾರವಾದ ವೇದಧರ್ಮ, ಬುದ್ಧನಿಂದ ಉಗಮಗೊಂಡ ಬೌದ್ಧಧರ್ಮ, ಋಷಭ-ಮಹಾವೀರರ ಬೋಧೆಯ ಸಾರವಾದ ಜೈನಧರ್ಮ, ಬಸವಣ್ಣನವರಿಂದ ಜನ್ಮತಳೆದ ಲಿಂಗಾಯತ ಧರ್ಮ, ನಾನಕನಿಂದ ಮೂಡಿಬಂದ ಸಿಖ್ ಧರ್ಮ, ಮತ್ತು ಹಿಂದೂ ಸಮಾಜದ ಕೆಲವೊಂದು ಲೋಪದೋಷಗಳ ಸುಧಾರಣೆಗೆ ಯತ್ನಿಸಿದ ಆರ್ಯ ಸಮಾಜ, ಬ್ರಹ್ಮ ಸಮಾಜ ಎಲ್ಲವೂ ಶೋಭಿಸುತ್ತಿವೆ. ಯಾವ ಧರ್ಮಗಳ ಮೂಲಪುರುಷರು ಭಾರತದಲ್ಲಿ ಹುಟ್ಟಿದ್ದಾರೋ ಅವು ಹಿಂದೂ ದರ್ಮಗಳು ಎಂಬ ಸಾವರ್ಕರರ ವ್ಯಾಖ್ಯಾನವನ್ನು, ಭಾರತದಲ್ಲಿ ಉದಿಸಿದ ಸನಾತನವಾದ ನೈತಿಕ ಮತ್ತು ಅಧ್ಯಾತ್ಮಿಕ ಜೀವನ ಸಿದ್ಧಾಂತ ಗಳಲ್ಲಿ ಶ್ರದ್ಧೆ ಇಡುವವರೆಲ್ಲ ಹಿಂದುಗಳು ಎಂಬ ವಿಶ್ವ ಹಿಂದೂ ಪರಿಷತ್ ವ್ಯಾಖ್ಯಾನ ವನ್ನು, 'ಓಂಕಾರವನ್ನು ನಂಬಿ ಮಂತ್ರದಲ್ಲಿ ಬಳಸಿ, ಕೆಲವು ಮೂಲಭೂತ ತತ್ತ್ವ

ಗಳಲ್ಲಿ ಶ್ರದ್ಧೆ ಇಡುವವರು ಹಿಂದುಗಳು' ಎಂಬ ನಮ್ಮ ವ್ಯಾಖ್ಯಾನವನ್ನು ನಂಬಿದ್ದೇ ಆದರೆ ಹಿಂದುಗಳ ಒಕ್ಕೂಟ ಸಾಧ್ಯವಿದೆ.

"ಓರ್ವ ವ್ಯಕ್ತಿ ನಾನು ಹಿಂದುವು ಹೌದು, ಲಿಂಗಾಯತ(ವೀರಶೈವ)ನೂ ಹೌದು ಎಂದು ಹೇಳಿಕೊಳ್ಳುವುದು ಹಾಸ್ಯಾಸ್ಪದ, ವಿರೋದಾಭಾಸ" ಎಂಬೊಂದು ಹೇಳಿಕೆಯನ್ನು ಓರ್ವ ಮಹನೀಯರು ಮಾಡಿದ್ದನ್ನು ಪತ್ರಿಕೆಯಲ್ಲಿ ನೋಡಿದೆ. ಹಾಗೇನಿಲ್ಲ. ಓರ್ವ ಭಾರತೀಯನು ಹೌದು. ಕನ್ನಡಿಗನು ಹೌದು, ಹಿಂದೂವೂ ಹೌದು, ಲಿಂಗಾಯತನೂ ಹೌದು. ಭಾರತೀಯ ಪ್ರಜೆಯಾದ ಕಾರಣ ಭಾರತೀಯ; ಕನ್ನಡ ನಾಡಿನ ನುಡಿಯನ್ನಾಡುವ ಕಾರಣ ಕನ್ನಡಿಗ. ಭಾರತದಲ್ಲಿ ಉಗಮುಗೊಂಡ ಒಂದು ಧಾರ್ಮಿಕ ಸಾಂಸ್ಕೃತಿಕ ಪರಂಪರೆಯ (religiou cultural heritage) ಅಂಗವಾದ ಕಾರಣ ಹಿಂದುವೂ ಹೌದು, ಲಿಂಗಧಾರಣೆ ಮಾಡಿಕೊಂಡು ಬಸವಣ್ಣನ ಧರ್ಮಾನುಯಾಯಿಯಾದ ಕಾರಣ ಲಿಂಗಾಯತನೂ ಹೌದು. ಒಂದಕ್ಕೊಂದು ವಿರೋಧಾಭಾಸವಲ್ಲ. "ನಾನು ವಿಶ್ವವಿದ್ಯಾಲಯದ ವಿದ್ಯಾರ್ಥಿ; ನನ್ನದು ತತ್ತ್ವಜ್ಞಾನ ವಿಭಾಗ" ಎಂದರೆ ಒಂದಕ್ಕೊಂದು ವಿರೋಧಾಭಾಸ ಹೇಗಲ್ಲವೋ, ಹಾಗೆಯೇ "ನಾನು ಹಿಂದು ಪರಂಪರೆಯವನು, ನಾನು ಲಿಂಗಾಯತ ಧರ್ಮಿ ಎಂಬುದಾಗಲೀ" "ನಾನು ಹಿಂದುವು, ನಾನು ವೈದಿಕ" ಎಂಬುದಾಗಲೀ ವಿರೋಧಾಭಾಸವಲ್ಲ.

ಹಾಗಾದರೆ ಜನಗಣತಿಯಲ್ಲಿ ಧರ್ಮಕಾಲಮ್ಮಿನಲ್ಲಿ ಲಿಂಗಾಯತ (ವೀರಶೈವ) ಬರೆಸುವುದು ತಪ್ಪೇ ? ತಪ್ಪೇನೂ ಅಲ್ಲ. ಇದೊಂದು ಸ್ವತಂತ್ರ ಧರ್ಮವಾದ ಕಾರಣ ಧರ್ಮ ಎಂಬಲ್ಲಿ ಲಿಂಗಾಯತ (ವೀರಶೈವ) ಎಂದೂ, ಜಾತಿ ಎಂಬಲ್ಲಿ ಇಲ್ಲವೆಂತಲೂ ಸರಿಯಾಗಿ ಬರೆಸಬೇಕು. ಅನೇಕರು ತಪ್ಪು ತಿಳಿದಂತೆ ಹಿಂದು ಒಂದು ಧರ್ಮ ಲಿಂಗಾಯತ ಒಂದು ಜಾತಿ ಅಲ್ಲ. ಹಿಂದುತ್ವವು ಒಂದು ಸಾಂಸ್ಕೃತಿಕ ಪರಂಪರೆ; ಲಿಂಗಾಯತವು ಅದರಲ್ಲಿ ಬರುವ ಒಂದು ಸ್ವತಂತ್ರ ಧರ್ಮ. ಲಿಂಗಾಯತನಿಗೆ ಜಾತಿಗಳು ತಾತ್ತ್ವಿಕವಾಗಿ ಇಲ್ಲ. ಕನ್ನಡಿಗ ಎಂದು ಬರೆದರೆ ಭಾರತೀಯ ಎಂಬುದು ಎಷ್ಟು ಸ್ವತಃ ಸಿದ್ಧವೋ ಹಾಗೆ ಲಿಂಗಾಯತ ಎಂದು ಬರೆದರೆ, ಅವನು ಹಿಂದೂ ಎಂಬುದೂ ಸ್ವತಃ ಸಿದ್ಧ. ಆದ್ದರಿಂದ ಜನಗಣತಿಯಲ್ಲಿ ಸ್ವತಂತ್ರವಾಗಿ ಬರೆಸಿದರೆ ತಪ್ಪೇನಿಲ್ಲ.

ಹೀಗೇ ವಿಶಾಲವಾಗಿ ಹಿಂದೂ ವ್ಯಾಖ್ಯೆಯನ್ನು ರೂಪಿಸಿ, ಭಾರತ ಜನ್ಯ ಧರ್ಮಗಳೆಲ್ಲ ತಂತಮ್ಮ ಸಮಾಜಗಳೊಡನೆ ಒಂದಾಗುವುದೇ ಶ್ರೇಯಸ್ಕರ. ಇಂಬಿಟ್ಟುಕೊಳ್ಳುವುದು ಧರ್ಮದ ಗುಣವೇ ವಿನಾ ಹೊರಹಾಕುವುದಲ್ಲ ಎಂಬುದನ್ನು ಧಾರ್ಮಿಕರು ಅರಿಯಬೇಕು. ನಾವೆಲ್ಲರೂ ಹಿಂದುಗಳು, ಹಿಂದುಗಳೆಲ್ಲ ಬಂಧುಗಳು ಎಂಬ ಘೋಷಣೆ ಎಲ್ಲರ ಹೃದಯದಲ್ಲಿ ಮೊಳಗಲಿ.

★

ಸಮಸ್ಯೆ? ಸಮಾಧಾನ!

ಹುಚ್ಚಪ್ಪ, ಹೆಡ್‌ಮಾಸ್ಟರು, ದಾವಣಗೆರೆ

★ ನಮ್ಮಲ್ಲೊಂದು ಉಪಾಚಾರ್ಯರ ಸಮ್ಮೇಳನ ನಡೆಯಿತು. ಅದರಲ್ಲಿ ತಮ್ಮ ಸ್ವಮತ ಮಂಡನೆಗಿಂತ, ಪರಮತಖಂಡನೆಯೇ ಆಯಿತು. ಆಗ ದೊಡ್ಡ ದೊಡ್ಡ ಸ್ವಾಮಿಗಳು ಅನ್ಯ ಧಾರ್ಮಿಕ ನೇತಾರರನ್ನು ಅವಳು-ಇವಳು, ಅವನು-ಇವನು ಎಂದು ಸಂಭೋದಿಸಿ ಟೀಕಿಸಿದರು. ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು ?

● ಯುದ್ಧ ಕಣದಲ್ಲಿ ಪೆಟ್ಟುಗಳು ಇಳಿದಾಗ, ಸೋಲು ಹತ್ತಿರವಾಗುತ್ತಿದ್ದಂತೆಯೇ ಹೋರಾಡುವುದನ್ನು ಬಿಟ್ಟು ಕಚ್ಚುವುದಕ್ಕೆ, ಬೈಯುವುದಕ್ಕೆ ತೊಡಗುವನು-ಸುಸ್ತಾದವನು. ಪರಮತ (ಅಂದರೆ ಅನ್ಯರ ಅಭಿಪ್ರಾಯ)ವನ್ನು ಆಕ್ರೋಶದಿಂದ ಟೀಕಿಸುವವರದೂ ಇದೇ ಪಾಡು. ಕೆಲವರ ನಾಲಿಗೆಗೆ ಅಷ್ಟೊಂದು ಸಂಸ್ಕಾರ ಆಗಿರದು. ನಾಲಿಗೆಯ ವರ್ಣವನ್ನು ನೋಡಿ ಉದರದೊಳಗಣ ದೋಷವನ್ನು ವೈದ್ಯರು ಗುರುತಿಸುವಂತೆ, ವ್ಯಕ್ತಿಗಳ ನಾಲಿಗೆಯಲ್ಲಿ ಬರುವ ಮಾತುಗಳ ಮೇಲೆ ಅವರೊಳಗಣ ವ್ಯಕ್ತಿತ್ವವನ್ನು ಗುರುತಿಸಬಹುದು.

★ ಈ ಧರ್ಮದ ಕೆಲವು ಸೂತ್ರಗಳೆಂದು ಪ್ರಕಟಿಸಿದ್ದರಲ್ಲಿ ಒಂದೇ ಜಾತಿಯವರೇ ಗುರುತ್ವಕ್ಕೆ ಅರ್ಹರೆಂದು ಬರೆಯಲಾಗಿತ್ತು. ಇದು ಸರಿಯೇ ?

● "ನೆಲನೊಂದೆ ಹೊಲಗೇರಿ ಶಿವಾಲಯಕ್ಕೆ, ಫಲವೊಂದೆ ಷಡುದರ್ಶನ ಮುಕ್ತಿಗೆ, ನಿಲುವೊಂದೆ ಕೂಡಲಸಂಗಮದೇವಾ ನಿಮ್ಮನರಿದವಂಗೆ." ಎಂಬ ವಚನವನ್ನು ಆಡಿ, ವ್ಯಾಖ್ಯಾನಿಸಿ, ಮತ್ತೆ ಒಂದೇ ಜಾತಿಯವರಿಗೇ ಗುರುತ್ವ ಎಂದು ಪ್ರತಿಪಾದಿಸುವ ವಿರೋಧಾಭಾಸತೆ ಬಸವಣ್ಣನವರ ಬೋಧೆಯ ವಿಡಂಬನೆಯಲ್ಲದೆ ಇನ್ನೇನು ? ಇಂಥದರಿಂದ ಜನರಲ್ಲಿ ಗೊಂದಲ ಉಂಟಾಗುತ್ತದೆ. ವಿಚಾರವಾದಿಗಳಲ್ಲಿ ಧರ್ಮ-ಮತಗಳ ಬಗ್ಗೆ ತಿರಸ್ಕಾರ ಬೆಳೆಯುತ್ತದೆ.

★ ಕಳೆದ ವರ್ಷ ಈ ದಿವಸಗಳಲ್ಲಿ ತಾವು ನಮ್ಮೂರಲ್ಲಿ ಪ್ರವಚನ ಮಾಡಿ, ಜನರ ಹೃತ್ಪೂರ್ವಕ ಭಕ್ತಿಯೊಡನೆ ವಿಶ್ವಕಲ್ಯಾಣ ಮಿಶನ್‌ಗೆ ಧನ ಸಹಾಯ ಪಡೆದು

ಹೋದಿರಿ. ಆದರ ಬಗ್ಗೆ ಅಸಹನೀಯವಾಗಿ ಖಂಡಿಸಿ, ಕೊಟ್ಟವರೆಲ್ಲ ಕುರಿಗಳು ಎಂಬಂತೆ ಓರ್ವ ಹಿರಿಯ ನೇತಾರರು, ಹಿರಿಯ ಸ್ವಾಮಿಗಳು ಮಾತನಾಡಿದರು. ಈ ಬಗ್ಗೆ ನಿಮ್ಮ ಅಭಿಪ್ರಾಯವೇನು ?

● ನನಗೆ ಕೇವಲ ಮರುಕವಿದೆ. ಏಕೆಂದರೆ ನಿಮ್ಮಂತಹ ಅಸಂಖ್ಯಾತ ಸಹೃದಯ ಬುದ್ಧಿ ಜೀವಿಗಳನ್ನು ಕುರಿಗಳೆಂದು ಅಲ್ಲಗಳೆದು ನಿಮ್ಮನ್ನು ಕೆರಳಿಸಿ, ಅವರ ಸಮಯವನ್ನು ವ್ಯಯಿಸುವ ಬದಲು ನೇರವಾಗಿ ತತ್ತ್ವಜ್ಞಾನವನ್ನು ಹೇಳಿ ಕುರಿಗಳನ್ನು ಶಿವನ ಕರಿಗಳನ್ನಾಗಿ ಮಾಡಲು ಅದೇ ಸಮಯವನ್ನು ವಿನಿಯೋಗಿಸಿದ್ದರೆ ಅವರೂ ಧನ, ಕೀರ್ತಿ, ಭಕ್ತಿ ಎಲ್ಲವನ್ನೂ ಪಡೆದುಕೊಳ್ಳ ಬಹುದಿತ್ತಲ್ಲ. ಅಯ್ಯೋ ಪಾಪ! ಇಂಥ ಪ್ರಸಂಗವನ್ನು ಗಮನಿಸಿಯೇ ಬಸವಣ್ಣನವರು ಹೇಳುತ್ತಾರೆ: "ಲೇಸ ಕಂಡು ಮನ ಬಯಸಿ ಬಯಸಿ ಆಸೆ ಮಾಡಿದರಿಲ್ಲ ಕಂಡಯ್ಯ. ತಾಳೆಮರಕ್ಕೆ ಕೈಯನೀಡಿ ಮೇಲೆ ನೋಡಿ ಗೋಣುನೊಂದುದಯ್ಯ. ಕೂಡಲಸಂಗಮದೇವಾ ಕೇಳಯ್ಯ ನೀವೀವ ಕಾಲಕ್ಕಲ್ಲದಿಲ್ಲಯ್ಯ !"

ಸೋ. ದಾ. ವಿರುಪಾಕ್ಷಗೌಡ, ಲಿಪಿಕರು, ಹೊಸಪೇಟೆ

★ ಬಸವಣ್ಣನವರು ವೀರಶೈವ ಮತೋದ್ಧಾರಕರು ಎಂದರೆ ತಪ್ಪೇನು ? ಇದರಿಂದ ಸಾಮರಸ್ಯ ಸಾಧ್ಯವಾದೀತಲ್ಲವೆ ?

● ಇಲ್ಲಿ ತಪ್ಪು ಒಪ್ಪುಗಳ ಪ್ರಶ್ನೆ ಇಲ್ಲ. ಅವರು ಯಾವ ಮತವನ್ನು ಉದ್ಧರಿಸ ಹೋಗದೆ ಸ್ವತಂತ್ರವಾದ, ಪ್ರಗತಿಪರ ಧೋರಣೆಯುಳ್ಳ ಕ್ರಾಂತಿಕಾರಿ ಧರ್ಮ ವೊಂದನ್ನು ನೀಡಿದರು. ಅದರ ಸಂವಿಧಾನವೇ ವಚನ ಸಾಹಿತ್ಯ ; ಅದರ ಲಾಂಛನವೇ ಇಷ್ಟಲಿಂಗ. ಜಾತ್ಯತೀತ ಸಮಾಜ ರಚನೆಗೆ ಒಂದು ವಿಶೇಷ ಸಾಧನವಾಗಿ ಇಷ್ಟಲಿಂಗವು ಬಸವಣ್ಣನವರಿಂದ ರೂಪಿತವಾಯಿತು.

ಬಸವಣ್ಣನವರಲ್ಲದೆ ಇನ್ನಾರಾರೋ ಸ್ಥಾಪಕರು ಎಂದು ಪ್ರತಿಪಾದಿಸುವವರು, ತಮ್ಮ ಸ್ಥಾಪಕರಾರು ? ತಮ್ಮ ಸಾಹಿತ್ಯವೇನು ಎಂದು ಹೇಳುತ್ತಾ ಹೋದರಾಯಿತು. ತಮ್ಮದೊಂದು ಸಾಹಿತ್ಯ, ಧರ್ಮವಿದ್ದುದೇ ಆದರೆ ಬಸವಣ್ಣನವರನ್ನಾಗಲೀ, ಅವರನ್ನು ನಂಬಿದ ಅನುಯಾಯಿಗಳನ್ನಾಗಲೀ ಬೈಯದೆ ; ಇದಕ್ಕಾಗಿಯೇ ಸಮ್ಮೇಳನ ನಡೆಸಿ ಹಣ ವ್ಯಯ ಮಾಡದೆ ತಮ್ಮ ವಿಚಾರಗಳನ್ನು ವಿಧಾಯಕವಾಗಿ ಪ್ರತಿಪಾದನೆ ಮಾಡಿದರೆ ಸಾಕು, ಅಲ್ಲದೆ ಇವರ ಮತವನ್ನು ಉದ್ಧರಿಸಲಿಕ್ಕೆ ಬಸವಣ್ಣನವರಾದರೂ

ಏಕೆ ಬೇಕೋ ನಾ ಕಾಣೆ! ಏಕೆಂದರೆ, ಯಾವುದಾದರೂ ಸುಧಾರಿತ ವಾಹನಗಳಿದ್ದರೆ ಉದಾ : ಕಾರು, ಸ್ಕೂಟರ್, ದೋಣಿ ಮುಂತಾದವು ಹೊಸದಾಗಿ ರೂಪ ತಾಳಿದಾಗ, ಜನ ಹೊಸತನ್ನು ಅವಲಂಬಿಸುವರೇ ವಿನಾ ಹಳೆಯದನ್ನಲ್ಲ. ಹಾಗೇ ಬಸವಣ್ಣನವರು ಯಾವುದನ್ನಾದರೂ ಹಳೆಯದನ್ನು ಸುಧಾರಿಸಿದ್ದರೆ, ಸುಧಾರಿತ ತತ್ತ್ವಾಚರಣೆಗಳನ್ನು ಮಾಡಬೇಕೇ ವಿನಾ, ಅವರು ಖಂಡಿಸಿದ ಜಾತೀಯತೆ, ಮೂಢನಂಬಿಕೆಗಳನ್ನು ಈಗಿನ ಅನೇಕ ಮಠಾಧೀಶರು ಮತ್ತೇಕೆ ಅಳವಡಿಸಿಕೊಳ್ಳಬೇಕು. ಕೆಲವರು ಬಸವಣ್ಣನವ ರನ್ನು ಔಪಚಾರಿಕವಾಗಿ ಬಳಸಿಕೊಳ್ಳುತ್ತಿದ್ದರೆ, ಅವರ ಬಗ್ಗೆ ಪುಸ್ತಕಗಳನ್ನು ಬರೆಯುತ್ತಿದ್ದರೆ ಇದು ಇವರ ಔದಾರ್ಯ ಅಥವಾ ರಾಜಿಯ (Compromising) ಮನೋಭಾವವೇನಲ್ಲ. ಬಸವಣ್ಣನವರೇ ಆದಿ ಪ್ರಮಥರಾಗಿ ರೂಪಿಸಲ್ಪಟ್ಟ ಶರಣರ ಸಾಹಿತ್ಯದ ಹೊರತು ಬೇರೆ ಬಂಡವಾಳವಿಲ್ಲವೆಂದು, ಲಿಂಗಾಯತ ಧರ್ಮದ ಹೃದಯ ಸ್ವರೂಪರಾದ ಬಸವಣ್ಣನವರನ್ನು ಬಿಟ್ಟು ಏನನ್ನೇ ಬರೆದರೂ ಈಗಿನ ಬುದ್ಧಿ ಜೀವಿಗಳು ಒಪ್ಪರೆಂದು.

ತಾವೊಂದು ಉದಾರ ಸ್ಥಾನವನ್ನು ಉದಾರವಾಗಿ ಬಸವಣ್ಣನವರಿಗೆ ಕೊಟ್ಟಂತೆ ಮಾಡಿ, ಮತೋದ್ಧಾರಕರೆನ್ನುವುದು ಜಯಚಂದ್ರನು ಪೃಥ್ವಿರಾಜನ ವಿಗ್ರಹವನ್ನು ಮಾಡಿ ದ್ವಾರಪಾಲಕನ ಸ್ಥಾನದಲ್ಲಿಟ್ಟಂತೆ. ಆದ್ದರಿಂದ ಮತೋದ್ಧಾರಕರೆಂಬುವ ಯಾವುದೇ ಔದಾರ್ಯದ ಬಿರುದನ್ನು ಬಸವಣ್ಣನವರಿಗೆ ದಯಪಾಲಿಸದೆ, ತಮ್ಮ ಮತ ವೇನು ? ತಮ್ಮ ಮತಸ್ಥಾಪಕರು ಯಾರು ? ತಮ್ಮ ವಿಚಾರ-ಆಚಾರ ಸಂಹಿತೆ ಏನು? ಎಂಬುದನ್ನು ವಚನ ಸಾಹಿತ್ಯದ ಆಧಾರ ತೆಗೆದುಕೊಳ್ಳದೆ ಪ್ರತಿಪಾದಿಸುತ್ತಾ ಹೋದರೆ ತುಂಬಾ ಉಪಕಾರವಾದೀತು. ಬುದ್ಧಿ ಮಟ್ಟ ಬಲಿಯುತ್ತಿರುವ ಜನರೇ ನಿಜವಾದ ತೀರ್ಪುಗಾರರು. ಅವರು ಬೇಕಾದ ಪಥ, ಪಂಥಗಳನ್ನು ಆರಿಸಿಕೊಳ್ಳುವರು. ಜನ ಮೆಚ್ಚುಗೆಗಾಗಿ ಬಸವಣ್ಣನ ವಚನಗಳನ್ನು ಆಡಿ, ಹಾಡಿ, ಸಂಗ್ರಹಿಸಿ, ವ್ಯಾಖ್ಯಾನಿಸಿ ಆಚರಣೆಯಲ್ಲಿ ಬಹುದೇವೋಪಾಸನೆ, ಜಾತೀಯತೆ ಮಾಡುತ್ತ ಅವರ ವಚನಗಳಿಗೆ ವಿರುದ್ಧವಾಗಿ ನಡೆಯುವವರು 'ಬೆಳ್ಳಿತ್ತಿನ ಮರೆಯಲ್ಲಿದ್ದು ಹುಲ್ಲೆಗಂಬ ತೊಡುವಂತಹ ವರು.' ಆದ್ದರಿಂದ ಯಾವ ಮತೋದ್ಧಾರದ ಔದಾರ್ಯದ ಬಿರುದೂ ಬೇಡ ಬಸವಣ್ಣ ನವರಿಗೆ. ಅವರೊಂದು ಹೊಸಧರ್ಮವನ್ನು ಕೊಟ್ಟರು, ಅದು ಜಾತ್ಯಾತೀತ ಪ್ರಗತಿಪರ ಧೋರಣೆಯುಳ್ಳ, ಏಕ ದೇವೋಪಾಸಕ ವೈಚಾರಿಕ ಧರ್ಮ. ನೀವು ಕೊಡುವ ಹೆಸರು ಯಾವುದೋ ಎಂಬ ಗೊಂದಲ ನಮಗೆ ಬೇಡ. ಬಸವಣ್ಣ ಕೊಟ್ಟುದು ಬಸವ ಧರ್ಮ, ವಿಶ್ವಧರ್ಮ. ಇಂದಿನ ಜಗತ್ತಿಗೆ ಅದು ಬೇಕು.

ಮಲ್ಲಿಕಾರ್ಜುನ ಪಾಟೀಲ ಗದಗ

★ "ದೀಕ್ಷೆ ನೀಡುವ ಹಕ್ಕು ಇಲ್ಲದೆಯೇ ಅನ್ಯರಿಗೆ ದೀಕ್ಷೆಕೊಟ್ಟು ಧರ್ಮದ ನಿಯಮವನ್ನು ಉಲ್ಲಂಘಿಸುತ್ತಿರುವಿರಿ" ಎಂದು ಶ್ರೀ ಜ.ಚ.ನಿ. ಯವರುನುಡಿದು ನಿಮ್ಮ ಬಗ್ಗೆ ಅಸಹನೆ ವ್ಯಕ್ತ ಪಡಿಸಿದರು. ಈ ಬಗ್ಗೆ ನಿಮ್ಮ ಅಭಿಪ್ರಾಯವೇನು ?

● ಜಾತಿಯಿಂದ ದೀಕ್ಷೆಯ ಹಕ್ಕು ಬರುತ್ತದೆ ಎಂಬ ಸಂಹಿತೆ ನಿಮ್ಮ ಯಾವ ಧರ್ಮದ ಸೂತ್ರವೋ ನಾನರಿಯೆ. ಬಸವ ಧರ್ಮ ಮತ್ತು ಸಾಮಾನ್ಯಜ್ಞಾನದ (common sense) ಪ್ರಕಾರ ದೀಕ್ಷೆ ನೀಡುವ ಹಕ್ಕು ಜಾತಿಯಿಂದ ಬರದು; ಜ್ಯೋತಿಯಿಂದ; ಆತ್ಮ ಜ್ಞಾನದಿಂದ ಬರುವುದು. ಈ ಜಗತ್ತಿನಲ್ಲಿ ಎಲ್ಲ ಸಂತ ಮಹಾಂತ ಗುರುಗಳು ತಮ್ಮ ಆತ್ಮಶಕ್ತಿಯಿಂದ ಗುರುತ್ವ ಬೆಳೆಸಿಕೊಂಡು ಭಕ್ತರನ್ನು ಅನುಗ್ರಹಿಸುತ್ತಾರೆ. ಅಂಥವರ ಬಳಿಗೆ ಅನುಗ್ರಹ ಪಡೆಯಲು ಜನ ಧಾವಿಸುತ್ತಾರೆ. ತಾನೇ ಉರಿಯದ ದೀಪ ಇನ್ನೊಂದು ದೀಪವನ್ನೇನು ಹಚ್ಚೀತು ಎಂಬುದನ್ನು ತಿಳಿದುಕೊಂಡರೆ ಎಷ್ಟೋ ಒಳ್ಳಿತು.

ಪರಮೇಶ ಎನ್. ಪಿ. ದಾವಣಗೆರೆ

★ ಮನೆ ಗುರುಗಳು ಕುಲಗುರುಗಳನ್ನು ಬಿಟ್ಟು ಬೇರೆಯವರ ಬಳಿಗೆ ಹೋಗಬಾರದು, ಪ್ರವಚನ–ಶಾಸ್ತ್ರ ಕೇಳಬಾರದು, ಕಾಣಿಕೆ ಸಲ್ಲಿಸಬಾರದು, ಗೌರವಿಸಬಾರದು, ದೀಕ್ಷೆ ಪಡೆದುಕೊಳ್ಳಬಾರದು ಎಂದು ಕೆಲವು ಸ್ವಾಮಿಗಳು ಹೇಳುತ್ತಾರೆ. ಇದು ಸರಿಯೇ ?

● ಮನೆಗೆ, ಕುಲಕ್ಕೆ ಗುರು ಇರನು. ಗುರು ಇರುವುದು ಮನಸ್ಸಿಗೆ, ಆತ್ಮವಿಕಾಸಕ್ಕೆ. ಹಿತ್ತಲಲ್ಲಿ ಬೆಳೆದದ್ದು ಅಂತ ಹಾವು ಮೆಕ್ಕೆಯ ಕಾಯಿ ತಿನ್ನಬಾರದು. ಮಂದಿ ತೋಟದ್ದು ಅಂತ ಮಾವಿನ ಹಣ್ಣು ಬಿಸಾಡಲು ಬರದು. ಯೋಗ್ಯವಾದುದನ್ನು ಹಣವಿತ್ತಾದರೂ ಕೊಳ್ಳುವಂತೆ ಜ್ಞಾನ ತಪಸ್ಸು ಇದ್ದ ಗುರುವನ್ನು ಕಷ್ಟಪಟ್ಟು ಹುಡುಕಿಯಾದರೂ ಅನುಗ್ರಹ ಪಡೆದುಕೊಳ್ಳಬೇಕು.

(ಕಲ್ಯಾಣ ಕಿರಣದ ಬಹುಮಟ್ಟಿನ ಓದುಗರು ದಾವಣಗೆರೆಯಲ್ಲಿ ನಡೆದ ಒಂದು ಆಚಾರ್ಯರ ಸಮ್ಮೇಳನವನ್ನು ಉಲ್ಲೇಖಿಸಿ ಪ್ರಶ್ನೆ ಕೇಳಿರುವ ಕಾರಣ ಈ ಬಾರಿ ಆ ಪ್ರಶ್ನೆಗಳಿಗೇ ಮುಖ್ಯವಾಗಿ ಉತ್ತರಿಸಲಾಗಿದೆ)

ಸ್ಫುರಣ-ಕಿರಣ

೧. ತೂಕವಾದ ವಾಹನ

ಅಮೇರಿಕಾದಲ್ಲಿ ವಾಹನಗಳು ತುಂಬಾ ತೂಕವಿರಬೇಕೆಂದು ಯತ್ನಿಸುತ್ತಾರೆ. ಸಣ್ಣ ಸಣ್ಣ ಕಾರುಗಳು ತುಂಬಾ ಅಪಾಯಕಾರಿ. ಏಕೆಂದರೆ ಅವುಗಳು ವೇಗವಾಗಿ ಓಡಲಾರವು. ವೇಗವಾಗಿ ಓಡಿದರೆ ಜಾರುವ ಸಂಭವವಿದೆ. ಕೆಲವೊಮ್ಮೆ ತೀರಾ ದೊಡ್ಡವಾದ ಭಾರವಾದ ಟ್ರಕ್ಕುಗಳು ಪಕ್ಕದಲ್ಲಿ ಹಾಯ್ದರೆ, ಸಣ್ಣ ಸಣ್ಣ ಕಾರುಗಳು ನಡುಗಿ ಬಿಡುತ್ತವಂತೆ. ಮತ್ತು ಹಿಮಪಾತದಲ್ಲಂತೂ ಅವು ಸಂಯಮ ತಪ್ಪಿ ದಾರಿಯಲ್ಲಿ ಕುಣಿದಾಡುತ್ತವಂತೆ, ಭಾರವಾದ ಕಾರುಗಳು ಹಿಡಿತದಲ್ಲಿ ಸಾಗುತ್ತವೆ. ಈ ವಿಷಯ ತಿಳಿದಾಗ ಒಂದು ವಿಚಾರ ಸ್ಫುರಿಸಿತು. ಆದರ್ಶಗಳನ್ನು ಚೆನ್ನಾಗಿ ಬೆಳೆಸಿಕೊಂಡು, ವ್ಯಕ್ತಿತ್ವವನ್ನು ಘನವಾಗಿ ಮಾಡಿಕೊಂಡ ವ್ಯಕ್ತಿಯು ಎಂಥದೇ ಆಶೆ–ಆಮಿಷಗಳ ಹಿಮಪಾತಕ್ಕಾಗಲೀ, ಸ್ತುತಿ–ನಿಂದೆಗಳ ಗಾಳಿಯ ಹೊಡೆತಕ್ಕೆ ಹೊಯ್ದಾಡದೆ ತನ್ನ ಪಥದಲ್ಲಿ ತಾನು ಸಂಯಮದಿಂದ ಸಾಗುವನು. ಹಾಗಲ್ಲದೆ ತಾತ್ಕಾಲಿಕ ಆವೇಶ, ಉತ್ಸಾಹಕ್ಕೆ ಈಡಾಗಿ ಆಧ್ಯಾತ್ಮ ಪಥದಲ್ಲಿ ಹೊರಟವ ಇದಿರಾಗುವ ಅನೇಕ ಆತಂಕಗಳಿಗೆ ಬಲಿಯಾಗಿ ದಾರಿ ತಪ್ಪುವ ಸಂಭವವಿದೆ.

೨. ನಿಂತುಹೋದ ಗಡಿಯಾರ

ಒಂದು ದಿನ ಒಬ್ಬರ ಮನೆಗೆ ಬಂದಿಳಿದೆವು. ನಮ್ಮ ಕೋಣೆಯಲ್ಲಿದ್ದ ಗಡಿಯಾರ ಏಳು ಗಂಟೆ ತೋರಿಸುತ್ತಿತ್ತು, ನನ್ನ ಕೈಗಡಿಯಾರ ಏಳುವರೆ ತೋರಿಸುತ್ತಿತ್ತು. ನನಗೆ ಗೊಂದಲವಾಯಿತು ಮತ್ತು ಆಶ್ಚರ್ಯವಾಯಿತು. ಪ್ರಯಾಣದುದ್ದಕ್ಕೂ ನನ್ನ ಗಡಿಯಾರ ಸರಿಯಾದ ವೇಳೆ ತೋರಿಸುತ್ತಿತ್ತು. ಅದು ಹೇಗೆ ಮುಂದಕ್ಕೆ ಮುಳ್ಳು ಸರಿಯಿತು? ಗೋಡೆಯ ಮೇಲಿದ್ದ ಗಡಿಯಾರವನ್ನು ನೋಡಿ ಸಮಯವನ್ನು ಸರಿಮಾಡಿಕೊಳ್ಳೋಣ ಎಂದು ಕೊಂಡವಳು, ಒಮ್ಮೆಲೇ ನಂಬುವುದೇಕೆ ಎಂದುಕೊಂಡು ಮನೆಯವರನ್ನು ಸರಿಯಾದ ಸಮಯಕ್ಕಾಗಿ ಕೇಳಿದೆ. ಅವರು ಏಳೂವರೆ ಎಂದರು, ಗೋಡೆಯ ಗಡಿಯಾರ ಎಲೆಕ್ಟ್ರಾನಿಕ್ ಗಡಿಯಾರವಿದ್ದು

ಅದರ ಪ್ಲಗ್ ಕನೆಕ್ಷನ್ ಯಾರೋ ತೆಗೆದಿದ್ದರು, ನಂತರ ಸೇರಿಸಿದ್ದರು. ವಿದ್ಯುತ್ ಸಂಪರ್ಕ ತಪ್ಪಿಹೋಗಿ ಅದು ಅರ್ಧ ಗಂಟೆ ಹಿಂದೆ ಹೋಗಿತ್ತು. ಆದರೆ ಸಾಮಾನ್ಯವಾಗಿ ನಾವು ನಮ್ಮ ಕೈಗಡಿಯಾರಕ್ಕಿಂತ ಹೆಚ್ಚು ಗೋಡೆಗಡಿಯಾರವನ್ನು ನಂಬುವುದುಂಟು.

ತಕ್ಷಣ ಒಂದು ವಿಚಾರ ಸ್ಫುರಿಸಿತು. ಕೆಲವರು ವಿದ್ಯಾವಂತರು, ತಿಳುವಳಿಕೆಯುಳ್ಳವರು ಧರ್ಮಶಾಸ್ತ್ರಗಳನ್ನು, ವಚನ ಸಾಹಿತ್ಯ ಓದಿಕೊಂಡು ಶರಣರ ವಾಣಿಗನುಗುಣವಾಗಿ ನಡೆಯುತ್ತಿರುವದುಂಟು. ಆದರೆ ಕೆಲವು ಸಲ ಕೆಲವು ಮಠಾಧಿಕಾರಿಗಳ ಆಚರಣೆ ನೋಡಿ ಗೊಂದಲಕ್ಕೆ ಈಡಾಗುವುದುಂಟು. ಸಾಮಾಜಿಕ-ಧಾರ್ಮಿಕ ನೇತಾರರಾದ ಮಠಾಧೀಶರ ನಡೆ-ನುಡಿ ಶಾಸ್ತ್ರ ಸಮ್ಮತ ಎಂದು ನಂಬುವುದುಂಟು. ಆಗ ಕೆಲವರು ತೋರುವ ಜಾತೀಯತೆ; ಮೂಢನಂಬಿಕೆ, ಬಹುದೇವೋಪಾಸನೆ, ಕಂದಾಚಾರಗಳನ್ನು ಕಂಡು ತಮ್ಮದೇ ತಪ್ಪೇನೋ ಎಂಬ ಭ್ರಾಂತಿ, ಗೊಂದಲಗಳಿಗೆ ಒಳಗಾಗುವುದುಂಟು. ಆದರೆ ಅಂಥ ಧರ್ಮಗುರುಗಳು, ವಚನ ಶಾಸ್ತ್ರದ ವಿದ್ಯುತ್ ಸಂಪರ್ಕ ತಪ್ಪಿ, ನಿಂತುಹೋದ (ಅಥವಾ ಹಿಂದುಳಿದ) ಗಡಿಯಾರಗಳವು ಎಂಬುದನ್ನರಿಯರು. ರೇಡಿಯೋ, ಟಿ.ವಿ. ಮುಖಾಂತರ ಮತ್ತೆ ಟೈಮ್ ತಿಳಿಯುವಂತೆ, ನಿಜವಾದ ಆಚರಣೆಯಲ್ಲಿ ಅಪರೂಪವಾಗಿ ಕಾಣಬರುವ ಗುರುಗಳನ್ನು ಕಂಡು ಮತ್ತೆ ತಮ್ಮದೇ ಸರಿಯಾದ ಪಥ ಎಂದು ನಂಬಿಕೆ ತಾಳುವರು.

೩. ಲಗ್ಗೇಜ್ ಕರ್ಮ

ಮಿಸ್ಸೋರಿಯಲ್ಲಿರುವ ಹನ್ನಿಬಾಲ್‌ನಿಂದ ಡೆನ್ವರ್ ನಗರಕ್ಕೆ ಪಯಣಿಸುತ್ತಿದ್ದೆವು; ಇಲ್ಲಿ ಬಸ್ಸಿನಲ್ಲಿ ಒಬ್ಬೊಬ್ಬರು ಎರಡು ಸೂಟ್ ಕೇಸ್‌ಗಳನ್ನು ಒಯ್ಯಲು ಅವಕಾಶವಿದೆ. ವಿಶೇಷ ಛಾರ್ಜು ಮಾಡದೆ ತಮ್ಮ ವಶಕ್ಕೆ ತೆಗೆದುಕೊಳ್ಳುತ್ತಾರೆ. ಬಾಕಿಯವನ್ನು ನಾವು ಜೊತೆಗೆ ಬಸ್ಸಿನ ಒಳಕ್ಕೆ ತೆಗೆದುಕೊಳ್ಳಬೇಕು. ಬಸ್ಸಿನಿಂದ ಇಳಿದೆವು. ಯಾರು ಲಗೇಜಿಗೆ ಸಾಮಾನು ಕೊಡದೆ ಸ್ವಲ್ಪ ಸ್ವಲ್ಪ ತಂದಿದ್ದರೋ ಅವರು ಬಸ್ಸು ಇಳಿದವರೇ ಸರಸರ ತಮ್ಮ ನಿವಾಸಗಳಿಗೆ ಹೊರಟರು. ನಾವು ಲಗೇಜ್ ಭಾಗಕ್ಕೆ ಸಾಮಾನು ಕೊಟ್ಟದ್ದರಿಂದ ನಿಂತು ಕಾಯಬೇಕಾಯಿತು ಸಂಬಂಧಿಸಿದವರು ಬಂದು ಕೊಡುವ ತನಕ.

ಆಗ ಒಂದು ವಿಚಾರ ಸ್ಫುರಿಸಿತು. ಯಾರು ಸ್ವಲ್ಪ ಸ್ವಲ್ಪ ಸಾಮಾನು ತಂದಿದ್ದರೊ ಅವರು ಬೇಗ ಬೇಗ ಹೋಗಿಬಿಟ್ಟರು. ಜಾಸ್ತಿ ಇದ್ದವರು ಕಾಯಬೇಕಾಯಿತು. ಹಾಗೆಯೇ ಪಾಪ ಪುಣ್ಯಗಳ ಅಂಶ ಸ್ವಲ್ಪವಿದ್ದು ಈ ಜನ್ಮದಲ್ಲಿ ತೀರಿಸಿ

ಬಿಟ್ಟವರು, ಬೇಗ ಬೇಗ ಮುಕ್ತಿಯ ಗುರಿಯತ್ತ ಸಾಗಿಬಿಡುವರು, "ಈ ದೇಹದ" ಬಸ್ಸನ್ನು ಇಳಿಯುತ್ತಲೇ ! ಆದರೆ ಯಾರಿಗೆ ಇನ್ನು ಪ್ರಾರಬ್ಧದ ಲಗೇಜ್ ಜಾಸ್ತಿ ಇದೆಯೋ ಅವರು ಕ್ಲಿಯರ್ ಮಾಡಿಕೊಡುವ ಗುರು ಬರುವ ತನಕ ಒಂದೆರಡು ಜನ್ಮಗಳು ಕಾಯಬೇಕು.

೪. ಹಗುರವಾದ ಲಗೇಜ್

'' Less Luggage more comfort '' ಎಂಬ ಬೋಧಕ ಫಲಕವನ್ನು ನಮ್ಮ ದೇಶದ ಬಸ್, ಟ್ರೇನ್ ನಿಲ್ದಾಣದಲ್ಲಿ ನೀವು ಕಾಣಬಹುದು. ಇದು ಸಾಮಾನ್ಯ ನಿಯಮ. ಬಸ್ಸಿನಲ್ಲಿ ಪಯಣಿಸುತ್ತಿದ್ದೆವು. ಒಬ್ಬೊಬ್ಬರ ತಲೆಯ ಮೇಲೂ ಸಾಮಾನುಗಳನ್ನು ಇಡಲು ಅಟ್ಟವಿರುತ್ತದೆ. ಸ್ವಲ್ಪ ಸ್ವಲ್ಪ ಸಾಮಾನುಗಳನ್ನು ತಂದಿದ್ದರೆ ಅಲ್ಲಿ ಇಟ್ಟು, ಆಸನಗಳ ಮೇಲೆ ಜನ ಆರಾಮವಾಗಿ ಕುಳಿತುಕೊಳ್ಳುತ್ತಾರೆ, ಜಾಸ್ತಿ ಸಾಮಾನಿದ್ದರೆ ಅಟ್ಟದ ಮೇಲೂ ಇಟ್ಟು ಕಾಲ ಬಳಿಯೂ ಇಟ್ಟುಕೊಂಡು ಕೈಕಾಲು ಚಾಚಲು ಆಗದೆ ಒದ್ದಾಡಬೇಕಾಗುತ್ತದೆ. ಅತಿ ಮುಖ್ಯವಾದ ಸಾಮಾನುಗಳಿದ್ದರೂ ದೂರವಿಡಲಾಗದೆ ಹತ್ತಿರವಿರಿಸಿಕೊಂಡು ನಿಶ್ಚಿಂತೆಯಾಗಿರಲಾಗದೆ ಆಗಾಗ ಗಮನಿಸಬೇಕಾಗುತ್ತೆ. ಇದನ್ನು ಆಲೋಚಿಸುತ್ತಿರುವಾಗಲೇ ಒಂದು ವಿಚಾರ ಸ್ಫುರಿಸಿತು.

ಹಾಗೆಯೇ ಜನರು ಲೋಕದ ಬಾಳ್ವೆಗೆ ಬೇಕಾದಷ್ಟು ಗಳಿಸುತ್ತ ಹೆಚ್ಚಿನ ಕರ್ಮ ಬಂಧನದ ಸಾಮಾನುಗಳನ್ನು ಇರಿಸಿಕೊಳ್ಳದಿದ್ದರೆ, ನಿರ್ಲಿಪ್ತರಾಗಿ ನಿಶ್ಚಿಂತರಾಗಿ ಬಾಳುವರು. ಅತಿಯಾದ ಸಂಪತ್ತನ್ನು ಗಳಿಸುವವರಂತೂ ಅದರ ಕಾವಲಿಗಾಗಿ ಉದ್ವಿಗ್ನರಾಗಿ ಬಾಳುವುದಲ್ಲದೆ, ಜೀವನದ ಸಾಮಾನ್ಯ ಶಾಂತಿಯನ್ನೂ ಕಳೆದುಕೊಳ್ಳುವರು; ಆದ್ದರಿಂದ ಕರ್ಮದ ಲಗೇಜ್ ಕಡಿಮೆ ಯಾದಷ್ಟೂ ಜೀವನದಲ್ಲಿ ಶಾಂತಿ ಅಧಿಕಗೊಳ್ಳುತ್ತದೆ.

೫. ಬಂಧಿತ ನಾಯಿಮರಿ

ನಾವು ಡೆನ್ವರ್‌ಗೆ ಬಂದಿದ್ದೆವು. ಅಂದು ಆಕಾಶ ಶುಭ್ರವಾಗಿತ್ತು. ಹಿಂದಿನ ದಿನ ಬಿದ್ದ ಹಿಮವೆಲ್ಲ ಕರಗಿತ್ತು, ಸೂರ್ಯನ ಬೆಳಕು ಉಜ್ವಲವಾಗಿತ್ತಲ್ಲದೆ ಹವಾಮಾನವೂ ಚೆನ್ನಾಗಿತ್ತು. ಹೀಗಾಗಿ ಮಕ್ಕಳೆಲ್ಲ ಹಿಂದಿನ ಅಂಗಳಗಳಲ್ಲಿ ಸ್ವಚ್ಛಂದವಾಗಿ ಆಡುತ್ತಿದ್ದರು. ನಾನು ನನ್ನ ರೂಮಿನ ಕಿಟಕಿಯಿಂದ ಹಿಂದಿನ ಮನೆಯವರ ಅಂಗಳದಲ್ಲಿ ಆಡುತ್ತಿದ್ದ ಮಕ್ಕಳನ್ನು ಗಮನಿಸುತ್ತಿದ್ದೆ. ಮಕ್ಕಳೊಡನೆ ಒಂದು ಮುದ್ದಾದ ಪುಟ್ಟ ಬಿಳಿಯ ನಾಯಿಮರಿ ಕುಣಿದಾಡುತಿತ್ತು. ಅದು ಅತ್ತಿತ್ತ ಓಡಿಹೋಗಲು

ಯತ್ನಿಸುತ್ತಿತ್ತು. ಮಕ್ಕಳು ಹೋಗದಂತೆ ತಡೆಯುತ್ತಿದ್ದರು. ಆದರೂ ಅದು ಕಟ್ಟೆಗೆಯ ಕಾಂಪೌಂಡ್‌ನಲ್ಲಿದ್ದ ಒಂದು ಸಣ್ಣ ಕಿಂಡಿಯಿಂದ ಪಾರಾಗಿ ಪಕ್ಕದ ಕಾಂಪೌಂಡಿಗೆ ಹಾರಿ ಬಿಟ್ಟಿತು. ಹುಡುಗರು ಅದನ್ನು ಅದರ ಪಾಡಿಗೆ ಬಿಟ್ಟು ತಾವು ಆಡತೊಡಗಿದರು.

ಆಗ ನಾಯಿ ಮರಿಗೆ ತಾನು ಇನ್ನೊಬ್ಬರ ಮನೆಯ ಕಾಂಪೌಂಡಿನಲ್ಲಿ ಬಂಧಿತ ವಾಗಿದ್ದೇನೆಂದು ಅರಿವಾಗಿಬಿಟ್ಟಿತು ; ಆಗ ಅದು ಚಿಂತಾಕ್ರಾಂತವಾಗಿ ಕೂಗತೊಡ ಗಿತು. ಕಾಂಪೌಂಡಗುಂಟ ಹರಿದಾಡುತ್ತ ದಾರಿ ಹುಡುಕತೊಡಗಿತು. ಹೇಗೋ ಬಂದಿತ್ತು; ಹೊರಹೋಗಲು ತೋಚದೆ ಕುಂಯು ಎನ್ನತೊಡಗಿತು. ಆಡುತ್ತಿದ್ದ ಹುಡುಗರು ಮರುಕದಿಂದ ಕಾಂಪೌಂಡನ್ನು ಪ್ರವೇಶಿಸಿ ಅದನ್ನು ಪಾರು ಮಾಡಿದರು.

ಆಗ ನನಗೊಂದು ವಿಚಾರ ಸ್ಫುರಿಸಿತು. ಗುರುಗಳು, ಹಿರಿಯರು, ಸ್ನೇಹಿತರು ಮುಂತಾದ ಅನೇಕರು ನೈತಿಕ ಚೌಕಟ್ಟಿನಿಂದ ಆಚೆ ಹೋಗದಿರಲು ಮನುಷ್ಯನಿಗೆ ಬುದ್ಧಿವಾದ ಹೇಳುತ್ತಾರೆ. ಆದರೂ ಕೆಲವರು ಕೆಲವೊಮ್ಮೆ ಮೀರಿ ಬಿಟ್ಟು ಕುಡಿತ, ಸೇದುವಿಕೆ ಮುಂತಾದ ವ್ಯಸನಗಳಲ್ಲಿ ಸಿಕ್ಕಿ ಬೀಳುತ್ತಾರೆ. ದೀರ್ಘಕಾಲದ ನಂತರ ತಮ್ಮ ತಪ್ಪು ಅರಿಯುತ್ತಾರೆ. ಪಾರಾಗಲು ಯತ್ನಿಸುತ್ತಾರೆ. ದಾರಿ ತಿಳಿಯದೆ ದೌರ್ಬಲ್ಯದ ಕೂಸಾಗಿ ವ್ಯಥೆ ಪಡುತ್ತಾರೆ. ಯಾವುದೋ ಒಂದು ಪುಣ್ಯ ಕ್ಷಣ ಬಂದಾಗ, ಗುರುವಿಗೆ ಕರುಣೆ ಬಂದು ಎತ್ತಿಕೊಂಡಾಗ ದುರ್ವ್ಯಸನದಿಂದ ಪಾರಾಗಿ ಮತ್ತೆ ನೈತಿಕ ಆವರಣವನ್ನು ಪ್ರವೇಶಿಸುತ್ತಾರೆ.

೬. ಗಾಳಿ ಶರೀರ

ಸಾಲ್ಟ್ ಲೇಕ್ ನಗರದಲ್ಲಿ ಬಂದಿದ್ದೆವು. ಅಲ್ಲಿ ಸುಪ್ರಸಿದ್ಧ ಮಾರ್ಮೋನ್ ಟೆಂಪಲ್—ಕ್ರೈಸ್ತರಲ್ಲಿ ಒಂದು ಹೊಸ ಪಂಥ, ನೋಡುವ ಉದ್ದೇಶದಿಂದ ಬಂದಿದ್ದೆವು. ಅಲ್ಲಿ ಪರಿಚಯದ ಮನೆಗಳಾವುವೂ ಇರಲಿಲ್ಲ, ಹೀಗಾಗಿ ಡೆನ್ವರ್‌ನಲ್ಲಿದ್ದ ಮನೆಯವರ ಸಹಾಯದಿಂದ ಬೇಕಾಗಿದ್ದ ಆಹಾರ ತಯಾರು ಮಾಡಿಸಿಕೊಂಡು ಬಂದು "ಗ್ರೇಹೌಂಡ್" ಬಸ್ ನಿಲ್ದಾಣಕ್ಕೆ ಸನಿಹದಲ್ಲಿದ್ದ ಹೋವರ್ಡ್ ಜಾನ್‌ಸನ್ ಮೋಟೆಲ್‌ನಲ್ಲಿ ಇಳಿದೆವು. ಇಲ್ಲಿ ರೆಸ್ಟ್‌ರಾಂಟ್ ಎಂದರೆ ಕೇವಲ ತಿಂಡಿ ಊಟ ಸಿಕ್ಕುವ ತಾಣಗಳು. ಹೋಟೆಲ್‌ಗಳೆಂದರೆ ಊಟ ತಿಂಡಿಯ ಜೊತೆಗೆ ವಸತಿ ಸಹ ಸಿಕ್ಕುವಂತಹುದು. ಮೋಟೆಲ್‌ಗಳೆಂದರೆ ಊಟ-ತಿಂಡಿ ವಸತಿಯ ಜೊತೆಗೆ ಕಾರುಗಳಿಗೂ ಪಾರ್ಕಿಂಗ್ ಜಾಗ ಸಿಗುವಂಥದು; (ಇಲ್ಲಿ ಪಾರ್ಕಿಂಗ್‌ದು ಬಹಳ ದೊಡ್ಡ ಸಮಸ್ಯೆ). ಹಾಗೆಯೇ ಬಸ್ ನಿಲ್ದಾಣದಿಂದ ಹೊರಗೆ ಹೋಗುವಾಗ ಮುಂದಿನ ಷೆಡ್ಯುಲ್ ತಿಳಿಸುವ ಪ್ರತಿಯನ್ನೂ ಪಡೆದೆವು. ಮರುದಿನ ಸಾಲ್ಟ್‌ಲೇಕ್ ಸಿಟಿಯಿಂದ

ಲಾಸ್ ಏಂಜಲೀಸ್‌ಗೆ ಹೊರಡಬೇಕಾಗಿತ್ತು. 4 ಗಂಟೆಗೆ ಬಸ್ ಎಂದುಕೊಂಡು ತುಂಬಾ ಅವಸರದಿಂದ ಟೆಂಪಲ್ ಎಲ್ಲಾ ನೋಡಿ, ಮೋಟೆಲ್ ರೂಮಿನ ಕೀಲಿ ವಾಪಸ್ಸು ಮಾಡಿ, ಬಸ್ ನಿಲ್ದಾಣಕ್ಕೆ ಬಂದೆವು ಆದರೆ ನಾಲ್ಕು ಗಂಟೆಗಿದ್ದ, ಬಸ್ ಕಾಂಟಿನೆಂಟಲ್ ಟ್ರೇಲ್ವೆದು ಮತ್ತು ನಮ್ಮ ಬಸ್ 7 ಗಂಟೆಗಿತ್ತು. ಇನ್ನು ಮೂರು ತಾಸು ಹೇಗೆ ಕಳೆಯುವುದು ? ಎಂದು ಚಿಂತಿಸುತ್ತ ನಮ್ಮ ಕೋಣೆಯ ಅವಧಿ ರಾತ್ರಿ 8 ರ ತನಕ ಇದ್ದುದರಿಂದ ಅದೇ ಕೋಣೆಯನ್ನು ಕೊಟ್ಟರೂ ಕೊಡಬಹುದು ಎಂದು ಪಕ್ಕದಲ್ಲೇ ಇದ್ದ ಹೋವರ್ಡ್ ಜಾನ್‌ಸನ್ ಮೋಟೆಲ್‌ಗೆ ಹೋದೆವು. ಕೋಣೆ ಖಾಲಿ ಮಾಡಿದ ಮೇಲೆ ಮುಗಿಯಿತು, ಮತ್ತೆ ಬೇಕಾದರೆ ಕನಿಷ್ಟ ಅರ್ಧದಿನ ಬಾಡಿಗೆ ಕೊಡಬೇಕು ಎಂದರು. ಕೇವಲ ಮೂರು ತಾಸಿಗೆ ಮತ್ತೆ ಬಾಡಿಗೆ ಕೊಡುವುದೇಕೆ ಎಂದುಕೊಂಡು ಬಸ್ ನಿಲ್ದಾಣದ ವೇಯಿಟಿಂಗ್ ರೂಮಿನಲ್ಲಿ ಕುಳಿತೆವು.

ಆಗ ಆಲೋಚನೆ ಮಾಡುವಾಗ ಒಂದು ವಿಚಾರ ಸ್ಫುರಿಸಿತು. ಮಾನವನ ಆತ್ಮಕ್ಕೆ ಹಿಂದಿನ ಕರ್ಮ ಸಂಸ್ಕಾರಕ್ಕೆ ತಕ್ಕಂತೆ ಆಯುಷ್ಯವು ನಿರ್ಧಾರವಾಗುತ್ತದೆ. ಅವನು ಯಾವುದೋ ದುಡುಕು ವರ್ತನೆಯಿಂದ, ಜಿಗುಪ್ಸೆಯಿಂದ ಆತ್ಮಹತ್ಯೆ ಮಾಡಿಕೊಂಡರೆ, ಹೋಟೆಲ್ ರೂಮೂ ಖಾಲಿಯಾಗಿ ಮುಂದಿನ ಬಸ್ಸೂ ಸಿಗದಂತೆ, ಇದ್ದ ದೇಹವೂ ಹೊರಟು ಹೋಗಿ, ಸಂಸ್ಕಾರಕ್ಕೆ ತಕ್ಕ ಮುಂದಿನ ಗರ್ಭವೂ ಸಿಗದೆ, ಗಾಳಿ ಶರೀರವಾಗಿ ಅವನು ಸುತ್ತತೊಡಗುವನು. ಆ ಕಾಲಾವಧಿ ಮುಗಿದ ನಂತರ ಪುನಃ ಮತ್ತೊಂದು ದೇಹದ ವಾಹನವನ್ನೇರಿ ಪ್ರಯಾಣವನ್ನು ಕೈಗೊಳ್ಳುವನು.

೭. ಸ್ವಯಂಚಾಲಿತ— ದೇವರು

ಹಾಲಿವುಡ್‌ನ ಯೂನಿವರ್ಸಲ್ ಸ್ಟುಡಿಯೋ ನೋಡಲು ಹೋಗಿದ್ದೆವು. ಒಂದೆಡೆಯಲ್ಲಿ ಸ್ವಯಂಚಾಲಿತ ಯಂತ್ರವಿದ್ದು, ಅದರಲ್ಲಿ ವೈವಿಧ್ಯಮಯ ವಸ್ತುಗಳನ್ನು ಪಡೆಯಬಹುದಿತ್ತು. ನಾಣ್ಯ ಹಾಕಬೇಕು. ತನಗೆ ಯಾವುದು ಬೇಕೋ ಅದರ–ಕಾಫಿ, ಟೀ, ಹಾಲು, ಕಿತ್ತಳೆ ರಸ, ದ್ರಾಕ್ಷಿರಸ, ಅನಾನಸ್‌ರಸ, ಪೆಪ್ಸಿ ಮುಂತಾದ–ಗುಂಡಿ ಒತ್ತಿದರೆ ಒಂದು ಕಿಂಡಿ ತೆರೆಯುತ್ತದೆ ಒಂದು ಕಾಗದದಲೋಟ ಇಳಿಯುತ್ತದೆ. ಅದರಲ್ಲಿ ನಾವು ಇಚ್ಛಿಸಿದ ವಸ್ತುವೂ ತುಂಬುತ್ತದೆ. ಹೀಗೆಯೇ ಪೆಪ್ಪರಮೆಂಟ್, ಚಾಕಲೇಟ್, ಸಿಗರೇಟ್ ಎಲ್ಲಾ ದೊರೆಯುತ್ತವೆ. ಬೇರೆ ಬೇರೆ ಜನ ಬಂದು ತಮಗೆ ಬೇಕಾದುದನ್ನು ಬಟನ್ ಒತ್ತಿ ಪಡೆದುಕೊಳ್ಳುತ್ತಿದ್ದರು. (ಇಂಥ ಯಂತ್ರಗಳು ಎಲ್ಲಾ ಕಡೆ ದೊರೆಯುತ್ತವೆ).

ಕೆಲವರು ಹಣ್ಣಿನ ರಸವನ್ನು ಕೆಲವರು ಸಿಗರೇಟನ್ನು ಪಡೆದರು. ಗಮನಿಸುತ್ತಿದ್ದ ನನಗೆ ಒಂದು ವಿಚಾರ ಸ್ಫುರಿಸಿತು. ದೇವರೂ ಇಂಥ ಒಬ್ಬ ದಾತ. ಅವನಲ್ಲಿ

ಭಕ್ತಿಯ ನಾಣ್ಯ ಹಾಕಿ ಪ್ರಾರ್ಥನೆಯ ಬಟನ್ ಒತ್ತಿ ಅನೇಕ ವಸ್ತುಗಳನ್ನು ಪಡೆಯಬಹುದು. ಕೆಲವರು ಮುಕ್ತಿಯ ಸಂಪತ್ತು ಪಡೆದುಕೊಳ್ಳುತ್ತಾರೆ. ಇನ್ನು ಕೆಲವರು ಕೇವಲ ಹಣ – ಆಸ್ತಿ ಮುಂತಾದ್ದನ್ನು ಪಡೆಯುತ್ತಾರೆ. ಅವರ ಆಕಾಂಕ್ಷೆಗನುಗುಣವಾದುದು ಹೊಂದುತ್ತಾರೆ. ಆದರೆ ವಿವೇಕಿಯಾದವನು ಅಲ್ಪಕಾಮನೆಯಿಂದ ಬೇಡದೆ, ಜೀವನ್ಮುಕ್ತಿಯನ್ನು ಬೇಡುತ್ತಾನೆ ಮತ್ತು ಹೊಂದುತ್ತಾನೆ.

೮. ರಿಫ್ಲೆಕ್ಟರ್ಸ್

ರಾತ್ರಿಯ ವೇಳೆಯಲ್ಲಿ ಪ್ರಯಾಣ ಮಾಡುತ್ತಿದ್ದೆವು. ಮೂರು ಪಥಗಳ ಹೆದ್ದಾರಿಯ ಬದಿಯಲ್ಲಿ ಕೆಲವು ದೀಪಗಳು ಮಿನುಗುತ್ತಿದ್ದವು. ಹೀಗಾಗಿ ರಾತ್ರಿಯ ವೇಳೆಯಲ್ಲಿ ರಸ್ತೆಯ ಅಂಚು ಬಹಳ ಸ್ಪಷ್ಟವಾಗಿ ಕಾಣುತ್ತಿತ್ತು. ಆ ದೀಪಗಳನ್ನು ದಾಟಿದ ತಕ್ಷಣ ಹಿಂತಿರಿಗಿ ನೋಡಿದರೆ ಅವು ಕಾಣ ಬರಲಿಲ್ಲ. ಕತ್ತಲೆಯಲ್ಲಿ ಮಿನುಗಲಿಲ್ಲ. ಹಾಗೆಯೇ ರಸ್ತೆಯಲ್ಲಿ ಫಲಕಗಳು ಕೆಲವು ವಿದ್ಯುತ್ ಬಳ್ಳಿಗಳಂತೆ ಗೋಚರಿಸುತ್ತಿದ್ದುವು. ಅವನ್ನು ದಾಟಿದ ನಂತರ ಅಕ್ಷರಗಳು ಕಾಣಬರವು. ಅದೇ ರಸ್ತೆಯ ಮೇಲೆ ನೆತ್ತಿಯ ಮೇಲೆ ಇರುವ ಫಲಕಗಳು ಕೆಳಗಿನಿಂದ ಬಿಟ್ಟ ವಿದ್ಯುತ್ ದೀಪಗಳ ಬೆಳಕಿನಲ್ಲಿ ಸ್ಪಷ್ಟವಾಗಿ ಕಾಣುವುವು.

ನಮ್ಮ ಕಾರು ಓಡುವಾಗ ಅವುಗಳ ಮುಂಭಾಗದ ದೀಪಗಳ ಬೆಳಕು ಈ ರಿಫ್ಲೆಕ್ಟರ್ ದೀಪಗಳ ಮೇಲೆ ಅಥವಾ ರಿಫ್ಲೆಕ್ಟಿಂಗ್ ಪೇಯಿಂಟು ಹಚ್ಚಿದ ಫಲಕಗಳ ಮೇಲೆ ಬಿದ್ದು ಫಳಫಳನೆ ಕತ್ತಲಲ್ಲಿ ಹೊಳೆಯುವುದು. ಅಲ್ಲಿ ಪ್ರತಿಫಲಿತವಾಗಿರುವುದು ನಮ್ಮ ದೀಪಗಳ ಬೆಳಕೇ ವಿನಾ ಅಲ್ಲಿಯ ದೀಪವಲ್ಲ.

ಇದನ್ನು ಗಮನಿಸುತ್ತಾ ಒಂದು ವಿಚಾರ ಸ್ಫುರಿಸಿತು. ಕೆಲವು ಮಹಾತ್ಮರು, ಜ್ಞಾನಿಗಳು ಇದ್ದ ನೆಲೆ ಅವಿಮುಕ್ತ ಕ್ಷೇತ್ರ, ಜಾಗೃತ ತಾಣವಾಗಿರುತ್ತದೆ. ವಿದ್ಯುತ್ ದೀಪಗಳ ಬೆಳಕಿನಲ್ಲಿ ದೂರದ ಫಲಕಗಳನ್ನು ಕಾಣುವಂತೆ, ಅಂಥ ತಾಣಗಳಲ್ಲಿ ವಿಶೇಷ ದೈವಾನುಭವ ಪಡೆಯುತ್ತೇವೆ. ಆದರೆ ಇನ್ನು ಕೆಲವು ಮೂಢ ನಂಬಿಕೆಯ ಕ್ಷೇತ್ರಗಳಿರುತ್ತವೆ. ಜನ ಹಿಂಡು ಹಿಂಡಾಗಿ ಧಾವಿಸುತ್ತಾರೆ; ತಮ್ಮ ಹರಕೆ ಫಲಿಸಿತು ಅಲ್ಲಿ ಬೇಡಿಕೊಂಡಿದ್ದಕ್ಕೆ ಎಂದು ಪ್ರಚಾರ ಮಾಡುತ್ತಾರೆ. ಆದರೆ ಈ ತಾಣಗಳು ರಿಫ್ಲೆಕ್ಟರ್ ಲೈಟುಗಳಂತೆ, ಇವರ ಭಕ್ತಿ–ಶ್ರದ್ಧೆಗಳೇ ಅಲ್ಲಿ ಪ್ರತಿಫಲಿಸಿ ಕೆಲಸ ಮಾಡಿದೆಯೇ ವಿನಾ ಅಲ್ಲಿನ ವಾಸ್ತವಿಕ ದೈವೀಶಕ್ತಿಯಲ್ಲ.

9. ಲಾಕ್ ಅಂಡ್ ಡ್ಯಾಮ್ ಸಿಸ್ಟಮ್

ದಿ. 9-2-1981ರಂದು ಹನ್ನಿಬಾಲ್, ಮಿಸ್ಸೋರಿ ರಾಜ್ಯ ಇಲ್ಲಿಗೆ ಹೋಗಿದ್ದೆವು. ಇಲ್ಲಿರುವ ಡಾ|| ಜಯಾನಂದಯ್ಯನವರು ತಮ್ಮ ಊರಲ್ಲಿ ನೋಡುವಂತಹುದು ಏನೂ ಇಲ್ಲವೆಂದೂ, ಇಲ್ಲಿ ನಾಯಾ ಮಿಸ್ಸೋರಿ ರಾಜ್ಯಗಳೆರಡನ್ನೂ ಬೇರ್ಪಡಿಸುವ ಮಿಸ್ಸೋರಿ ನದಿಯ ದಂಡೆ ತೋರಿಸಲು ಕರೆದೊಯ್ದರು. ಹೆಪ್ಪುಗಟ್ಟನಿಂತ ನದಿ, ಎಲೆ ಉದುರಿದ ವೃಕ್ಷಗಳು—ಸೌಂದರ್ಯರಹಿತ ದೃಶ್ಯವಷ್ಟೇ ಕಾಣಬಂದುದು. ಅಲ್ಲಿಂದ ಬರುವಾಗ ಒಂದು ಲಾಕ್ ಅಂಡ್ ಡ್ಯಾಮ್ ಸಿಸ್ಟಮ್ ಬಳಿಗೆ ಕರೆತಂದರು.

ಮಿಸ್ಸೋರಿ ನದಿ ತುಂಬಾ ದೂರ ಹರಿಯುವಂತಹುದು. ಅದರ ವಿಸ್ತಾರವೂ ಚೆನ್ನಾಗಿದೆ. ಇದರಲ್ಲಿ ಸರಕು ಸಾಗಾಣಿಕೆ ಹಡಗುಗಳು ಓಡಾಡುವುದು ಬಹಳ. ರಸ್ತೆಯ ಮೇಲಿನ ಸಾಗಾಣಿಕೆಗಿಂತಲೂ ನೀರಿನಲ್ಲಿ ಸುಲಭ ಮತ್ತು ಮಿತವ್ಯಯ ಸಾಧ್ಯ. ನದಿಯ ಸೆಳವಿನ ವಿರುದ್ಧ ಏರುತ್ತ ಹಡಗುಗಳು ಬರುವಾಗ ತುಂಬಾ ಕಷ್ಟವಂತೆ. ನದಿಯು ಭೂಮಿಯ ಏರಿಳಿತಕ್ಕೆ ತಕ್ಕಂತೆ ತಗ್ಗಿನಲ್ಲಿ ಹರಿದಿರುತ್ತದೆ. ಆಗ ಹಡಗುಗಳು ತಗ್ಗಿನಿಂದ ಮೇಲಕ್ಕೆ ಏರಲು ಪರಿಶ್ರಮ ಪಡಬೇಕಾಗುತ್ತದೆ. ಅಂಥಲ್ಲಿ ಎರಡು ಗೇಟುಗಳನ್ನು ನಿರ್ಮಿಸಿರುತ್ತಾರೆ. ಎರಡು ಬದಿಗಳಲ್ಲಿ ದಪ್ಪಗೋಡೆ ಎರಡು ತುದಿಗಳಲ್ಲಿ ಗೇಟುಗಳು. ಹೀಗಾಗಿ ಅಲ್ಲಿ ಒಂದು ರೆಕ್ಟಾಂಗ್ಯುಲರ್ ಕೊಳ ನಿರ್ಮಾಣವಾಗುತ್ತದೆ. ಹಡಗು ಬಂದಾಗ ಒಂದು ಗೇಟು ತೆರೆದು ಹಡಗನ್ನು ಒಳಗೆ ಬಿಡುತ್ತಾರೆ. ಗೇಟುಮುಚ್ಚಿ ನೀರಿನ ಮಟ್ಟ ಏರಿಸುತ್ತಾರೆ, ಹಡಗು ಮೆಲ್ಲನೆ ಮೇಲೆ ಏರುತ್ತದೆ. ಆಗ ಇನ್ನೊಂದು ಗೇಟು ತೆರೆದಾಗ ನದಿಯ ಮಟ್ಟಕ್ಕೆ ಆ ನೀರು ಇರುವುದರಿಂದ ಹಡಗು ನದಿಯನ್ನು ಪ್ರವೇಶಿಸುತ್ತದೆ.

ಹಡಗನ್ನು ಇಳಿಸುವಾಗ, ಒಂದು ಗೇಟು ತೆರೆಯುವರು. ಹಡಗು ಈ ಕೊಳವನ್ನು ಪ್ರವೇಶಿಸಿದಾಗ ಇನ್ನೊಂದು ಗೇಟು ತೆರೆದು ನೀರನ್ನು ಇಳಿಸುವರು. ನದಿಯ ಮಟ್ಟಕ್ಕೆ ನೀರು ಇಳಿದಾಗ ಹಡಗನ್ನು ಆಚೆ ಬಿಡುವರು. ನನಗೆ ಇದನ್ನು ನೋಡಿ ತುಂಬಾ ಸಂತೋಷವಾಯಿತು. ಒಂದು ವಿಚಾರ ಸ್ಫುರಿಸಿತು. ಪರಮಾರ್ಥತೆ ಅಥವಾ ದೈವತ್ವ ಒಂದು ಎತ್ತರದ ಮಟ್ಟ. ಲೌಕಿಕತೆ ಒಂದು ತಗ್ಗಿನ ಮಟ್ಟ. ಸಾಧಕನೆಂಬ ಪಯಣಿಗ ಲೌಕಿಕತೆಯ ಸೆಳವಿನಲ್ಲಿ ಸಾಗುವುದಾದರೆ ಹೆಚ್ಚಿನ ಪರಿಶ್ರಮ ಪಡಬೇಕಾಗಿಲ್ಲ. ಆದರೆ ದೈವತ್ವದ ಎತ್ತರಕ್ಕೆ ಏರಬೇಕಾದರೆ ತುಂಬಾ ಶ್ರಮಿಸಬೇಕು. ಅದಕ್ಕೆ ಗುರು ಸಹಾಯ ಮಾಡುವನು. ಆಶ್ರಮ, ಮಂದಿರ, ಸಾಧನಾಲಯ ಎಂಬ ಡ್ಯಾಮ್ (ಕೊಳ) ಕಟ್ಟಿ, ಅಲ್ಲಿ ಜ್ಞಾನದ ವಾಹಿನಿಯನ್ನು ತುಂಬಿ, ಅದರಲ್ಲಿ ಸಾಧಕನೆಂಬ ಹಡಗನ್ನು ಬಿಟ್ಟು, ಬೋಧೆಯ ಸಹಾಯದಿಂದ ಸಾಧಕನ ಮನಸ್ಸಿನ

ಮಟ್ಟವನ್ನು ಮೇಲೇರಿಸುತ್ತ ಸಾಕಷ್ಟು ಏರಿದಾಗ, ದೈವೀ ಸಾಧನೆಯ ದಾರಿಯಲ್ಲಿ, ಏರಿನಲ್ಲಿ ದೀಕ್ಷೆಯ 'ಲಾಕ್' ತೆರೆದು ಸಾಧಕನನ್ನು ಬಿಡುವನು. ಆಗ ಅವನು ದೈವೀ ಮಟ್ಟಕ್ಕೆ ಏರಿ ಮುಂದೆ ಸಾಗುವನು, ಹೀಗೆ "ಲಾಕ್ ಅಂಡ್ ಡ್ಯಾಮ್ ಸಿಸ್ಟಮ್‌ಗೆ ಹೋಲುವ ತರಬೇತಿಯು ಸಾಧಕ"ರನ್ನು ನಿಜಕ್ಕೂ ದೈವೀಕರಣ ಗೊಳಿಸುವುದು.

೧೦. ಚಳಿಗಾಲದ ಸೂರ್ಯ

ಬೆಳಗಾಗುತ್ತಲೇ ಶುಭ್ರ ಬೆಳಕು ಹೊರಗೆ ಚೆಲ್ಲಿತ್ತು. ಹಿಂದಿನ ದಿನ ಹಿಮಪಾತ ವಾಗಿದ್ದು, ಮರುದಿನ ಬೆಳಿಗ್ಗೆ ಸೂರ್ಯನ ಬೆಳಕು ಬಿದ್ದುದರಿಂದ ದೃಶ್ಯವು ಅತ್ಯಂತ ರಮಣೀಯವಾಗಿತ್ತು. ವಿಶಾಲವಾದ ಕಿಟಕಿಗಳ ಗಾಜಿನಿಂದ ಸೂರ್ಯನ ಬೆಳಕು ತೂರಿಬಂದು ಒಳಗೆ ಕುಳಿತ ನಮಗೆ ಮುದವನ್ನುಂಟುಮಾಡುತ್ತಿತ್ತು. ಸೂರ್ಯನ ಕಿರಣಕ್ಕೆ ಮೈಯೊಡ್ಡೋಣ ಎಂದುಕೊಂಡು ಬಾಗಿಲು ತೆರೆದುಕೊಂಡು ಹೊರಗೆ ಹೋದರೆ ಕೊರೆಯುವ ಚಳಿ. ಇಷ್ಟು ಬಿಸಿಲಿದ್ದೂ ಸೂರ್ಯನ ಕಿರಣಗಳ ಪ್ರಭಾವ ಏನೇನೂ ಇಲ್ಲವಲ್ಲ; ಚಳಿಯ ಆಟ ಅಷ್ಟು ತೀವ್ರವಾಗಿದೆ ಎಂದು ಆಶ್ಚರ್ಯಪಟ್ಟೆ. ತಕ್ಷಣ ಒಂದು ವಿಚಾರ ಸ್ಫುರಿಸಿತು. ಸೂರ್ಯನ ಪ್ರಕಾಶ ಎಷ್ಟೇ ಇದ್ದರೂ ಹವಾ ಮಾನವು ಶೀತಲವಾಗಿದ್ದರೆ ಸೂರ್ಯನ ಶಾಖ ಪ್ರಯೋಜನವಾಗದು ಹಾಗೆಯೇ ನಮ್ಮ ಸಂವಿಧಾನ ಕಾಯಿದೆಗಳು ಎಷ್ಟು ಆದರ್ಶ, ಅನುಕರಣೀಯ, ಉತ್ಕೃಷ್ಟವಾಗಿ ದ್ದರೂ ಜನರ ಜೀವನ ಮಟ್ಟದಲ್ಲಿ ಕುಸಿತವಿರುವುದರಿಂದ ಸಂವಿಧಾನ, ಕಾಯಿದೆಗಳು ಆಚರಣೆಗೆ ಬರದಾಗಿವೆ. ಜನರನ್ನು ಜಾಗೃತಿಸಲಾರದಾಗಿವೆ.

೧೧. ಗೈಡ್ ಗುರು

ಉತ್ತಮವಾದೊಂದು ಕ್ಯಾಮರಾ ಆಶ್ರಮಕ್ಕಿರಲಿ ಎಂದು ಸುಪ್ರಸಿದ್ಧವಾದ ಅಂಗಡಿಗೆ ತರಲು ಹೋಗಿದ್ದೆವು. ಅಮೆರಿಕಾ ದೇಶದ ಅಂಗಡಿಗಳಲ್ಲಿ ಎಲ್ಲವನ್ನು ಪ್ರದರ್ಶನಕ್ಕೆ ಇಟ್ಟುಬಿಟ್ಟಿರುತ್ತಾರೆ. ಇಲ್ಲಿ ಯಾರೂ ಶಿಫಾರಸೂ ಮಾಡುವುದಿಲ್ಲ; ಮಾತೂ ಆಡುವುದಿಲ್ಲ ಬೇಕಾದ್ದನ್ನು ಆರಿಸಿಕೊಂಡು ಬಂದು ಬಿಲ್ ಮಾಡಿಸಬೇಕು. ಬೆಲೆಯಲ್ಲಿ ರಿಯಾಯಿತಿ ಏನೂ ಕೇಳಲು ಸಾಧ್ಯವಿಲ್ಲ. ಸರಿ ಒಂದು ಕ್ಯಾಮರಾ ಆರಿಸಿಕೊಂಡು ಬಂದೆವು. ಮುಂದೊಮ್ಮೆ ಭಾರತೀಯರು ನಡೆಸುವ ಒಂದು ಅಂಗ ಡಿಗೆ ಹೋಗಿದ್ದೆವು. ಅವನು ಕ್ಯಾಮರಾದ ಲೆನ್ಸ್ ಕೊಡುತ್ತ, ಅದಕ್ಕೆ ಫಿಲ್ಟರ್ ಒಂದು ಬರುತ್ತದೆ. ಅದನ್ನು ಹಾಕಿದರೆ ಲೆನ್ಸ್‌ಗೆ ಏಟಾಗುವುದಿಲ್ಲ; ಗೀಚು ಆಗುವು ದಿಲ್ಲ ಎಂದು ವಿವರಿಸಿದ. ನಮಗೆ ಮೊದಲು ಗೊತ್ತಿರಲಿಲ್ಲ ಆವನು ವಿವರಿಸಿದಾಗ

ತೆಗೆದುಕೊಂಡೆವು. ಆಗ ಒಂದು ವಿಚಾರ ಸ್ಫುರಿಸಿತು. ಅಮೆರಿಕನ್ ಅಂಗಡಿಗಳಲ್ಲಿ ನಾವು ನಾವೇ ಆರಿಸಿಕೊಳ್ಳಬೇಕು. ಗೊತ್ತಿಲ್ಲದಿದ್ದರೆ ಆರಿಸಿಕೊಳ್ಳುವುದು ಕಷ್ಟ. ಇಂಡಿಯನ್ ಸ್ಟೋರ್‌ಗಳಲ್ಲಿ ಅಂಗಡಿಯವನು ನಿಂತು ವಿವರಿಸಿ, ಶಿಫಾರಸು ಮಾಡುವು ದರಿಂದ ಕೊಳ್ಳುವ ಕೆಲಸ ಬಹು ಸುಲಭ.

ಹಾಗೆಯೇ, ಕೆಲವರು ಸ್ವಯಂ ಪ್ರಯತ್ನದಿಂದ ಆಧ್ಯಾತ್ಮ ಸಾಧನೆಯಲ್ಲಿ ಮುಂದುವರಿಯುತ್ತಾರೆ. ಇನ್ನು ಕೆಲವರು ಗುರುವಿನ ಮಾರ್ಗದರ್ಶನದ ಮೇಲೆ ಮುಂದುವರೆಯುತ್ತಾರೆ. ಸ್ವಯಂ ಪ್ರಯತ್ನದಿಂದ ಹೋಗುವಾಗ ಒಂದೊಂದೂ ವಿಳಂಬವೂ, ನಿಧಾನವೂ ಆಗುತ್ತದೆ. ಅದೇ ಗುರುವಿನ ಸಹಾಯ ಇದ್ದರೆ ಅತ್ಯಂತ ತ್ವರಿತವಾಗಿ ಮುಂದುವರಿಯಬಹುದು. ಮಾತ್ರವಲ್ಲ ಮಧ್ಯೆ ಮಧ್ಯೆ. ತಪ್ಪಿದಾಗ ಸೂಕ್ತ ಮಾರ್ಗದರ್ಶನವೂ ದೊರೆಯುತ್ತದೆ. ಎಲ್ಲದಕ್ಕೂ ಗೈಡ್ ಇದ್ದರೆ ಒಳ್ಳಿತು.

12. ಅಮೆರಿಕನ್ ಸ್ಟೋರ್–ಇಂಡಿಯನ್ ಸ್ಟೋರ್

ವಾಷಿಂಗ್ಟನ್‌ಗೆ ಬಂದ ಕೆಲವು ದಿನಗಳಲ್ಲೇ ಒಂದು ಕ್ಯಾಮರಾ ತೆಗೆದುಕೊಳ್ಳಲು ವಿಚಾರಮಾಡಿ ಎಲೆಕ್ಟ್ರಿಕ್ ಮತ್ತು ಎಲೆಕ್ಟ್ರಾನಿಕ್ ಗೂಡ್ಸ್ ದೊರೆಯುವ ಒಂದು ಅಂಗಡಿಗೆ ಹೋದೆವು. ನಮಗೆ ಟೇಪ್ ರೆಕಾರ್ಡರ್ ಕಸೆಟ್ಸ್ ಬೇಕಾಗಿದ್ದವು. ಬೆಲೆ ನೋಡಿ ಗಾಬರಿಯಾಯಿತು. ಐದು, ಆರು ಡಾಲರ್‌ಗೆ ಒಂದೊಂದು. ನಮ್ಮಲ್ಲಿಗಿಂತ ಇಲ್ಲಿ ಸೋವಿ ಅನ್ನುತ್ತಿದ್ದರು, ಆದರೆ ಹೀಗೇಕೆ? ಎಂದುಕೊಂಡು ಒಂದು ಡಜನ್ ಕೊಂಡುಕೊಂಡೆವು. ನಂತರ ಶ್ರೀಮತಿ ಜಯಾ ಹೇಳಿದರು ಇಂಡಿಯನ್ ಸ್ಟೋರ್ ಗಳಲ್ಲಿ ಕೊಳ್ಳಿರಿ. ಬೆಲೆ ಕಡಿಮೆ ಎಂದರು. ಅಲ್ಲಿ ಹೋಗಿ ಕೇಳಿದರೆ ಒಂದೊಂದು ಕಸೆಟ್ಟಿಗೆ ಒಂದುವರೆ ಡಾಲರ್, ಎರಡು ಡಾಲರು. ನಂಬಲು ಅಸಾಧ್ಯ. ಗುಣಮಟ್ಟದ ಬಗ್ಗೆ ಸಂಶಯಪಟ್ಟೆವು. ಅದೇ ಜಪಾನಿ ವಸ್ತುಗಳು. ಆ ಮೇಲೆ ಈ ವೈಪರೀತ್ಯ ಮತ್ತು ವ್ಯತ್ಯಾಸ ಏಕೆ? ಮತ್ತು ಹೇಗೆ ಎಂದುಕೊಂಡೆವು. ಆಗ ಒಬ್ಬರು ವಿವರಣೆ ನೀಡಿದರು. ಅಮೆರಿಕನ್ನರು ದೊಡ್ಡ ದೊಡ್ಡ ಅಂಗಡಿ, ಷೋರೂಮು ಇಡುತ್ತಾರೆ, ವಿಪರೀತ ಸಿಬ್ಬಂದಿ ನೇಮಿಸುತ್ತಾರೆ. ಮತ್ತು ಜಾಹಿರಾತುಗಳಿಗಾಗಿ ವಿಪರೀತ ವ್ಯಯಿಸುತ್ತಾರೆ. ಅದೆಲ್ಲವನ್ನೂ ವಸ್ತುಗಳ ಬೆಲೆಗೆ ಸೇರಿಸುತ್ತಾರೆ. ಸ್ವಾಭಾವಿಕವಾಗಿ ಬೆಲೆ ಏರುತ್ತದೆ. ಇಂಡಿಯನ್ ಸ್ಟೋರ್‌ಗಳು ಸರಳವಾಗಿ ಇರುತ್ತವೆ. ಮನೆಯವರೇ ನಿಂತು ಅಂಗಡಿ ನೋಡಿಕೊಳ್ಳುತ್ತಾರೆ, ಜಾಹಿರಾತಿಗೆ ವಿಪರೀತ ಹಣ ವ್ಯಯಿಸುವು ದಿಲ್ಲ. ದುಂದು ವೆಚ್ಚವಾಗದೆ ಸ್ವಲ್ಪ ಮಾತ್ರ ಲಾಭವನ್ನು ವಸ್ತುಗಳ ಮೇಲೆ ಸೇರಿಸು ತ್ತಾರೆ. ಹೀಗಾಗಿ ಬೆಲೆ ಕಡಿಮೆ ಇರುತ್ತದೆ ಎಂದರು. ಆಗ ಒಂದು ವಿಚಾರ ಸ್ಫುರಿಸಿತು.

ಧಾರ್ಮಿಕರಂಗದಲ್ಲಿಯೂ ಅಷ್ಟೆ. ಕೆಲವರು ಪ್ರಚಾರಕ್ಕಾಗಿ, ವೈಭವವನ್ನು ಪ್ರದರ್ಶಿಸಲಿಕ್ಕಾಗಿ ವಿಪರೀತ ವ್ಯಯಿಸುತ್ತಾರೆ. ಅಷ್ಟೆಲ್ಲ ವೆಚ್ಚವಾಗಿ ಎಷ್ಟರಮಟ್ಟಿನ ಧರ್ಮಜ್ಞಾನ ಜನರಿಗೆ ಸಿಕ್ಕಿತೆಂದರೆ ಕೆಲವೊಮ್ಮೆ ಶೂನ್ಯ, ಮತ್ತೆ ಕೆಲವೊಮ್ಮೆ ಅತಿ ಅಲ್ಪ. ಅದರ ಬದಲಿಗೆ ಸರಳವಾಗಿ, ಅತ್ಯಲ್ಪ ವೆಚ್ಚದಲ್ಲೇ ವ್ಯವಸ್ಥಿತವಾಗಿ ಪ್ರಚಾರ ಕಾರ್ಯ ಮಾಡಿದರೆ ಜನರಿಗೆ ಧರ್ಮಬೋಧೆಯೂ ಆಗುವುದು. ಅತಿಯಾದ ವೆಚ್ಚವೂ ತಪ್ಪುವುದು. ಸರಳತೆಯಿಂದ ಧರ್ಮಜೀವಂತವಾದರೆ, ವೈಭವದಿಂದ ಅದು ಸತ್ವಹೀನವಾಗುತ್ತ ಹೋಗುತ್ತದೆ.

13. ಮನಸ್ಸು–ನಲ್ಲಿ

ಒಂದು ನಲ್ಲಿಗೆ ಎರಡು ತಿರುಪುಗಳು. ಒಂದರ ಮೇಲೆ ಬಿಸಿನೀರು ಎಂದು. ಇನ್ನೊಂದರ ಮೇಲೆ ತಣ್ಣೀರು ಎಂದು. ಒಂದೇ ನಲ್ಲಿಯಲ್ಲಿ ಬಿಸಿ ನೀರನ್ನು ಪಡೆಯಬಹುದು H ಅಕ್ಷರ ಇರುವ ತಿರುಪನ್ನು ತಿರುವಿ, ತಣ್ಣೀರನ್ನು ಪಡೆಯಬಹುದು C ಅಕ್ಷರ ಇರುವ ತಿರುಪನ್ನು ತಿರುವಿ. ಸಮಶೀತೋಷ್ಣ ಬೇಕಾದರೆ ಎರಡನ್ನೂ ಸಮವಾಗಿ ತಿರುವಬೇಕು. ಇದನ್ನು ನೋಡುತ್ತ ಒಂದು ವಿಚಾರ ಸ್ಫುರಿಸಿತು. ಮನಸ್ಸು ಒಂದು ನಲ್ಲಿ. ಇಂದ್ರಿಯಗಳೆಂಬ ತಿರುಪನ್ನು ತಿರುವುತ್ತ ಸುಖಾಕಾಂಕ್ಷೆಯ, ಸುಖಭೋಗದ ನೀರನ್ನು ಈ ಮನಸ್ಸಿನ ಮುಖಾಂತರವೇ ಪಡೆಯಬಹುದು. ಅಂತಃಕರಣಗಳನ್ನು ದೈವೀಮುಖ ಮಾಡುತ್ತ ದಿವ್ಯಶಾಂತಿಯನ್ನೂ ಪಡೆಯಬಹುದು. ಮಾನವ ಮತ್ತು ಮಹಾತ್ಮರು ಹೇಗೆ ಬೇರೆ ಬೇರೆ ಎಂದರೆ, ಉಭಯತರಿಗೂ ಇಂದ್ರಿಯ, ಮನ, ಅಂತಃಕರಣ ಎಲ್ಲಾ ಇದ್ದರೂ, ಒಬ್ಬನು ಲೌಕಿಕ ಆಕಾಂಕ್ಷೆಗಳ ತೃಪ್ತಿಯಲ್ಲಿ ತಲ್ಲೀನನಾಗುತ್ತಾನೆ; ಇನ್ನೊಬ್ಬನು ದೈವೀ ಜಗತ್ತಿನ ಅನುಭವ ಪಡೆಯುವುದರಲ್ಲಿ ಆಸಕ್ತನಾಗುತ್ತಾನೆ.

14. ಧ್ಯಾನ

ನ್ಯೂಯಾರ್ಕ್‌ನಿಂದ ಹೊರಟು ಮುಂಬೈ ಕಡೆ ಬರುವಾಗ ದಾರಿಯಲ್ಲಿ ಲಂಡನ್‌ನಲ್ಲಿ ಒಂದರ್ಧಗಂಟೆ ಕಾಲ ಇಳಿದಿದ್ದೆವು. ಒಂದು ಬೇರೆ ಲಾಂಜ್ ಮಾಡಿರುತ್ತಾರೆ. ಅಲ್ಲಿಗೆ ಈ ತರಹದ ಪ್ರಯಾಣಿಕರು ಮಾತ್ರ ಇಳಿದು ಮತ್ತೆ ವಾಹನವನ್ನು ಏರುತ್ತಾರೆ. ನಾವೆಲ್ಲರೂ ಮತ್ತೆ ವಿಮಾನವನ್ನೇರಲು ಕಾಯುತ್ತ ಕುಳಿತಿದ್ದೆವು. ಓರ್ವ ಮನುಷ್ಯ ಅಲ್ಲಿಗೆ ಬಂದ. ಅವನ ಎರಡೂ ಕಿವಿಗಳಲ್ಲಿ ಎರಡು ಪುಟ್ಟ ಯಂತ್ರಗಳನ್ನು ಇರಿಸಿಕೊಂಡಿದ್ದ. ಮೊದಲು ಅವನು ಕಿವುಡನಿರಬೇಕು–ಶ್ರವಣೇಂದ್ರಿಯ ಸರಿಯಿರಲಿಕ್ಕಿಲ್ಲ: ಹಿಯರಿಂಗ್ ಏಡ್ ಇಟ್ಟುಕೊಂಡಿದ್ದಾನೆ ಎಂದುಕೊಂಡೆ. ಆದರೆ ಸ್ವಲ್ಪ ಹೊತ್ತಿನಲ್ಲೇ

ಅವನು ಒಂದು ಕುರ್ಚಿಯ ಮೇಲೆ ಕುಳಿತು ಶಾಸ್ತ್ರೀಯವಾಗಿ ತಾಳಹಾಕುತ್ತ ಏನೋ ಆನಂದಿಸುತ್ತಿದ್ದ. ನಂತರ ಗಮನಿಸಿದೆ, ಅವನ ಪ್ಯಾಂಟ್ ಜೇಬಿನಲ್ಲಿ ಒಂದು ಟೇಪ್ ರೆಕಾರ್ಡರ್ (ತೀರಾ ಸಣ್ಣದು) ಇತ್ತು. ಅದಕ್ಕೆ ಈಯರ್‌ಫೋನ್ ಹಾಕಿಕೊಂಡು ತನ್ನಲ್ಲಿ ತಾನೇ ಆನಂದಿಸುತ್ತಿದ್ದ.

ಆಗ ಒಂದು ವಿಚಾರ ಸ್ಫುರಿಸಿತು. ಧ್ಯಾನ ಎಂದರೆ ಏನು? ಈ ಜಗತ್ತು ಇದ್ದಂತೆ ಇರುತ್ತದೆ. ಮಾನವ ಸಹಜ ದೌರ್ಬಲ್ಯ, ವೈಷಮ್ಯ ಕ್ಷುಲ್ಲಕತನ, ಎಲ್ಲವೂ ಸಂತೆಯ ಗಲಾಟೆಯಂತೆ. ಆದರೆ ಜ್ಞಾನಿಯಾದವನು ಧ್ಯಾನದ ಟೇಪ್‌ರೆಕಾರ್ಡರ್ ಹಾಕಿಕೊಂಡು, ತನಗೆ ಬೇಕಾದ ಮಂತ್ರದ ಸಂಗೀತ ಆಲಿಸುತ್ತ ಗದ್ದಲದ ಮಧ್ಯದಲ್ಲೂ ಆನಂದಚಿತ್ತನಾಗಿ ಇರಬಹುದಲ್ಲ. ಹೊರಗಡೆ ಜಗತ್ತಿನ ಸಂಪರ್ಕ ತುಸುಕಾಲ ಹರಿದುಕೊಂಡು ದೇವನ ಚಿಂತನೆಯಲ್ಲಿ ತಲ್ಲೀನವಾಗುವುದೇ ಧ್ಯಾನ.

15. ಪ್ರತ್ಯಾಹಾರ

ಅಷ್ಟಾಂಗಯೋಗದಲ್ಲಿ ಐದನೇ ಮೆಟ್ಟಲು ಪ್ರತ್ಯಾಹಾರ. ಶಿವಯೋಗದಲ್ಲಿ ತ್ಯಾಗಾಂಗ ಮೊದಲನೇ ಹಂತ. ಇದನ್ನು ಅರಿತುಕೊಳ್ಳಲು ಒಂದು ವಿಚಾರ ಹೀಗೆ ಸ್ಫುರಿಸಿತು. ಟೆಲಿಫೋನ್‌ನನ್ನು ಯಥಾ ರೀತಿಯಲ್ಲಿ ಇಟ್ಟರೆ ಬೇರೆಯವರು ನಮ್ಮೊಡನೆ ಸಂಪರ್ಕ ಕಲ್ಪಿಸಿಕೊಳ್ಳಲು ಡಯಲ್ ಮಾಡುವರು. ಅದೇ ರಿಸೀವರ್ ಅನ್ನು ನಾವು ತೆಗೆದಿಟ್ಟುಬಿಟ್ಟರೆ ಬೇರೆಯವರು ಡಯಲ್ ಮಾಡಿದರೂ ನಮಗೆ ಶಬ್ದ ಕೇಳದು ಮತ್ತು ಸಂಪರ್ಕ ಕಲ್ಪಿತವಾಗದು. ಹಾಗೆಯೇ ಇಂದ್ರಿಯಗಳು ಬಹುರ್ಮುಖವಾಗಿದ್ದಾಗ ಇಂದ್ರಿಯದ ವಸ್ತುಗಳು (objects of senses) ಒಳಗೆ ಮನಸ್ಸನ್ನು ಪ್ರವೇಶಿಸುವವು. ಅದರ ಬದಲಿಗೆ ಇಂದ್ರಿಯಗಳನ್ನು ಅಂತರ್ಮುಖ ಮಾಡಿಬಿಟ್ಟರೆ ಸಂಪರ್ಕ ಮಾಧ್ಯಮ ತಪ್ಪಿಹೋಗಿ ಹೊರಗಿನ ಜಂಜಾಟವೇನೂ ಕೇಳದು ಇದೇ ಪ್ರತ್ಯಾಹಾರ.

> ಹೊಟ್ಟೆಯ ಹಸಿವೆ ದಡ್ಡರಿಗೂ ಅನುಭವವಾಗುತ್ತದೆ. ಆದರೆ ಜ್ಞಾನದ ಹಸಿವು ಜ್ಞಾನಿಗಳಿಗೆ ಮಾತ್ರ ಅನುಭವವಾಗುತ್ತವೆ. ಹೊಟ್ಟೆಯನ್ನು ತುಂಬಿಸಿಕೊಳ್ಳುವಷ್ಟು ಚಪಲತೆ ಮಿದುಳನ್ನು ತುಂಬಿಸಿಕೊಳ್ಳಲು ಅಷ್ಟೇ ಆತುರ, ಕಾತುರ ಎಲ್ಲರಲ್ಲೂ ಇರುತ್ತಿದ್ದರೆ ಪ್ರಾಯಶಃ ಜಗತ್ತಿನಲ್ಲಿ ಮೂರ್ಖರೇ ಇರುತ್ತಿರಲಿಲ್ಲವೇನೋ.
>
> —ಕ್ರಾಫೋರ್ಡ್

ಜ್ಞಾನ ದೇಗುಲಕೆ ನುಡಿಯ ನಮನ

—ಮಹಾದೇವಸ್ವಾಮಿ

ಬಸವ ತತ್ತ್ವವನ್ನೇ ಬಾಳಿನ ಉಸಿರಾಗಿರಿಸಿಕೊಂಡು, ಧರ್ಮ ಪ್ರಸಾರದ ಮಣಿಹ ಹೊತ್ತು ಹಗಲಿರುಳು ಶ್ರಮಿಸುತ್ತಿರುವ, ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು, ಭಾರತೀಯ ಅಧ್ಯಾತ್ಮ ಪರಂಪರೆಯ ಸುವಾಸನೆಯನ್ನು ಪಸರಿಸಲು ಜ್ಞಾನ ಮಾರುತವಾಗಿ ಸಂಚರಿಸುತ್ತ ನಾಲ್ಕು ತಿಂಗಳ ಕಾಲ ಅಮೆರಿಕಾ ಪ್ರವಾಸ ಕೈಗೊಂಡುದು ತಮಗೀಗಾಗಲೇ ತಿಳಿದಿದೆ. ಅಮೆರಿಕಾದ ಸಂಯುಕ್ತ ಸಂಸ್ಥಾನದ ಹೆಚ್ಚಿನ ರಾಜ್ಯಗಳಲ್ಲಿ ಮತ್ತು ಕೆನಡಾದ ಟೊರಾಂಟೋನಲ್ಲಿ ಅನೇಕ ಸಾರ್ವತ್ರಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಜನ-ಮನದ ಕತ್ತಲೆಯನ್ನು ಕಳೆದು 20-3-81 ರಂದು ಬೆಂಗಳೂರಿಗೆ ಹಿಂದಿರುಗಿದ ಅವರನ್ನು ಸದ್ಭಕ್ತರು, ಅಭಿಮಾನಿಗಳು, ಸಹೃದಯರ ಬಳಗ ವಿಮಾನ ನಿಲ್ದಾಣದಲ್ಲೇ ಹೃತ್ಪೂರ್ವಕವಾದ ಸ್ವಾಗತ ಬಯಸಿದುದಲ್ಲದೆ 22-3-81 ರಂದು ರಾಜಾಜಿನಗರದ 'ಬಸವ ಮಂಟಪ'ದಲ್ಲಿ ವಿಶೇಷವಾದ ಸ್ವಾಗತ ಸಮಾರಂಭ ನಡೆಸಿ, ಗೌರವ-ಭಕ್ತಿಪೂರ್ವಕವಾದ ನುಡಿ ಸುಮಗಳನ್ನು ಪೂಜ್ಯ ಮಾತಾಜಿಯವರಿಗೆ ಅರ್ಪಿಸಿದರು.

ಅಂದು ಸಂಜೆ 6-30ಕ್ಕೆ ಕಾರ್ಯಕ್ರಮ ಪ್ರಾರಂಭವೆಂದು ಪ್ರಕಟಿಸಿದ್ದರಿಂದ ಸುಮಾರು 5 ಗಂಟೆಯಿಂದಲೇ ನಿರೀಕ್ಷೆಗೆ ಮೀರಿ ಜನಗಳು ಆಗಮಿಸಿ ಕಾರ್ಯಕ್ರಮ ಪ್ರಾರಂಭವಾಗುವ ಸಮಯಕ್ಕೆ ಇರುವೆ ಸರಿದಾಡಲೂ ಸ್ಥಳವಿಲ್ಲದಂತೆ ಮಂಟಪದ ತುಂಬಾ ಕುಳಿತಿದುದು ಅಲ್ಲದೆ ಹೊರಗೆಯೂ ನಿಂತು ಕುತೂಹಲದಿಂದ ವೀಕ್ಷಿಸುತ್ತಿದ್ದುದು ಕಂಡು ನಿಜಕ್ಕೂ ಹೆಮ್ಮೆ ಎನಿಸದಿರಲಿಲ್ಲ.

ಕಾರ್ಯಕ್ರಮ ಸಾಮೂಹಿಕ ಪ್ರಾರ್ಥನೆಯೊಡನೆ ಪ್ರಾರಂಭವಾಯ್ತು. ನೆರೆದಿದ್ದ ಸಹಸ್ರಾರು ಮಂದಿ ಒಕ್ಕೊರಲಿನಿಂದ ಮಾಡಿದ ಪ್ರಾರ್ಥನೆ ಚೇತೋಹಾರಿಯಾಗಿತ್ತು. ಪ್ರಾರ್ಥನೆಯ ನಂತರ ಸ್ವಾಗತಗೈಯಲು ಸಭಿಕರ ಮುಂದೆ ನಿಂತ ರಾಜ್ಯದ ಮಾಜಿ ಶಿಕ್ಷಣ ಸಚಿವರಾದ ಕೊಟ್ರಬಸಪ್ಪ ಸೋಗಿಯವರು ತುಂಬು ಅಭಿಮಾನದ ನುಡಿಗಳನ್ನು ಪೂಜ್ಯ ಮಾತಾಜಿಯವರ ಬಗ್ಗೆ ಆಡುತ್ತಾ ಹೇಳಿದುದು ಹೀಗೆ : "ಇಂದು

ನಾವು ಪೂಜ್ಯ ಮಾತಾಜಿಯವರಿಗೆ ಸ್ವಾಗತ ಬಯಸುವ ಅವಶ್ಯಕತೆಯಿಲ್ಲ. "ಬಸವನ ಬೆಳಕೆ ಎಲ್ಲಾಡಿ ಬಂದೆ ?" ಎಂದು ಸಿದ್ಧಯ್ಯ ಪುರಾಣಿಕರು ಕವನದಲ್ಲಿ ಹೇಳಿರುವಂತೆ ಬಸವನ ಬೆಳಕು ಪೂಜ್ಯ ಮಾತಾಜಿಯವರ ರೂಪದಲ್ಲಿ ಅಮೆರಿಕೆಗೆ ಹೋಗಿ ಅಲ್ಲಿನ ಜನರ ಮನದ ಅಜ್ಞಾನ ಕಳೆದು ಬಂದಿದೆ. ನಾವಿಂದು ಆ ಬೆಳಕಿಗೆ ಸ್ವಾಗತಿಸಲು ನೆರೆದಿದ್ದೇವೆ" ಎಂದ ಅವರು, ಅಧ್ಯಕ್ಷರನ್ನು-ಅತಿಥಿಗಳನ್ನು ವಿಶೇಷವಾಗಿ ಸ್ವಾಗತಿಸಿ, ನೆರೆದಿದ್ದ ಅಸಂಖ್ಯಾತ ಜನರಿಗೂ ಸ್ವಾಗತ ಕೋರಿದರು.

ಹಿಂದೂ ಸಂಸ್ಕೃತಿಯ ಹಿರಿಮೆಯನ್ನು ಮನಗಾಣಿಸಿದ ಪೂಜ್ಯ ಮಾತೆಯವರಿಗೆ ಅಭಿಮಾನಪೂರ್ವಕವಾಗಿ ಮಾರ್ಚ್ 14 ರಂದು ನ್ಯೂಯಾರ್ಕಿನ ಹಿಂದೂ ದೇವಾಲಯದ ಸಭಾಂಗಣದಲ್ಲಿ ಅಮೇರಿಕಾದ ಸದ್ಭಕ್ತರು, ಅಭಿಮಾನಿಗಳು ಸೇರಿ, ಸಮರ್ಪಿಸಿದ ಬಿನ್ನವತ್ತಳೆಯನ್ನು ಕರ್ನಾಟಕದ ನಿವೃತ್ತ ಮುಖ್ಯ ಇಂಜಿನಿಯರ್ ಆದ ಶರಣ. ಐ. ಎಂ. ಮುಗದುಮ್‌ರವರು ಸಭಿಕರ ಎದುರು ಓದಿದರು.

ನಂತರ, ಪೂಜ್ಯ ಶ್ರೀ ಜಗದ್ಗುರು ಮಾತಾಜಿಯವರು ತಮ್ಮ ಅನುಭವವನ್ನು ಸ್ವಾರಸ್ಯವಾಗಿ ಬಿತ್ತರಿಸಿದರು. ಟೆಲಿವಿರ್ಷ ಸಂದರ್ಶನ, ಪತ್ರಿಕಾ ಸಂದರ್ಶನ, ಸಾರ್ವಜನಿಕ ಭಾಷಣ ಈ ಮುಖಾಂತರ ತಮ್ಮ ಸಂದೇಶ ನೀಡಿರುವ ಪೂಜ್ಯ ಮಾತೆಯವರ ಪ್ರವಾಸದ ನೂರಾರು ಛಾಯಾಚಿತ್ರಗಳನ್ನು ಪ್ರದರ್ಶಿಸಲಾಗಿತ್ತು. ತಮ್ಮ ಅಪೂರ್ವ ವಾಗ್ಮಿತ್ವದಿಂದ ಅಮೆರಿಕಾದಿಂದ ನಮ್ಮವರು ಕಲಿಯಬೇಕಾದುದೇನು ? ಅಲ್ಲಿನ ಜನಕ್ಕೆ ಭಾರತೀಯರು ಕಲಿಸಬೇಕಾದ ಪಾಠವೇನು ಎಂಬುದನ್ನು ವಿವರಿಸುತ್ತಾ, "ಮಾನವನ ಬೆಳವಣಿಗೆಗೆ ಅನ್ನಾಂಗಗಳು ಬೇಕಾದಂತೆ ಜೀವನದ ಪೂರ್ಣತೆಗೆ ವಿವಿಧ ಮೌಲ್ಯಗಳೆಂಬ ಅನ್ನಾಂಗಗಳು ಬೇಕು. ಇಂದು ವೈಜ್ಞಾನಿಕ ಪ್ರಗತಿಯನ್ನು ಅತ್ಯುನ್ನತ ಮಟ್ಟದಲ್ಲಿ ಸಾಧಿಸಿದ ಅಮೆರಿಕಾದಂತಹ ದೇಶಗಳಿಗೆ ಅಧ್ಯಾತ್ಮಜ್ಞಾನವೂ, ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಕ್ಕೆ ವೈಜ್ಞಾನಿಕ ಮನೋವೃತ್ತಿ; ಹೇಗೆ ಬೇಕೆಂಬುದನ್ನು ಹೃದಯಂಗಮವಾಗಿ ತಿಳಿಸಿ, ಅಲ್ಲಿನ ಜನರ ಕಾಯಕ ನಿಷ್ಠೆ, ಪ್ರಾಮಾಣಿಕತೆಯ ಬಗ್ಗೆ ಹೇಳುತ್ತಾ, "ಇಂದು ನಮ್ಮಲ್ಲಿ ಕಾಯಕದ ಬಗ್ಗೆ ಮಾತಾಡುವವರು ಬಹಳ ಜನರಿದ್ದಾರೆ, ನಿಜಜೀವನದಲ್ಲಿ ಆಚರಣೆಗೆ ತಂದವರು ತುಂಬಾ ಕಡಿಮೆ ಜನ. ಬರೀ ಮಾತಿನಲ್ಲಿ ಹೇಳದೆ, ಮುಂದಾದರೂ ಆ ರೀತಿಯ ಕಾಯಕ ನಿಷ್ಠೆ ಬೆಳೆಸಿಕೊಂಡರೆ, ನಮ್ಮ ದೇಶದ ಭೌತಿಕ ಸಂಪತ್ತು ಹೆಚ್ಚುವುದರಲ್ಲಿ ಸಂಶಯವಿಲ್ಲ" ಎಂದರು. ನಂತರ, ವಿಜ್ಞಾನದ ಉಪಯೋಗದಿಂದ ಅಲ್ಲಿನವರು ಸೃಷ್ಟಿಸಿರುವ ಕೆಲವು ಯಂತ್ರಗಳು, ಮತ್ತು ಕಂಪ್ಯೂಟರ್‌ನಿಂದ ಆಗುವ ಕೆಲಸಗಳ ಬಗ್ಗೆ ಕೆಲವು ಉದಾಹರಣೆಗಳನ್ನು ಕೊಟ್ಟು ನೆರೆದಿದ್ದ ಸಭಿಕರನ್ನು ವಿಸ್ಮಯವಾದ ಪ್ರಪಂಚದಲ್ಲಿ ತೇಲಿಸಿದರು. ಒಂದೂ ಮುಕ್ಕಾಲು ಗಂಟೆ

ಗಳ ಕಾಲ ಸಾಗಿದ ಈ ನಿರರ್ಗಳ ವಾಗ್ಝರಿಯನ್ನು ಸ್ತಬ್ಧರಾಗಿ, ಮಂತ್ರಮುಗ್ಧರಾಗಿ ಶ್ರೋತೃಗಳು ಆಲಿಸಿ, ಎರಡೂ ದೇಶಗಳ ತೌಲನಿಕ ಅಧ್ಯಯನದ ವಿವರ ಕೇಳಿ ಸಂತೋಷಿಸಿದರು. ಬಸವ ಮಂಟಪದ ಮುಂದೆ, ರಸ್ತೆಗಳಲ್ಲಿ ವಾಹನಗಳ ಸಂಚಾರ ವನ್ನು ತಡೆಗಟ್ಟುವಂತೆ ಕಿಕ್ಕಿರಿದು ಸೇರಿದ್ದ ಸಭೆ, ನಿಂತೇ ಪೂಜ್ಯರ ಭಾಷಣವ ನ್ನಾಲಿಸಿತು.

ಪೂಜ್ಯರ ಬಳಿಕ ಚಿಕ್ಕದಾಗಿ, ಚೊಕ್ಕವಾಗಿ ಮಾತನಾಡಿದ ಮುಖ್ಯ ಅತಿಥಿಗ ಳಾದ ಶರಣ. ಎನ್. ಧರ್ಮಸಿಂಗ್‌ರವರು "ಪೂಜ್ಯಮಾತಾಜಿಯವರು ತಮ್ಮ ಪ್ರಗತಿಪರ ಧೋರಣೆ, ವೈಜ್ಞಾನಿಕ ವಿಶ್ಲೇಷಣೆ, ಆಕರ್ಷಣೀಯ ನಿರೂಪಣೆ ಈ ಮೂರನ್ನೂ ಸಮಾವೇಶಿಸಿ ಅಮೇರಿಕಾದ ನಾಗರೀಕರಿಂದ ಸನ್ಮಾನ ಸ್ವೀಕರಿಸಿ ಬಂದಿರುವುದು ನಮ್ಮೆಲ್ಲರಿಗೂ ಅಭಿಮಾನ ಪಡುವ ವಿಷಯ. ಇಂಥ ಅಪೂರ್ವ ವ್ಯಕ್ತಿಗಳಿಗೆ ನಮ್ಮ ಸರ್ಕಾರ ಇನ್ನೂ ಹೆಚ್ಚಿನ ಸೇವೆ ಸಲ್ಲಿಸಲು ಸಕಲ ವ್ಯವಸ್ಥೆ ಮಾಡುತ್ತದೆ" ಎಂದರು.

ಅಧ್ಯಕ್ಷ ಸ್ಥಾನವನ್ನಲಂಕರಿಸಿದ್ದ ವಿಧಾನ ಪರಿಷತ್ತಿನ ಅಧ್ಯಕ್ಷಿಣಿಯಾದ ಶ್ರೀಮತಿ ಬಸವರಾಜೇಶ್ವರಿಯವರು ಪೂಜ್ಯ ಮಾತಾಜಿಯವರ ಸ್ವಾರಸ್ಯಕರ ನಿರೂಪಣೆ ಯನ್ನೂ ಶ್ಲಾಘಿಸಿ, "ನಾನೂ ಅಮೇರಿಕಾವನ್ನು ಸಂದರ್ಶಿಸಿ ಬಂದೆ. ನನ್ನ ಆ ಪ್ರವಾಸದಲ್ಲಿ ರಾಜಕೀಯಕ್ಕೆ ಹೆಚ್ಚು ಗಮನಕೊಡಬೇಕಾಗಿತ್ತು. ಇಂದು ಪೂಜ್ಯ ಮಾತಾಜಿಯವರು ಅಲ್ಲಿನ ಜನರಿಗೆ ಧರ್ಮಜ್ಞಾನ ಕೊಡುವುದಲ್ಲದೆ, ಆ ಜನರು ರಾಜ್ಯವನ್ನು ಹೇಗೆ ಕಟ್ಟಿದ್ದಾರೆ, ವಿಜ್ಞಾನದ ಬಲದಿಂದ ಇಂದವರು ರಾಷ್ಟ್ರವನ್ನು ಹೇಗೆ ಮುಂದುವರಿಸುತ್ತಿದ್ದಾರೆ ಎಂಬುದನ್ನು ಬಹಳ ಆಳವಾಗಿ ತಿಳಿದುಕೊಂಡು ಬಂದು ಹೇಳಿದ್ದಾರೆ. ಅವರು ತಮ್ಮ ಅನುಭವದ ನುಡಿಯಾಡುತ್ತ ಹೇಳಿದುದು ಸತ್ಯ. ಇಂದು ನಾವು ಸರ್ಕಾರ ನಮಗೇನು ಮಾಡಿದೆ? ಎಂಬ ಪ್ರಶ್ನೆ ಕೇಳದೆ, ಸರ್ಕಾರಕ್ಕೆ, ಸಮಾಜಕ್ಕೆ ನನ್ನಿಂದ ಏನು ಸಹಾಯವಾಗಿದೆ? ಎಂಬುದನ್ನು ಪ್ರತಿಯೊಬ್ಬರು ವಿಚಾರ ಮಾಡಿ, ಅದರಂತೆ ಅಲ್ಪಸ್ವಲ್ಪ ನಡೆದರೆ, ನಾವೂ ಮುಂದುವರಿಯುವುದರಲ್ಲಿ ಅನುಮಾನ ವಿಲ್ಲ" ಎಂದರು.

ಆಶೀರ್ವಚನವನ್ನು ದಯಪಾಲಿಸುತ್ತ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳು ಪೂಜ್ಯ ಮಾತಾಜಿಯವರ ಪ್ರತಿಭೆ, ದಾರ್ಶನಿಕ ಸಂಪತ್ತಿನ ಬಗ್ಗೆ ವಿವರಿಸಿದರು. ಇತ್ತೀಚೆಗೆ ನಡೆದಿರುವ ಹಿಂದು-ಅಹಿಂದು ವಾದ ವಿವಾದ ಪ್ರಸ್ತಾಪಿಸಿ, "ಲಿಂಗಾಯತ (ಬಸವ) ಧರ್ಮವು ಹಿಂದೂ ಪರಂಪರೆಯನ್ನು ಬಿಟ್ಟು ಹೋಗುವ ಧರ್ಮ ವಲ್ಲ. ಹಿಂದುತ್ವವು ಒಂದು ನಾಡಿನ ಧಾರ್ಮಿಕ ಪರಂಪರೆಯನ್ನು ಸಂಸ್ಕೃತಿಯನ್ನು

ಬಿಂಬಿಸುತ್ತದೆ. ಕೆಲವು ಆಚಾರ ವಿಚಾರ ಮೌಲ್ಯಗಳನ್ನು ಅಳವಡಿಸಿಕೊಂಡು ಬಾಳುವ ಜನಗಳ ಒಕ್ಕೂಟವೇ ಹಿಂದೂ ಜನಾಂಗ. ಆದ್ದರಿಂದ ಲಿಂಗಾಯತ ಧರ್ಮವು ಹಿಂದೂ ಪರಂಪರೆಯ ಧರ್ಮಗಳಲ್ಲೊಂದು. ಇಲ್ಲಿ ಭಿನ್ನತೆ–ವೈವಿಧ್ಯತೆ ಇದ್ದಷ್ಟೇ ಏಕತೆ, ಸೌಹಾರ್ದತೆ ಸಹ ಬೆಳೆಯಬೇಕು" ಎಂದು ನುಡಿದರು.

ಕಾರ್ಯಕ್ರಮದ ಕೊನೆಯಲ್ಲಿ ಶರಣು ಸಮರ್ಪಣೆ ಹಾವೇರಿಯ ಶರಣ ಪಂಚಾಕ್ಷರಪ್ಪ ವಳಸಂಗದ ಇವರಿಂದ ನಡೆದು, ಮಂಗಲ ಮತ್ತು ಪ್ರಸಾದ ವಿತರಣೆ ಯೊಡನೆ ಕಾರ್ಯಕ್ರಮ ಮುಕ್ತಾಯಗೊಂಡಿತು.

ನೀರಿನಲ್ಲಿ ಹಾಲನ್ನು ಹಾಕಿದರೆ ಅದು ಅದರಲ್ಲಿ ಬೆರೆಯುತ್ತದೆ. ಬೆಣ್ಣೆ ಯನ್ನು ಸೇರಿಸಿದರೆ ಅದು ತೇಲುತ್ತದೆ. ಅದೇ ರೀತಿ ಸತ್ಕಾರ್ಯಗಳೆಲ್ಲ ಪರಮಾತ್ಮನನ್ನು ಸೇರುತ್ತವೆ. ದುಷ್ಕೃತ್ಯಗಳೆಲ್ಲ ಪಾಪವೆಂಬ ಪ್ರವಾಹ ದಲ್ಲಿ ತೇಲುತ್ತಿರುತ್ತವೆ.

—ಪರಮಹಂಸರು

ನಗೆ–ಬುಗ್ಗೆ

ಯೂರೋಪಿನಲ್ಲಿ ಭಾರತೀಯನೊಬ್ಬ ಪ್ರವಾಸ ಮಾಡುತ್ತಿದ್ದ. ಅಲ್ಲಿನ ಉಡಿಗೆ ತೊಡಿಗೆಗಳು ನವೀಕರಣಗೊಂಡಿದ್ದು ಹೆಣ್ಣು ಗಂಡುಗಳನ್ನು ಗುರುತಿಸುವುದೇ ಅವನಿಗೆ ಕಷ್ಟವಾಗಿತ್ತು. ಒಂದು ದಿನ ಮಾಸ್ಕೋ ದಲ್ಲಿ ಅಲ್ಲಿನ ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿದ್ದಾಗ ಅವನು ತನ್ನ ಪಕ್ಕದಲ್ಲಿ ಕುಳಿತಿದ್ದ ವ್ಯಕ್ತಿಯನ್ನು ಅಲ್ಲಿ ಮುಂದಿನ ಸಾಲಿನಲ್ಲಿ ಕುಳಿ ತಿರುವವರು ಹೆಣ್ಣೋ ಗಂಡೋ? ಎಂದು ಕೇಳಿದ. ಗಂಡಲ್ಲ ಹೆಣ್ಣು, ಅವಳು ನನ್ನ ಮಗಳು ಎಂದು ಉತ್ತರಿಸಿತು ಪಕ್ಕದ ವ್ಯಕ್ತಿ. ಓಹೋ ಹಾಗಾದರೆ ನೀವು ಆಕೆಯ ತಂದೆಯೋ? ಎಂದ ಈ ಭಾರತೀಯ. ಅದಕ್ಕೆ ಆ ವ್ಯಕ್ತಿ ಹೇಳಿತು, ತಾಯಿ ಎಂದು!

—ಜಿ. ಮ.

ಮಾತು ಜ್ಯೋತಿರ್ಲಿಂಗ

ಸಂಗ್ರಹ: **ಸೋದರಿ ಕುಮುದಾ**

ಜಗನ್ಮಾತಾ ಅಕ್ಕಮಹಾದೇವಿಯ ಜ್ಯೋತಿರ್ವಾಣಿ

1. ಉಣಲೆಂದು ಬಂದ ಸುಖ ಉಂಡಲ್ಲದೆ ಹರಿಯದು, ಕಾಣಲೆಂದು ಬಂದ ದುಃಖ ಕಂಡಲ್ಲದೆ ಹರಿಯದು.
2. ಅರಸಿ ತೊಳಲಿದಡಿಲ್ಲ, ಬಯಸಿ ಹೊಕ್ಕಡಿಲ್ಲ, ತಪಸ್ಸು ಮಾಡಿದಡಿಲ್ಲ. ಅದು ತನ್ನ ತಾನಹ ಕಾಲಕಲ್ಲದೆ ಸಾಧ್ಯವಾಗದು, ಶಿವನೊಲಿದಲ್ಲದೆ ಕೈಗೂಡದು.
3. ತುಂಬಿದುದು ತುಳುಕದು ನೋಡಾ! ನಂಬಿದುದು ಸಂದೇಹಿಸದು ನೋಡಾ ಒಲಿದುದು ಓಸರಿಸದು ನೋಡಾ!
4. ಎಲ್ಲ ಎಲ್ಲವನರಿದು ಫಲವೇನಯ್ಯಾ? ತನ್ನ ತಾನರಿಯಬೇಕಲ್ಲದೆ.
5. ನನ್ನ ನಾನರಿಯದಂದು ಎಲ್ಲಿದ್ದೆಯಯ್ಯಾ ಚಿನ್ನದೊಳಗಣ ಬಣ್ಣದಂತೆ ಎನ್ನೊಳಗಿರ್ದೆ, ಎನ್ನೊಳಗಿರ್ದು ಮೈದೋರದ ಭೇದವ ನಿಮ್ಮಲ್ಲಿ ಕಂಡೆ.
6. ಧನದ ಮೇಲೆ ಬಂದವರೆಲ್ಲ ಅನುಸಾರಿಗಳಲ್ಲದೆ, ಆಗು ಮಾಡ ಬಂದವರಲ್ಲ. ಮನದ ಮೇಲೆ ಬಂದು ನಿಂದು ಜರೆದು ನುಡಿದು ಪಥವ ತೋರಬಲ್ಲಾತನೆ ಸಂಬಂಧಿ.
7. ಕೊಳಲ ದನಿಗೆ ಸರ್ಪ ತಲೆದೂಗಿದಡೇನು? ಒಳಗಣ ವಿಷದ ಬಯಕೆ ಬಿಡದನ್ನಕ್ಕ. ಹಾಡಿದಡೇನು, ಕೇಳಿದಡೇನು ತನ್ನಲುಳ್ಳ ಅವಗುಣ ಬಿಡದನ್ನಕ್ಕ.
8. ಆಯುಷ್ಯ ಹೋಗುತ್ತಿದೆ, ಭವಿಷ್ಯ ತೊಲಗುತ್ತಿದೆ, ಕೂಡಿರ್ದ ಸತಿ–ಸುತರು ತಮತಮಗೆ ಹರಿದು ಹೋಗುತ್ತೈದಾರೆ, ಚನ್ನಮಲ್ಲಿಕಾರ್ಜುನನ ಶರಣರ ಸಂಗದಲ್ಲಿ ಹೂಣಿ ಹೊಕ್ಕು ಬದುಕು ಕಂಡಾ ಮನವೆ.
9. ಒಲುಮೆ ಒಚ್ಚತವಾದವರು ಕುಲಛಲವನರಸುವರೇ? ಮರುಳುಗೊಂಡವರು ಲಜ್ಜೆ–ನಾಚಿಕೆ ಬಲ್ಲರೆ?
10. ಬಂಜೆ ಬೇನೆಯನರಿವಳೆ ಬಲದಾಯಿ ಮುದ್ದ ಬಲ್ಲಳೆ! ನೊಂದವರ ನೋವ ನೋಯದವರೆತ್ತ ಬಲ್ಲರು?
11. ಭಾನುವಿನಂತಿಪ್ಪುದು ಜ್ಞಾನ, ಭಾನು ಕಿರಣದಂತಿಪ್ಪುದು ಭಕ್ತಿ, ಭಾನುವನುಳಿದು ಕಿರಣಂಗಳಿಲ್ಲ, ಕಿರಣಂಗಳನುಳಿದು ಭಾನುವಿಲ್ಲ. ಜ್ಞಾನವಿಲ್ಲದ ಭಕ್ತಿ ಭಕ್ತಿಯಿಲ್ಲದ ಜ್ಞಾನವಿಂತಿಪ್ಪುದು.

ನ್ಯೂಯಾರ್ಕ್ ನಗರದಲ್ಲಿ ಕಾರ್ಯಕ್ರಮುಗಳು

—**ಸೋದರಿ ಕುಮುದಾ**

ಶಿವರಾತ್ರಿ ಜನ್ಮದಿನೋತ್ಸವ ಮತ್ತು ಬೀಳ್ಕೊಡುಗೆ ಕಾರ್ಯಕ್ರಮ

ಮೂರು ತಿಂಗಳಿನ ಮೇಲೆ ಒಂದು ವಾರ ಸಂದಿತ್ತು. ಬಹಳ ವ್ಯಾಪಕವಾದ ಪ್ರವಾಸವನ್ನು ಪೂಜ್ಯ ಮಾತಾಜಿಯವರು ಕೈಗೊಂಡಿದ್ದರು. 1980 ನವೆಂಬರ್ ಇಪ್ಪತ್ತೈದರಂದು ಅರ್ಧದಿನ ಮಾತ್ರ ನ್ಯೂಯಾರ್ಕಿನಲ್ಲಿದ್ದು ವಾಷಿಂಗ್ಟನ್‌ನತ್ತ ಸಾಗಿದ್ದರು. ಡಿಸೆಂಬರ್ ಇಪ್ಪತ್ತರಂದು ನಡೆದ ಕನ್ನಡ ಕೂಟದ ವಿಶೇಷ ಕಾರ್ಯಕ್ರಮ ವಿಶೇಷ ಅತಿಥಿಗಳಾಗಿ ಮಾತಾಜಿ ಮತ್ತೆ ನ್ಯೂಯಾರ್ಕಿಗೆ ಆಗಮಿಸಿದ್ದರು. ಮೂರನೇ ಬಾರಿಗೆ ನ್ಯೂಯಾರ್ಕಿಗೆ ಬಂದುದು ವಿಶೇಷ ಕಾರ್ಯಕ್ರಮುಗಳಲ್ಲಿ ಭಾಗವಹಿಸಲು, ಮಾರ್ಚ್ ನಾಲ್ಕರಂದು ಮಹಾಶಿವರಾತ್ರಿ. ಅದರ ಹಿಂದಿನ ಭಾನುವಾರದಂದು vision of Asia ನಡೆಸುತ್ತಿರುವ ಶ್ರೀಮತಿ ಸತ್ಯಾವಿಶ್ವನಾಥರವರು ಟ. ವಿ. ಯ ಮುಖಾಂತರ ವಿಶೇಷ ಸಂದರ್ಶನ ಪ್ರದರ್ಶಿಸಿದ್ದೇ ಅಲ್ಲದೆ, ಶಿವರಾತ್ರಿಯ ಕಾರ್ಯಕ್ರಮಕ್ಕೂ ಹೆಚ್ಚಿನ ಪ್ರಸಾರ ಕೊಟ್ಟಿದ್ದರು. ಹೀಗಾಗಿ ಪೂಜ್ಯ ಮಾತಾಜಿಯವರ ಪ್ರವಚನಕ್ಕೆ ಅಸಂಖ್ಯಾತರಾಗಿ ಜನರು ಸೇರಿದ್ದರು. ದೇವಾಲಯದಲ್ಲಿ ಯಥಾಪ್ರಕಾರದ ಅಭಿಷೇಕಗಳು ನಡೆದವು. ಆ ಬಳಿಕ ಸಾಮೂಹಿಕ ಭಜನೆ. ಜನರೆಲ್ಲ ಒಕ್ಕೊರಲಿನಿಂದ ಭಜನೆ ಮತ್ತು ಜಪ ಮಾಡಿದರು. ಭಜನೆಯ ನಂತರ ಪ್ರವಚನ. ಶಿವರಾತ್ರಿಯ ಮಹತ್ವವನ್ನು ಕುರಿತು ಪೂಜ್ಯ ಮಾತಾಜಿ ಮಾತನಾಡಿದ್ದೇ ಅಲ್ಲದೆ, ಶಿವನ ಬಗ್ಗೆ ವಿಶೇಷ ಬೆಳಕು ನೀಡಿದರು. ಶಿವನನ್ನು ಒಬ್ಬ ಪೌರಾಣಿಕ ಪುರುಷನನ್ನಾಗಿ ಕಾಣದೆ ಐತಿಹಾಸಿಕ ಯುಗ ಪುರುಷನನ್ನಾಗಿ ಕಂಡಿದ್ದೇ ಆದರೆ, ಹೊಸ ದೃಷ್ಟಿಕೋನದಿಂದ ನಾವಿಂದು ಅವನನ್ನು ಅರ್ಥ ಮಾಡಿಕೊಳ್ಳಬಹುದು. ಅವನು ಜಗತ್ತಿನ ಮೊಟ್ಟ ಮೊದಲ ಯೋಗಿ, ಪ್ರವಾದಿ. ನಾಟ್ಯಕಲೆಯ ಆದಿಗುರು. ಸಂಗೀತ ವಿದ್ಯೆಯ ಸಾರ್ವಭೌಮ. ಸ್ತ್ರೀ ಸಮಾನತೆ ಗುರುತಿಸುವಂತೆ ಧರ್ಮಶಾಸ್ತ್ರಗಳನ್ನು ಪಾರ್ವತಿಗೆ ಬೋಧಿಸಿದ. ಸ್ತ್ರೀಯರೂ ಸಾಧನೆಗೆ ಅನುವಾಗುವಂತೆ ಅವಕಾಶ ನೀಡಿದ್ದರಿಂದಲೇ ಪಾರ್ವತಿಯು ಮೊಟ್ಟ ಮೊದಲ ಯೋಗಿಣಿಯಾದಳು. ಕನ್ಯಾಕುಮಾರಿ, ಕಂಚಿ ಕಾಮಾಕ್ಷಿ, ಮಧುರೆ ಮೀನಾಕ್ಷಿ ಇವರೆಲ್ಲರೂ ಆ ತಪೋಜ್ಞಾನಿಗಳಾದ ಯೋಗಿಣಿಯರೇ!

ಶಿವನ ವ್ಯಕ್ತಿತ್ವ ಸಾತ್ವಿಕ, ಶಾಂತ, ಆದರ್ಶಪೂರ್ಣ. ಸರಳಜೀವನ, ಆತ್ಮ ಸಂಯಮದ ಪ್ರತೀಕ ಶಿವನು. ಅಂತೆಯೇ ಶಿವರಾತ್ರಿಯೂ ಸರಳ ಜೀವನ, ಆತ್ಮ ಸಂಯಮದ ಪ್ರತೀಕ.

ಉಪವಾಸ, ಜಾಗರಣೆಗಳ ಅಂತರಾರ್ಥ ವಿವರಿಸಿದರು. ಕೇವಲ ಯಾಂತ್ರಿಕ ಕ್ರಿಯೆಗಳನ್ನು ಮಾಡುತ್ತ ಹಬ್ಬಗಳನ್ನು ಆಚರಿಸುವುದಲ್ಲ. ಆಂತರಿಕ ವ್ಯಕ್ತಿತ್ವ ಬೆಳೆಸಿಕೊಳ್ಳಬೇಕು. ಉಪವಾಸವು, ಎಲ್ಲ ಇಂದ್ರಿಯಗಳು ನಿರಾಹಾರದಿಂದಿರುವ ಸಂಯಮ ಬೋಧಿಸಿದರೆ, ಜಾಗರಣೆಯು ಆತ್ಮ ಜಾಗೃತಿಯ ಸಂಕೇತ ಎಂದು ನುಡಿದರು. ಷಡಕ್ಷರಿ ಮಂತ್ರದ ಅರ್ಥವನ್ನು ಓಂಕಾರದ ಮರ್ಮವನ್ನು ಮನನೀಯವಾಗಿ ವಿವರಿಸಿದಾಗ ನೆರೆದವರೆಲ್ಲರೂ ಆನಂದ ಸರಸಿಯಲ್ಲಿ ತೇಲಾಡಿದರು.

ಮಾರ್ಚ್ ಏಳರಂದು ನ್ಯೂಯಾರ್ಕ್ ವೀರಶೈವ ಸಮಾಜದವರಿಂದ ಶಿವರಾತ್ರಿ ಆಚರಣೆ. ಮಾರ್ಚ್ 4ರಂದು ಹಿಂದೂ ದೇವಾಲಯದಲ್ಲಿ ಇದ್ದುದರಿಂದ ಮತ್ತು ಅದು ಕೆಲಸದ ದಿನವಾದ್ದರಿಂದ ಹೆಚ್ಚಿನ ಜನ ಬರಲಾರರೆಂದು ವಾರಾಂತ್ಯದಂದು ವೀರಶೈವ ಸಮಾಜದವರು ಶಿವರಾತ್ರಿ ಆಚರಣೆ ಮಾಡಿದರು. ಸ್ಟ್ಯಾಟನ್ ಐಲೆಂಡಿನ, ಮೊರೇವಿಯನ್ ಹಿಲ್ ಚರ್ಚ್ ಹಾಲಿನಲ್ಲಿ ನಡೆದ ಸಮಾರಂಭದ ಅಧ್ಯಕ್ಷತೆಯನ್ನು ಸಮಾಜದ ಅಧ್ಯಕ್ಷ ಡಾ|| ಲಿಂಗರಾಜುರವರು ವಹಿಸಿದ್ದರು. ಪೂಜ್ಯ ಮಾತಾಜಿಯವರು ಹಾಡಿದ್ದ ಪ್ರಾರ್ಥನಾಗೀತೆಯ ಕ್ಯಾಸೆಟ್ಟನ್ನು ತಮ್ಮ ತಮ್ಮ ಮನೆಗಳಲ್ಲಿ ಕೊಂಡಿಟ್ಟುಕೊಂಡು ಕೇಳಿ, ಆಗಲೇ ಕಲಿತುಕೊಂಡು ಬಿಟ್ಟದ್ದ ಶರಣೆಯರು ಅವನ್ನೇ ಹಾಡಿದರು. ಅಲ್ಲಿಯೇ ಹುಟ್ಟಿಬೆಳೆದು ಕನ್ನಡದ ಸಂಸ್ಕಾರ ಅಷ್ಟಾಗಿಲ್ಲದಿದ್ದರೂ, ಟೇಪಿನ ಸಹಾಯದಿಂದಲೇ ಕಲಿತು ತುಂಬಾ ಚೆನ್ನಾಗಿ "ಓಂ ಗುರು ಬಸವಪ್ರಭು" ಗೀತೆಯನ್ನು ಡಾ|| ಪಾಟೀಲರ ಮೂವರು ಮಕ್ಕಳು ಹಾಡಿ, ಸಭೆಯನ್ನು ದಂಗುಬಡಿಸಿದರು. ಶ್ರೀಮತಿ ಸರೋಜಾ ದೇಸಾಯಿ, ಪ್ರೇಮಾ ವೀರಭದ್ರಪ್ಪ, ಸುಲೋಚನಾ ಬಸವರಾಜ್, ಪಾಟೀಲ್ "ಜ್ಯೋತಿ ಬೆಳಗುತ್ತಿದೆ" ಹಾಡಿದರು. ಶ್ರೀಮತಿ ಜಯಾ ಶಿವಮೂರ್ತಿ ಸಮಾಜದ ಕಾರ್ಯದರ್ಶಿನಿ ಸಾಂಸ್ಕೃತಿಕ ಚಟುವಟಿಕೆಗಳನ್ನು ರೂಪಿಸಿದ್ದರು. ಅವರ ಮಗಳು 6 ವರ್ಷದ ಅಪ್ಸರಾ ಒಂದು ನೃತ್ಯ ಮಾಡಿದಳು. ಪೂಜ್ಯ ಮಾತಾಜಿಯವರು ಬರೆದ "ಬಾ ಬಾ ಬಾರೆಲೆ ಶಿವನೆ" ಎಂಬ ಜನಪ್ರಿಯ ಭಾವಗೀತೆಯನ್ನು ನರ್ತನದ ಮುಖಾಂತರ ಅಭಿನಯಿಸಿ ರೂಪಿಸಿದ್ದು ತೀರಾ ಸುಂದರವಾಗಿತ್ತು. ಆ ಮಗುವಿನಲ್ಲಿ ವಯಸ್ಸಿಗೆ ಮೀರಿದ ಪ್ರತಿಭೆ, ಭಾವಾಭಿವ್ಯಕ್ತಿ ಇದೆ.

ಪೂಜ್ಯ ಮಾತಾಜಿಯವರು ಶಿವರಾತ್ರಿಯ ಮಹತ್ವ ಕುರಿತು ಹೇಳಿದ್ದೇ ಅಲ್ಲದೆ ಬಸವ ಧರ್ಮದ ಮೂಲಭೂತ ತತ್ತ್ವಗಳನ್ನು ಕುರಿತು ವ್ಯಾಖ್ಯಾನಿಸಿದರು. ಪಂಚ

ಆಚಾರಗಳ ಮೂಲಕ ಹೇಗೆ ಬಸವ ಧರ್ಮವು ದೇವನ ಪಿತೃತ್ವ, ಮಾನವನ ಭ್ರಾತೃತ್ವ ಸಾರಿ, ಈ ಲೋಕದಲ್ಲಿ ದೈವೀರಾಜ್ಯವನ್ನು ನಿರ್ಮಾಣ ಮಾಡುತ್ತದೆ ಎಂಬುದನ್ನು ವಿವರಿಸಿದರು. ಕಾಯಕವೇ ಕೈಲಾಸದ ಮರ್ಮ ಹೇಳುತ್ತ ಜಗತ್ತಿನ ಮೊಟ್ಟ ಮೊದಲ ಸಮತಾವಾದಿ, ಸಮಾಜವಾದಿ ಬಸವಣ್ಣನವರು ಅರ್ಥದ ಗಳಿಕೆ, ಅರ್ಥದ ಬಳಕೆಗೆ ಸೂತ್ರಗಳನ್ನಿತ್ತರು. ಈ ದೇಶದಲ್ಲಿ ಕಾಯಕದಲ್ಲಿ ನಿಷ್ಠೆ ಇದೆ, ಆದರೂ ಬಸವಣ್ಣನವರ ತತ್ತ್ವ ಸಂಪೂರ್ಣ ಆಚರಣೆಗೆ ಬಂದಿಲ್ಲ. ಏಕೆಂದರೆ ಹಣಕ್ಕಾಗಿ, ಕೇವಲ ಹಣಕ್ಕಾಗಿ ಮಾಡುವ ಶ್ರದ್ಧಾವಂತ ದುಡಿಮೆ ಕಾಯಕವಾಗದು. ಹಣವು ಒಂದು ಭೌತಿಕ ಮೌಲ್ಯ (Material Value) ಅದರೊಡನೆ ನೈತಿಕ ಮೌಲ್ಯ ಮತ್ತು ಅಧ್ಯಾತ್ಮಿಕ ಮೌಲ್ಯ ಸಮಾವೇಶವಾದಾಗ ಮಾತ್ರ ದುಡಿಮೆಯು ಕಾಯಕವಾಗುತ್ತದೆ. ಸರಳವಾದ ಜೀವನ, ಹಂಚಿಉಣ್ಣುವ ಮನೋಭಾವ ನೈತಿಕ ಮೌಲ್ಯವಾದರೆ, ದೈವೀಶರಣಾಗತಿ ಆಧ್ಯಾತ್ಮಿಕ ಮೌಲ್ಯವಾಗುತ್ತದೆ. ಇಲ್ಲಿಯ ಬದುಕನ್ನು ನೋಡಿದಾಗ 'ಕಾಂಚನಕ್ಕೆ ವೇಳೆಯಲ್ಲದೆ ಲಿಂಗಕ್ಕೆ ವೇಳೆಯಿಲ್ಲ' ಎಂಬುದನ್ನು ಕಾಣುತ್ತೇವೆ. ಇದು ಕೇವಲ ದುಡಿತ ಮಾತ್ರ. ದಿನದ ಕೊಂಚ ಕಾಲವನ್ನು ಜ್ಞಾನಾರ್ಜನೆಗೆ ಸಾಹಿತ್ಯಾಧ್ಯಯನಕ್ಕೆ, ಧ್ಯಾನ—ದೈವೀ ಚಿಂತನೆಗೆ ಬಳಸಬೇಕು. ಈ ದೇಶದಲ್ಲಿ ವ್ಯಕ್ತಿತ್ವ ಬೆಳವಣಿಗೆಗೆ ಸಾಕಷ್ಟು ಅವಕಾಶಗಳಿದ್ದರೂ ಹಣ ಗಳಿಕೆಗೆ ಮಾತ್ರ ಸರ್ವಸ್ವವೂ ಮೀಸಲಾದರೆ ಮನುಷ್ಯ ಜೀವನದ ಸಾರ್ಥಕತೆ ಹೇಗಾಗುತ್ತದೆ ಬದುಕನ್ನು ಸಮಗ್ರ ಗೊಳಿಸಲೆಂದೇ ಪಂಚ ಆಚಾರಗಳೆಂಬ ನೀತಿ ಸಂಹಿತೆಗಳನ್ನು ಬಸವಣ್ಣನವರು ಕೊಟ್ಟರು ; ಎಂದು ವಿವರವಾಗಿ ಅರ್ಥೈಸಿದರು. ಒಂದೂಕಾಲು ಗಂಟೆಯಕಾಲ ಪ್ರವಚನ ಮಾಡಿದ ಮಾತಾಜಿಯವರ ವಿವರಣಾ ಶೈಲಿಯನ್ನು ಸಭಿಕರು ತುಂಬಾ ಮೆಚ್ಚಿಕೊಂಡರು.

ಜನ್ಮದಿನೋತ್ಸವ ಮತ್ತು ಬೀಳ್ಕೊಡುಗೆ

ಪೂಜ್ಯ ಮಾತಾಜಿಯವರ ಇರವನ್ನು ಇನ್ನಷ್ಟುಕಾಲ ಅನೇಕರು ಬಯಸಿದರು. ಆಧ್ಯಾತ್ಮ ಶಿಕ್ಷಣ ನೀಡುವ ಕೇಂದ್ರವೊಂದನ್ನು ತೆರೆಯಲು ಒತ್ತಾಯಿಸಿದರು. ಅಂಥ ಆಕಾಂಕ್ಷಿತರೆಲ್ಲರಿಗೆ ಮುಂದಿನ ವರ್ಷ ಬರುವ ಭರವಸೆ ನೀಡಿದರು. ಟಿಕೆಟ್ಟು 120 ದಿವಸಗಳ ಕಾಲ ಯೋಗ್ಯವಾದುದಿತ್ತು. ಹೀಗಾಗಿ 21ನೆಯ ದಿನಾಂಕದೊಳಗೆ ಬೆಂಗಳೂರನ್ನು ತಲ್ಪಲೇ ಬೇಕಿತ್ತು. ಎರಡನೆಯದಾಗಿ, ಸಂಸ್ಥೆಗೆ ಪ್ರವಚನ ಮಾಡಿ ಉದಾರವಾದ ಕಾಣಿಕೆಯನ್ನು ಸಂಗ್ರಹಿಸುವ ಅತ್ಯಮೂಲ್ಯ ಅವಧಿಯಾದ ನವೆಂಬರ್, ಡಿಸೆಂಬರ್, ಜನವರಿ, ಫೆಬ್ರುವರಿ ಕಳೆದುದಾಗಿತ್ತು. ಕಟ್ಟಲಾರಂಭಿಸಿದ ಶಾಲೆ ಮತ್ತು ವಸತಿ ನಿಲಯದ ಕಟ್ಟಡಗಳು ಅರ್ಧಂಬರ್ಧವಾಗಿ ಉಳಿದಿದ್ದುವು.

ಎಷ್ಟೋ ಬಾರಿ ಪ್ರವಾಸಕಾಲದಲ್ಲಿ ಪೂಜ್ಯ ಮಾತಾಜಿ ಚಿಂತಾಕ್ರಾಂತರಾಗಿ ಬಿಡುತ್ತಿದ್ದು, ಶಾಲೆಯ ಕಟ್ಟಡ ಅರ್ಧಕ್ಕೆ ನಿಂತಿದೆ. ಹೇಗೆ ಮಾಡುವುದು, ಆದ್ದರಿಂದ ಮಾರ್ಚಿ ಕೊನೆಯವಾರದೊಳಗೆ ಹೋಗಿ ಏಪ್ರಿಲ್—ಮೇ ಎರಡು ತಿಂಗಳುಗಳಲ್ಲಾದರೂ ಮಳೆಗಾಲ ಧಾವಿಸುವ ಮುನ್ನ ಪ್ರವಚನ ಮಾಡಬೇಕು ಎಂದು ನಿರ್ಧರಿಸಿದ್ದರು. ಕಳೆದ ವರ್ಷ ಈ ಹೊತ್ತಿಗಾಗಲೇ ಸಿಂಧನೂರು, ಬಳ್ಳಾರಿ ಪ್ರವಚನಗಳಿಂದಾಗಿ ಎರಡು ಲಕ್ಷದ ಮೇಲೆ ಧನಸಹಾಯ ಒದಗಿಯಾಗಿತ್ತು. ಇಲ್ಲಿಯ ಜವಾಬ್ದಾರಿಗಳನ್ನು ಸಂಪೂರ್ಣಗೊಳಿಸಿ ಅಮೆರಿಕಾದಲ್ಲಿ ಒಂದು ಕೇಂದ್ರವನ್ನು ತೆರೆಯುವುದಾಗಿ ಆತ್ಮೀಯರುಗಳಿಗೆ ವಾಗ್ದಾನ ಮಾಡಿದರು.

ಹೀಗಾಗಿ ಮಾರ್ಚಿಯಲ್ಲಿ ಹೊರಡುವುದು ಖಚಿತವಾದ ಕಾರಣ ಹಲವಾರು ಜನ ಸೇರಿ ಪೂಜ್ಯರ ಜನ್ಮದಿನೋತ್ಸವದೊಡನೆ ಬೀಳ್ಕೊಡುಗೆ ಸಹ ಜೊತೆಗೂಡಿಸಿ ಮಾಡಲು ಸಂಕಲ್ಪಿಸಿ ಮಾರ್ಚ್ 14 ರಂದು ಒಂದು ಸಮಾರಂಭವನ್ನು ಏರ್ಪಡಿಸಿದರು. ಹಿಂದೂ ದೇವಾಲಯದ ಸಭಾಂಗಣದಲ್ಲಿ ಸಮಾರಂಭ ಏರ್ಪಾಡಾಗಿತ್ತು. ಸಮಾರಂಭದ ಮುಂದಾಳತ್ವ ಶ್ರೀಮತಿ ಸತ್ಯ ಡಾ|| ವಿಶ್ವನಾಥ್, ಶ್ರೀಮತಿ ಜಯಾ ಡಾ|| ಶಿವಮೂರ್ತಿ, ಡಾ|| ಹುನಗುಂದ್ ಅವರದಾಗಿತ್ತು. ಸಹಕಾರ ಬಸವಾ ಇಂಟರ್ ನ್ಯಾಷನಲ್ ನವರು, ಹಿಂದೂ ದೇವಾಲಯದವರು, ನ್ಯೂಯಾರ್ಕ್ ವೀರಶೈವ ಸಮಾಜ, ವಾಷಿಂಗ್ಟನ್ ವೀರಶೈವ ಸಮಾಜ ಮತ್ತು ಇನ್ನೂ ಅನೇಕರದಾಗಿತ್ತು.

ಶ್ರೀಮತಿ ಬಾಲಾಂಬಾಳ್‌ರವರು ವಚನವೊಂದನ್ನು ಪ್ರಾರ್ಥನಾ ಗೀತೆಯನ್ನಾಗಿ ಹಾಡಿದರು. 'ಕುಮಾರಿ ಅಪ್ಸರಾ ಶಿವಮೂರ್ತಿ ಇಲ್ಲಿಯೂ 'ಬಾಬಾ ಬಾರೆಲೆ ಶಿವನೆ' ಭಾವಗೀತೆ ಹಾಡಿ ನರ್ತಿಸಿದಳು. ಡಾ|| ಹುನಗುಂದರವರು ಸ್ವಾಗತವನ್ನು ಮಾಡಿದರು. ಪ್ರೊ. ಶರ್ಮಾರವರು ಸಭೆಗೆ ಮಾತೆಯವರ ಪರಿಚಯ ಮಾಡಿಕೊಟ್ಟರು. ಅವರು ತಮಿಳು ನಾಡಿನ ಓರ್ವ ವಿದ್ವಾಂಸರು. ತೇಜಸ್ವಿಯಾದ, ಗಂಭೀರ ಅಷ್ಟೇ ಸಾತ್ವಿಕ ನಿಲುವಿನ ಅವರು 'ಜ್ಞಾನ ಸರಸ್ವತಿ' ಎಂದು ಪೂಜ್ಯ ಮಾತಾಜಿಯವರನ್ನು ಪರಿಚಯಿಸಿದರು. ಇಂದು ಪೂಜ್ಯ ಮಾತೆಯವರು 35 ವರ್ಷಗಳನ್ನು ದಾಂಟಿ ಮೂವತ್ತಾರಕ್ಕೆ ಕಾಲಿಡುವ ಸುದಿನ ನಮ್ಮೆಲ್ಲರ ಮಧ್ಯೆ ಅವರಿದ್ದಾರೆ. ಇದು ನಮ್ಮ ಪುಣ್ಯ. ಅವರು ಸಾಮಾನ್ಯರಲ್ಲ. ಅವರು ಮಾತನಾಡಿದರೆ ವಾಣಿಯ ವೀಣೆ ಮಿಡಿದಂತಾಗುತ್ತದೆ. ಕಂಠದಲ್ಲಿ ಮಾಧುರ್ಯ, ಶಬ್ದ ಸಂಪತ್ತಿನಲ್ಲಿ ವೈಭವ, ತತ್ತ್ವಜ್ಞಾನದಲ್ಲಿ ಆಳ-ಅವರ ಭಾಷಣದ ವೈಶಿಷ್ಟ್ಯ. ತಾತ್ತ್ವಿಕ ವಿಷಯಗಳನ್ನು ತಾರ್ಕಿಕವಾಗಿ ನಿರೂಪಿಸುವ ಶೈಲಿಗೆ ನಾನು ಮೆಚ್ಚಿದ್ದೇನೆ. ಅನೇಕ ಸಂದೇಹಗಳನ್ನವರು ಪರಿಹರಿಸಿದ್ದಾರೆ. ಹೊಸ ವಿಷಯಗಳ ದರ್ಶನ ಮಾಡಿಕೊಟ್ಟಿದ್ದಾರೆ. ಇವರು ನಿರಂತರವಾಗಿಯೂ ನಮ್ಮೊಡನೆ ಇದ್ದು ಮಾರ್ಗದರ್ಶನ ಮಾಡಿದರೆ ಎಷ್ಟು ಚೆನ್ನಾಗಿರುತ್ತದೆ. ಪ್ರತಿವರ್ಷವೂ ನಮ್ಮೊಡನೆ

ಅವರಿದ್ದು ಹುಟ್ಟುಹಬ್ಬ ಆಚರಿಸುವಂತಾದರೆ ಎಷ್ಟು ಚೆನ್ನ. ಅವರಿಗೆ ನಾವೆಲ್ಲರೂ ಎದ್ದು ನಿಂತು "Happy birthday" ಎಂದು ಒಟ್ಟಾಗಿ ನುಡಿಯೋಣ" ಎಂದರು. ಸಭಿಕರೆಲ್ಲ ಎದ್ದು ನಿಂತು Happy birthday ಎಂದು ಒಕ್ಕೊರಲಿನಿಂದ ನುಡಿದರು. ಪ್ರೊ. ಶರ್ಮಾರಂತಹ ವಿದ್ವಾಂಸರು ಇಂಥ ನುಡಿಗಾಣಿಕೆಯನ್ನು ಅರ್ಪಿಸುವಾಗ ನನ್ನ ಮನಸ್ಸು ಆನಂದತುಂದಿಲವಾಗಿತ್ತು. "ವಿದ್ವಾನ್ ಸರ್ವತ್ರ ಪೂಜ್ಯತೆ" ಎಂಬ ಸುಭಾಷಿತೋಕ್ತಿ ಅಣುರಣಿಸುತ್ತಿತ್ತು.

ಡಾ|| ಹುನಗುಂದರವರು ಬಿನ್ನವತ್ತಳೆಯನ್ನು ಓದಿ, ಸಮರ್ಪಿಸಿದರು. ಶ್ರೀಮತಿ ಸತ್ಯ ವಿಶ್ವನಾಥ್ ಫಲಪುಷ್ಪ ಕಾಣಿಕೆಗಳನ್ನು ಅರ್ಪಿಸಿದರು. ಶ್ರೀಮತಿ ಪ್ರಸನ್ನ ಸ್ವಾಮಿಯವರು ಕಾವಿ ಬಣ್ಣದ ಸುಂದರ ಶಾಲೊಂದನ್ನು ಜನ್ಮದಿನೋತ್ಸವದ ಕಾಣ್ಕೆಯಾಗಿ ನೀಡಿದರು. ನೆರೆದಿದ್ದ ಅನೇಕ ಸದ್ಭಕ್ತರು ತಮ್ಮ ತಮ್ಮ ಕಾಣಿಕೆ, ಫಲ-ಪುಷ್ಪಗಳನ್ನು ಹೃತ್ಪೂರ್ವಕವಾಗಿ ಸಮರ್ಪಿಸಿದರು.

ಈ ಅಭಿಮಾನದ ಅಭಿನಂದನೆ, ಕಾಣಿಕೆಗಳನ್ನು ಪಡೆದ ಪೂಜ್ಯ ಮಾತಾಜಿಯವರು ಹೃತ್ಪೂರ್ವಕವಾದ ದಾಟಿಯಲ್ಲಿ ಮಾತನಾಡಿದರು. ತಮ್ಮ ಜೀವನವು ಪರಮಾತ್ಮನ ಕೈಯೊಳಗಿಹ ದೈವೀಪಟವೆಂದು, ದೈವೀಶಕ್ತಿ, ಈ ಲೀಲಾರಂಗದಲ್ಲಿ ಆಡಿಸುತ್ತಿದೆ ಎಂದು, ತಮ್ಮ ಜೀವನದಲ್ಲಿ ಆಧ್ಯಾತ್ಮದತ್ತ ಒಲವು ಬೆಳೆದುದನ್ನು ವಿವರಿಸಿದರು. ಜಗನ್ಮಾತಾ ಅಕ್ಕಮಹಾದೇವಿಯ ಅನುಗ್ರಹ ತಮ್ಮ ಬದುಕಿನಲ್ಲಿ ಎಂಥ ಬದಲಾವಣೆ ತಂದಿತೆಂಬುದನ್ನು ವಿವರಿಸಿದಾಗ ಸಭಿಕರು ಯಾವುದೋ ಮೋಡಿಗೊಳಗಾದಂತೆ ಕುಳಿತಿದ್ದರು. ಮಾತಾಜಿಯವರು ತಮ್ಮ ವ್ಯಕ್ತಿ ಜೀವನದ ಆರೋಹಣೆಯ ಘಟ್ಟಗಳನ್ನು, ವಿಶ್ವಕಲ್ಯಾಣ ಮಿಷನ್ ಕಾರ್ಯ ಮಾಡುವ ರೀತಿಯನ್ನು, ಅದರ ಮುಂದಿನ ಯೋಜನೆಗಳನ್ನು ವಿವರಿಸಿದರು. ನಂತರ ಬಹುಪಾಲು ಜನರ ಅಪೇಕ್ಷೆಯ ಮೇರೆಗೆ ಪುನರ್ಜನ್ಮ ಸಿದ್ಧಾಂತದ ಬಗ್ಗೆ ಮಾತನಾಡಿದರು. ಶಾಸ್ತ್ರಗಳು, ಸಂತರ ಉಕ್ತಿಗಳು, ಮತ್ತು ಸ್ವಾನುಭವ-ಈ ಮೂರರ ಆಧಾರದ ಮೇಲೆ ಅವರು ಮಾತನಾಡಿದಾಗ ಎಲ್ಲರೂ ಹರ್ಷಿಸಿದರು. ಪ್ರವಚನಾನಂತರ ದೀರ್ಘಕಾಲದವರೆಗೆ ಸಭಿಕರು ಚರ್ಚೆಯನ್ನು ಮಾಡಿದರು. ಪ್ರಶ್ನೆ ಕೇಳಿ ಸಂದೇಹ ಪರಿಹರಿಸಿಕೊಂಡರು. ಕಾರ್ಯಕರ್ತರು ವೇಳೆಯ ಬಗ್ಗೆ ಎಚ್ಚರಿಕೆ ನೀಡುತ್ತಿದ್ದರೂ ಕಾಲದ ಪರಿವೆ ಇಲ್ಲದೆ ಇನ್ನೂ ಮಾರ್ಗದರ್ಶನ ಪಡೆದುಕೊಳ್ಳಲಾತುರ ಪಡುತ್ತಿದ್ದರು.

ವಿಶ್ವಕಲ್ಯಾಣ ಮಿಷನ್ ಪರವಾಗಿ ಕ್ಯಾಂಡಿ (ಚಾಕಲೇಟ್, ಪೆಪ್ಪರಮೆಂಟ್) ಗಳನ್ನು ಸಭಿಕರಿಗೆ ಹಂಚಲಾಯಿತು. ಶ್ರೀಮತಿ ಜಯಾ, ಶ್ರೀಮತಿ ಸತ್ಯ ಮತ್ತು

ಶ್ರೀಮತಿ ಉಮಾ ಲಿಂಗರಾಜು ಶ್ರೋತೃಗಳಿಗೆಲ್ಲ ತಿಂಡಿತಿನಿಸು ತಯಾರಿಸಿದ್ದರು. ಪ್ರಸಾದ ಸವಿದಾನಂತರ ಸಭಿಕರು ಬೀಳ್ಕೊಂಡರು. ಎಲ್ಲರ ಬಾಯಲ್ಲಿ ಒಂದೇ ಮಾತು. "ಬೇಗ ಬನ್ನಿ. ತಾಯಿಯಷ್ಟೇ ಮಕ್ಕಳ. ಅಳಲು ಅರ್ಥಮಾಡಿಕೊಳ್ಳಬಲ್ಲಳು." ಮಾತಾಜಿ ನುಡಿದರು, 'ಪ್ರಯತ್ನ ನಮ್ಮದು ಫಲ ಪರಮಾತ್ಮನದು. ಆ ದೈವೀ ಸಂಕಲ್ಪಕ್ಕೆ ತಲೆಬಾಗಬೇಕು. ಪರಮಾತ್ಮನ ಇಚ್ಛೆ ಇದ್ದರೆ ಖಂಡಿತಾ ಬರೋಣ.' ★

Opinions of some Spiritual Souls

Yoga Society of San Fransisco
Nada Brahmananda Ashrama
2872, Folsom Street, San Fransisco

Blessed self in the form of
Dear Jagadguru Mate Mahadevi

Thank you for gracing us with your presence for the past two days. Words are not a fitting way to express our heart felt appreciation of your mission and especially your visit with us. Sathyam Shivam Sundaram

21 February, 1981

your servant, Kriyananda

For and from all my friends at the yoga society
(ಕ್ರಿಯಾನಂದ ಎಂದು ಹೆಸರು ಹೊಂದಿರುವವರು ಹುಟ್ಟಾ ಅಮೆರಿಕನ್ನರು.)

ಬಸವ ಜಯಂತಿ ಶುಭಾಶಯಗಳು

ಹಬ್ಬ-ಜಯಂತ್ಯುತ್ಸವಗಳಂದು ಶುಭ ಹರಕೆಗಳನ್ನು ಕಳಿಸುವುದು ಸತ್ಸಂಪ್ರದಾಯ. ಮಹಾತ್ಮರ ನಾಮಸ್ಮರಣೆ ಮಾಡಿ ಅವರ ಜಯಂತಿಯ ನೆನಪು ಮಾಡಿಕೊಡುವುದು ಇನ್ನೂ ಉತ್ತಮ ಕಾರ್ಯ.

ಮೇ 6, 1981 ರಂದು ಬಸವಣ್ಣನವರ ಜನ್ಮ ದಿನೋತ್ಸವ. ನೀವು ನಿಮ್ಮ ಬಂಧು-ಮಿತ್ರರಿಗೆಲ್ಲ ಶುಭಾಶಯ ಕಳಿಸಿರಿ. ಅಂದದ ತ್ರಿವರ್ಣಮಯ ಭಾವಚಿತ್ರವುಳ್ಳ, ಸುಂದರ ಕಾವ್ಯಮಯ ಹರಕೆಯುಳ್ಳ ಗ್ರೀಟಿಂಗ್ಸ್ ದೊರೆಯುತ್ತವೆ. ಅಂಚೆಯಲ್ಲಿ ತರಿಸಿಕೊಂಡು ಆತ್ಮೀಯರಿಗೆ ಕಳಿಸಿರಿ.

ಒಂದಕ್ಕೆ ಒಂದು ರೂಪಾಯಿ, ನಾಲ್ಕಕ್ಕೆ 3 ರೂಪಾಯಿ. ಎಂ.ಓ ಮಾಡಿ.

ದಯವಿಟ್ಟು ಬೆಂಗಳೂರು ಬಸವ ಮಂಟಪದ ವಿಳಾಸಕ್ಕೆ ಬರೆಯಿರಿ

SCROLL OF HONOUR
Presented to

The first lady Jagadguru, a great philosopher, the founder of Viswakalyana Mission, the propagator of universal religion, a messiah of Hindu heritage, the blessed ambassador of Basava-ism, a moving temple of Knowledge.

HER HOLINESS JAGADGURU MATE MAHADEVI
Viswakalyana Mission, Bangalore, India.

Your Holiness Mataji

It is a great pleasure for us to welcome you here in the United States of America and hear the divine message from you. You are a great mystic-philosopher, and a powerful orator who has impressed our minds deeply. Your logical consistency, method of narration and zeal to uplift the mass from slumber of ignorance are all tremendous.

Ambassador of Hindu Heritage

Your short visit to this country has inspired many people. It has kindled spark of knowledge and religiousness in us and it has made us to feel proud of the greatness of Hindu heritage. Philosophy of Lord Basava, as depicted by you, has broadened our vision and has inspired us to move towards universal brotherhood. You have taught us to become golden coins in this mortal world, which is the creator's mint.

Holy Mother

You are a source of inspiration, and an abode of solace to us. Your presence, we feel it a great necessity here to show the path of divinity to those who are groping in the darkness of ignorance: We request you to open a spiritual centre here and to guide us in the path of eternity.

We are presenting this scroll of honour to your lotus hands with humble salutations, on this auspicious occassion of your thirty sixth birthday. Let Lord bless you to have a long and healthy life and thus bless us to hear your divine message.

Date : March 14, 1981. Devotees

Place : Hindu temple, New York

ಪೂಜ್ಯ ಮಾತಾಜಿಯವರಿಗೆ ಬೀಳ್ಕೊಡುಗೆ ಸಮಾರಂಭದಲ್ಲಿ ಅರ್ಪಿಸಿದ
ಬಿನ್ನವತ್ತಳೆಯ ಕನ್ನಡ ರೂಪಾಂತರ

ಪ್ರಪ್ರಥಮ ಮಹಿಳಾ ಜಗದ್ಗುರು, ಶ್ರೇಷ್ಠ ತತ್ತ್ವಜ್ಞಾನಿ, ವಿಶ್ವಕಲ್ಯಾಣ ಮಿಷನ್ ಸಂಸ್ಥಾಪಕರು, ವಿಶ್ವಧರ್ಮ ಪ್ರಸಾರಕರು, ಹಿಂದೂ ಪರಂಪರೆಯ ಧರ್ಮದೂತರು, ಬಸವ ತತ್ತ್ವದ ರಾಯಭಾರಿ, ಸಂಚರಿಪ ಜ್ಞಾನ ದೇಗುಲ

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ವಿಶ್ವಕಲ್ಯಾಣ ಮಿಷನ್, ಬೆಂಗಳೂರು, ಭಾರತ
ಅವರಿಗೆ ಅರ್ಪಿಸಿದ

ಸ ನ್ಮಾ ನ ಪ ತ್ರ

ಪೂಜ್ಯ ಮಾತಾಜಿಯವರೇ,

ಅಮೆರಿಕಾದ ಸಂಯುಕ್ತ ಸಂಸ್ಥಾನಕ್ಕೆ ತಮ್ಮನ್ನು ಬರಮಾಡಿಕೊಂಡು, ತಮ್ಮ ದಿವ್ಯ ಸಂದೇಶವನ್ನಾಲಿಸಲು ನಮಗೆ ಅತೀವ ಆನಂದವಾಗುತ್ತಿದೆ.

ತಾವು ಶ್ರೇಷ್ಠ ಮಟ್ಟದ ಅನುಭಾವಿಗಳು, ತತ್ತ್ವಜ್ಞಾನಿಗಳು, ಮತ್ತು ಪರಿಣಾಮಕಾರಿ ವಾಗ್ಮಿಗಳು. ಅಪೂರ್ವ ವಾಗ್ಮಿತ್ವದಿಂದ ನಮ್ಮ ಮನಸ್ಸಿನ ಮೇಲೆ ಆಳವಾದ ಪ್ರಭಾವ ಬೀರಿದ್ದೀರಿ. ನಿಮ್ಮ ತಾರ್ಕಿಕ ಸುಸಂಬದ್ಧತೆ, ನಿರೂಪಣಾ ಶೈಲಿ ಮತ್ತು ಅಜ್ಞಾನದ ಅಂಧಕಾರದಿಂದ ಜನತೆಯನ್ನು ಮೇಲೆತ್ತಬೇಕೆಂಬ ಕಳಕಳಿ ಅಸಾಮಾನ್ಯವಾಗಿವೆ.

ಹಿಂದೂ ಪರಂಪರೆಯ ರಾಜದೂತರೇ

ಈಗ ನೀವು ನೀಡಿರುವ ಅಲ್ಪಕಾಲೀನ ಸಂದರ್ಶನ ಅನೇಕರಿಗೆ ಸ್ಫೂರ್ತಿ ನೀಡಿದೆ. ಜ್ಞಾನದ ಕಿಡಿಯನ್ನು ಹಚ್ಚಿದೆ. ಧಾರ್ಮಿಕ ಪ್ರಜ್ಞೆಯನ್ನು ಉದ್ದೀಪಿಸಿದೆ. ಹಿಂದೂ ಪರಂಪರೆಯ ಬಗ್ಗೆ ಹೆಮ್ಮೆ ಪಡುವಂತೆ ಮಾಡಿದೆ. ನೀವು ವಿವರಿಸಿರುವಂತೆ ಬಸವಣ್ಣನವರ ತತ್ತ್ವಜ್ಞಾನವು ನಮ್ಮ ವಿಚಾರಧಾರೆಯನ್ನು ವಿಸ್ತಾರಗೊಳಿಸಿದೆ. ವಿಶ್ವ ಭ್ರಾತೃತ್ವದೆಡೆಗೆ ಸಾಗಲು ನಮಗೆ ಸ್ಫೂರ್ತಿ ನೀಡಿದೆ. ಪರಮಾತ್ಮನ ಕಮ್ಮಟವಾದ ಈ ಮರ್ತ್ಯದಲ್ಲಿ ನಾವು ಹೇಗೆ ಸಲುವ ಚಿನ್ನದ ನಾಣ್ಯಗಳಾಗಬೇಕೆಂಬುದನ್ನು ಮನಗಾಣಿಸಿದ್ದೀರಿ.

ಪವಿತ್ರಾತ್ಮ ತಾಯಿಯವರೇ,

ನೀವು ಸ್ಫೂರ್ತಿಯ ಚಿಲುಮೆ; ಶಾಂತಿಯ ಧಾಮ. ನಿಮ್ಮ ಇರುವಿಕೆ ನಮಗೊಂದು ಅವಶ್ಯಕತೆ ಎನ್ನಿಸುತ್ತಿದೆ. ಅಜ್ಞಾನದ ಅಂಧಕಾರದಲ್ಲಿ ಎಡವುತ್ತಿರುವವರು ದೈವತ್ವದ ಪಥದಲ್ಲಿ ಸಾಗಲು ನಿಮ್ಮ ದರ್ಶನ ಅತ್ಯವಶ್ಯಕ. ಇಲ್ಲಿ ಒಂದು ಆಧ್ಯಾತ್ಮಿಕ ಕೇಂದ್ರವನ್ನು ತೆರೆದು, ನಿತ್ಯತ್ವದ ಪಥದಲ್ಲಿ ನಡೆಯಲು ನಮಗೆ ಕರುಣಿಸಿರೆಂದು ಬೇಡುತ್ತೇವೆ.

ಈ ಸನ್ಮಾನ ಪತ್ರವನ್ನು ತಮ್ಮ ಕರಕಮಲಗಳಿಗೆ ಅತ್ಯಂತ ಹೃತ್ಪೂರ್ವಕವಾಗಿ ಮತ್ತು ವಿನಯಪೂರ್ವಕವಾಗಿ 36ನೆಯ ಹುಟ್ಟು ಹಬ್ಬದ ಪವಿತ್ರ ದಿನದಂದು ಸಮರ್ಪಿಸುತ್ತಿದ್ದೇವೆ. ಪರಮಾತ್ಮನು ತಮಗೆ ಆರೋಗ್ಯಯುಕ್ತವಾದ ದೀರ್ಘ ಆಯುಷ್ಯವನ್ನು ನೀಡಿ, ತನ್ಮೂಲಕ ನಮಗೆ ನಿಮ್ಮ ದಿವ್ಯ ಸಂದೇಶ ದೊರೆಯುವಂತೆ ಮಾಡಲೆಂದು ಹಾರೈಸುತ್ತೇವೆ.

ಮಾರ್ಚ್ 14, 1981 **ಸದ್ಭಕ್ತ ವೃಂದ.**
ಹಿಂದೂ ದೇವಾಲಯ, ನ್ಯೂಯಾರ್ಕ್

"ಬಸವ ಭಾರತಿ" ವಿದ್ಯಾಲಯ

ಪಾಲಕರಿಗೆ ಸೂಚನೆ

"ಬಸವ ಭಾರತಿ" ವಿದ್ಯಾಲಯವು ತನ್ನ ಐದು ಆರು ಮತ್ತು ಎಂಟನೆಯ ತರಗತಿಯೊಡನೆ ಪ್ರಾರಂಭವಾಗಿದೆ. ಆಂಗ್ಲ ಮತ್ತು ಕನ್ನಡ ಮಾಧ್ಯಮಗಳೆರಡರಲ್ಲೂ ಶಿಕ್ಷಣವು ಲಭ್ಯವಿದೆ. ಬಸವ ಭಾರತಿ ವಿದ್ಯಾಲಯ ವಸತಿ ಸಹಿತ (Residential) ಶಾಲೆ ಇದ್ದು ಇಲ್ಲಿ ಮಕ್ಕಳಿಗೆ ಶುಚಿಯಾದ ವಾತಾವರಣ, ಪ್ರಶಾಂತ ಪರಿಸರ, ರುಚಿಯಾದ ಊಟ, ಉತ್ತಮ ರೀತಿಯ ಶಿಕ್ಷಣವನ್ನು ಕೊಡಲಾಗುತ್ತದೆ. ದೈಹಿಕ, ಮಾನಸಿಕ, ನೈತಿಕ ಮತ್ತು ಆಧ್ಯಾತ್ಮಿಕ ಮುಂತಾಗಿ ಸರ್ವತೋಮುಖ ಬೆಳವಣಿಗೆಗೆ ಅವಕಾಶ ನೀಡಲಾಗುತ್ತಿದೆ.

೧೯೭೯–೮೦–೮೧ನೇ ಸಾಲಿಗೆ ಐದು ಆರು ಮತ್ತು ಎಂಟನೆಯ ತರಗತಿಯು ಆರಂಭವಾಗಿದ್ದು, ೧೯೮೧–೮೨ರ ಸಾಲಿತ ೭ ಮತ್ತು ೯ನೇ ತರಗತಿಗಳು ಆರಂಭವಾಗಲಿವೆ. ಈ ಎಲ್ಲ ತರಗತಿಗಳಲ್ಲಿ ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮಗಳೆರಡೂ ಇದ್ದು, ಪ್ರವೇಶಾವಕಾಶ ಲಭ್ಯವಾಗಿರುತ್ತವೆ. ಆದ್ದರಿಂದ ೧೯೮೧ ಮೇ ೨೨ರಿಂದು ತೆರೆಯಲ್ಪಡುವ ಐದು, ಆರು, ಏಳು, ಎಂಟು ಮತ್ತು ಒಂಬತ್ತನೆಯ ತರಗತಿಗಳಿಗೆ (ಇಂಗ್ಲಿಷ್ ಮತ್ತು ಕನ್ನಡ ಮಾಧ್ಯಮ) ಮಕ್ಕಳನ್ನು ಸೇರಿಸಬಯಸುವ ಪಾಲಕರು ಏಪ್ರಿಲ್ ೩೦ ರೊಳಗೆ ೫ ರೂ. ಕಳಿಸಿ ಪ್ರಾಸ್ಪೆಕ್ಟಸ್ ತರಿಸಿಕೊಳ್ಳಬೇಕು. ಮೇ ೮ನೆಯ ತಾರೀಖಿನೊಳಗೆ ಅರ್ಜಿಗಳನ್ನು ಸಲ್ಲಿಸಬೇಕು. ಆರಿಸಿ, ಸಂದರ್ಶನಕ್ಕೆ ಕರೆದು ಪರೀಕ್ಷೆಗೆ ಒಳಪಡಿಸಲಾಗುವುದು.

ಪ್ರಾಥಮಿಕ ಒಂದರಿಂದ ನಾಲ್ಕರವರೆಗೆ ಕನ್ನಡ ಮಾಧ್ಯಮದಲ್ಲಿ ಓದಿಸಿದ್ದು ವಿಶೇಷ ಕಾರಣಗಳಿಗಾಗಿ ಆಂಗ್ಲ ಮಾಧ್ಯಮ ಬಯಸಿದರೆ ೫ನೇಯ ತರಗತಿಯಿಂದ ೭ನೇ ತರಗತಿಗಳಿಗೆ ವಿಶೇಷ ತರಬೇತಿ ನೀಡಿ, ೮ನೇಯ ತರಗತಿಗಳಿಗೆ ಆಂಗ್ಲ ಮಾಧ್ಯಮವನ್ನು ನೀಡಲಾಗುವುದು, ಅಂಥ ಪಾಲಕರು ಅರ್ಜಿ ಪತ್ರದಲ್ಲಿ ತಮ್ಮ ಇಚ್ಛೆಯನ್ನು ತಿಳಿಸಬೇಕು.

ಕಾರ್ಯದರ್ಶಿ,
ವಿ. ಕ. ಮಿ. ಎಜುಕೇಶನ್ ಸೊಸೈಟಿ
ನಂ. 24, ಕಾರ್ಡ್‌ರಸ್ತೆ, ರಾಜಾಜಿನಗರ, ಎರಡನೆಯ ವಿಭಾಗ, ಬೆಂಗಳೂರು

ನೀಡಿ ಭಿಕ್ಷ

ಹರಿಣಿಯಾರಡಿನವಿಲೆ ಶುಕ ಪಿಕಾದಿಗಳೆ
ಒರೆಯಿತಾ ನೀವೆನಗೆ ಎನ್ನಾಣ್ಮನಿರವ ॥ ಪ ॥

ಗಾಳಿಯಂದದ ಓಟ ಕಣ್ಸೆಳೆವ ಮೈಮಾಟ
ಲೋಲಾಕ್ಷಿಯರ ಜರಿವ ಚಂಚಲಾಕ್ಷ
ಮೇಲಾರ ಚೆಲುವಿತ್ತು ನಿನ್ನ ಪಡೆದವನಿರವ
ಹೇಳೆನಗೆ ಹರಿಣಿ ಬೇಡುವೆನು ಭಿಕ್ಷ ॥ ೧ ॥

ಮಾನಿನಿಯೆ ನಿನಗೊಲಿದು ಮಧುರಗಾನವನಿತ್ತು
ಕಾನನದ ಹೂಗಳ ಪರಾಗವೀಂಟೆ
ಜೇನುಗೈಯುವ ಕಲೆಯ ಕಲಿಸಿದಾತನ ನೆಲೆಯ
ನೀನರುಹು ದುಂಬಿ ಇರಲಾರೆನೊಂಟೆ ॥ ೨ ॥

ತಿಳಿಹಸಿರು ಮಿಗೆನೀಲಿ ಹಳದಿಕಪ್ಪುಗಳೊಡನೆ
ಸಲೆಶೋಭಿಸುವ ನಿನ್ನ ಸೋಗೆ ಸೃಜಿಸಿ
ನಲಿದು ನಾಟ್ಯವನಾಡಲರುಹಿದಾತನ ಎಡೆಯ
ತಿಳಿಸೆನಗೆ ನವಿಲೆ ಬೆರೆಯೆ ಸಹಕರಿಸಿ ॥ ೩ ॥

ಕರಮೆಸೆವ ನಲ್ಗೆಂಪು ರಂಗಿತ್ತು ಚಂಚುವಿಗೆ
ಮೆರೆವ ಹಸಿರಿತ್ತು ಮೈದಡವಿ ಮೈಗೆ
ಕೊರಳಿಗಿನಿದನಿಯಿತ್ತು ನಿನ್ನ ಧರೆಗಿತ್ತವನ
ಅರೆಗಿಳಿಯೆ ಒರೆದು ಗೈಸವನ ಬೆಸುಗೆ ॥ ೪ ॥

ಮಾಘಪಾಲ್ಗುಣಗಳೆದು ಚೈತ್ರಬಂದಾಕ್ಷಣವೆ
ರಾಗದಿಂ ಪಾಡಲಿಕೆ ನಿನಗೆ ಕಲಿಸಿ
ಭೋಗಿಗಳ ನೇಹಕ್ಕೆ ಪಾತ್ರನಾಗಿಸಿದವನ
ಕೋಗಿಲೆಯೆ ತೋರು ಕೂಡಲುಪಕರಿಸಿ. ॥ ೫ ॥

—ಪಿ. ಬಸವಣ್ಣ, ನಿಜಗುಣಕ್ಷೇತ್ರ

ಪರಮ ಪದವಿಯು ನಿನಗೆ ಸ್ವಯವಹುದು ತಾಯೆ

ಮಾ. ನಂ. ನಂಜಪ್ಪ

ಬಸವ ಮಂಟಪದಿಂದ ಪುರಭವನಕೈತಂದು
ಜಸವೆತ್ತ ಸಭೆಯೊಳಗೆ ಮಂತ್ರಿವಣಿಜರು ವಿಬುಧ-
ರೊಸೆದು ಪೊಗಳುತ್ತಿರಲು ಶರಣ ಶರಣೆಯರೆಲ್ಲ
ದೆಸೆದೆಸೆಗಳಿಂ ಭಕ್ತಿ ಕಾಣಿಕೆಯ ನಿಡುತಿರಲು

ಶತಶತದ ಬಹುವಿಧ ಸುಗಂಧಸುಮ ಮಾಲೆಗಳ
ಚರಣಕರ್ಪಿಸುತಿರಲು ಮುಗುಳು ನಗೆಯಿಂ ಹರಸಿ
ಎಲ್ಲರ ಪ್ರಶಂಸೆ ಭಾರವನು ಶಿರದೊಳಗಾಂತು
ಅನುಪಮದ ಅನುಭವವ ಸಂತಸದಿ ಸಭೆಗೊರೆದು

ಹಿಂದೆ ಕಲ್ಯಾಣದಾ ಅನುಭಾವ ಮಂಟಪದೆ
ಬಸವ ಪ್ರಭು ಶರಣ ಶರಣೆಯರಿಂದ ಬೀಳ್ಕೊಂಡು
ನಿಮ್ಮ ತಲೆಗೆಲ್ಲ ಹೂವನುತಾಹೆ ಹುಲ್ಲ ತರೆ
ಎಂದ ಅಕ್ಕನ ವಾಣಿಯೊಡನೆ ಹೊರಟರಿ ಅಂದು

ಆದರೇನ್ :

ಅಂದು ಹೊರಟುದು ಅಕ್ಕ ಇಂದು ಹೊರಟುದು ಮಾತೆ
ಸೋದರಿಗೂ ಮಾತೆಗೂ ಕಾಲಚಕ್ರದ ಭೇದ
ಸಮಯ ಸಂದರ್ಭಗಳು ಮುಂದು ಮುಂದೋಡುತಿವೆ
ಶ್ರೀಗಿರಿಯ ಕದಳೀವನಕೆ ಪೋದ ಆ ಅಕ್ಕ

ಮರಳಲೇ ಇಲ್ಲ ಹೂವನು ಹಿಡಿದು ತವರಿಂಗೆ
ವರದ ಗುರು ಚನ್ನಮಲ್ಲೇಶ ಪದಕಮಲದಲಿ
ಪರಮ ಪದವಿ ಪಡೆದಳೊಬ್ಬಳೇ ಏಕಾಂಗಿ
ಈ ಮಾತೆ ಹಾಂಗೆ ಮಾಡದೆ ಕಾಲಸ್ಥಿತಿ ನೆನೆದು

ಪರಮ ಪದವಿಯ ಮರೆತು ಇಹಸುಖದೆ ನರಳುತಲಿ
ಸಾಂಪ್ರದಾಯಿಕ ಮೌಢ್ಯ ತೇಲ್ಮುಳುಗ ಹಾಕುತಿಹ
ಮಂಕರನು ಎಚ್ಚರಿಸಿ ನಿಜಪಥವನರುಹಲ್ಕೆ
ಮರೆಯದೇ ಹೂವಿಡಿದು ತವರಿಂಗೆ ಬಾ ತಾಯೆ


ರಾಷ್ಟ್ರವೆಲ್ಲವ ಮನೋವೇಗದಲಿ ಸಂಚರಿಸಿ
ಜನಮನೋಮಾಲಿನ್ಯವನು ಕಳೆದು ತಿಳಿಗೊಳಿಸಿ
ಮಹಿಳೆಯರ ಮನದಿ ಸಂಸ್ಕೃತಿ ಸ್ಥೈರ್ಯ ನೆಲೆಗೊಳಿಸಿ
ತುಷ್ಟಿ ಪುಷ್ಟಿ ಸಮಷ್ಟಿ ಭಾವ ಬಳೆಸೌ ಮಾತೆ

ಅಂದು ಅಕ್ಕನು ಗಿರಿಯನಿಳಿದು ಬಂದಿದ್ದರೂ
ವೇಗವಾಹನ ಸುದ್ದಿ ವ್ಯವಹಾರವೊಂದಿರದೆ
ಇಂದು ಮಾತೆಗೆ ಅಂಚೆ ತಂತಿ ಮೋಟರು ರೈಲು
ಪವನವಾಹನವಿಹವು ಪ್ರಸರಣಕೆ ಸೌಲಭ್ಯ

ಶರಣರಧ್ಯಾತ್ಮವನು ಪಾಶ್ಚಾತ್ಯರಲಿ ಬಿತ್ತಿ
ಅವರ ನಿಷ್ಠಾ ನಿಯಮ ದುಡಿಮೆ ಶಿಸ್ತೆಲ್ಲವನು
ಹಿಡಿದೆತ್ತಿ ತಂದು ಇಲ್ಲೆಲ್ಲರಿಗು ಕಲಿಸಲ್ಕೆ
ಪವನವಾಹನವೇರಿ ಬೇಗ ಬಾ ತಾಯೆ

ಬಸವ ಮಂಟಪ ಬಸವ ಭಾರತೀ ನಾಡೆಲ್ಲ
ಚಾತಕವು ಸ್ವಾತಿಗಂ ಕಾಯ್ದಂತೆ ಕಾಯುತಿವೆ
ಗುರುಬಸವಲಿಂಗ ಕರುಣೆಯು ನಿಮಗೆ ಒಲಿದಿಹುದು
ಬಾ ಮಾತೆ ಬೇಗ ಬಂದೆಲ್ಲರನು ಮುದಗೊಳಿಸು. ★

"ಪುಣ್ಯವುಳ್ಳ ಕಾಲಕ್ಕೆ ಪಾಷಾಣ ಪರುಷವಪ್ಪುದು ನೋಡಯ್ಯ
ಮಣ್ಣ ಮರೆಯ ದೇಗುಲದೊಳಗೊಂದು ಮಾಣಿಕ್ಯವ ಕಂಡ ಬಳಿಕ
ಇನ್ನು ಮುನ್ನಿನಂತಪ್ಪುದೇ ಗುಹೇಶ್ವರ"



ಲೇ: ಜಗದ್ಗುರು ಮಾತೆ ಮಹಾದೇವಿ.

ಅಮೆರಿಕಾದೇಶ ಮತ್ತು ವೈಯಕ್ತಿಕ ಒಡೆತನ

ಯು. ಎಸ್. ಎ.ಯಲ್ಲಿ ಅತ್ಯದ್ಭುತ ಪ್ರಗತಿ ಸಾಧಿಸಲು ಇಲ್ಲಿ ವೈಯಕ್ತಿಕ ಒಡೆತನ ಮತ್ತು ವ್ಯಕ್ತಿ ಸ್ವಾತಂತ್ರ್ಯಕ್ಕೆ ತುಂಬಾ ಅವಕಾಶವಿರುವುದೇ ಕಾರಣ. ರಶಿಯಾಕ್ಕೆ ತದ್ವಿರುದ್ಧವಾದ ವ್ಯವಸ್ಥೆ ಇಲ್ಲಿದೆ. ಅಲ್ಲಿ ವ್ಯಕ್ತಿ ಸ್ವಾತಂತ್ರ್ಯ ಏನೂ ಇಲ್ಲ; ಇಲ್ಲಿ ಅದು ಸಂಪೂರ್ಣ.

ಪೋಸ್ಟಲ್ ಸರ್ವಿಸ್, ರೇಲ್ವೆ (ಕೆಲವು ಲೈನುಗಳು ಮಾತ್ರ) ಮತ್ತು ಡಿಫೆನ್ಸ್ (ರಕ್ಷಣಾ ವಿಭಾಗ) ಬಿಟ್ಟರೆ ಬಾಕಿ ಎಲ್ಲವೂ ವೈಯಕ್ತಿಕ ಸ್ವಾಮ್ಯಕ್ಕೆ ಸೇರಿದವು. ಕೆಲವು ವೈಯಕ್ತಿಕ ಪೋಸ್ಟಲ್ ಸರ್ವಿಸ್ ಸಹ ಇದೆ. ನಮ್ಮ ದೇಶಕ್ಕೂ ಇಲ್ಲಿಯ ಅಂಚೆ ಸೇವೆಗೂ ಅಜಗಜಾಂತರ ವ್ಯತ್ಯಾಸ. ಇಲ್ಲಿ ಅಷ್ಟು ಚೆನ್ನಾಗಿದೆ. ವಿಳಂಬ ನೀತಿಯಿಲ್ಲ. ಜಾಗರೂಕತೆ ಇದೆ. ಪೋಸ್ಟ್‌ಮನ್ನರಿಗೆ ವ್ಯಾನ್ ವ್ಯವಸ್ಥೆ ಇದೆ. ಅವರು ಇಳಿದು ಓಡಾಡಬೇಕಾದುದೇ ಇಲ್ಲ. ಮುಖ್ಯ ರಸ್ತೆಗಳಲ್ಲಿ ಪ್ರತಿ ಮನೆಯವರು ಒಂದೊಂದು ಬಾಕ್ಸ್ ಇಟ್ಟಿರುತ್ತಾರೆ. ವ್ಯಾನಿನಲ್ಲಿ ಕುಳಿತೇ ಅವನು ಆ ಬಾಕ್ಸ್‌ಗಳಲ್ಲಿ ಪತ್ರ ಇಡುತ್ತಾನೆ. ಹಾಗೆಯೇ ಮನೆಯವರು ಅಂಚೆಗೆ ಹಾಕುವ ಪತ್ರಗಳನ್ನು ಅಲ್ಲಿ ಇರಿಸಿದ್ದರೆ ಎತ್ತಿಕೊಂಡು ಹೋಗುತ್ತಾನೆ. ಪ್ರತಿ ಮನೆಯವರೂ ಒಂದು ತೂಗುವ ಯಂತ್ರ ಇಟ್ಟಿರುತ್ತಾರೆ. ತೂಕವನ್ನು ತಾವೇ ನೋಡಿ ಸ್ಟಾಂಪ್ ಹಚ್ಚಿ ಪೆಟ್ಟಿಗೆಯಲ್ಲಿ ಇಡುತ್ತಾರೆ. ಮನೆಯಲ್ಲಿ ಸ್ಟಾಂಪು, ಲೆಟರ್ಸ್ ಇಟ್ಟುಕೊಂಡಿರುತ್ತಾರೆ. ಆಕಸ್ಮಾತ್ ಪೋಸ್ಟಾಫೀಸಿಗೆ ಹೋಗಲು ಬಿಡುವಾಗದಿದ್ದರೆ ಒಂದು ಫೋನ್ ಮಾಡಿ ಬಿಟ್ಟರೆ ಸಾಕು, ಸ್ಟಾಂಪ್ ಮುಂತಾದುವನ್ನು ಅಲ್ಲಿಂದ ಅಂಚೆ ಮುಖಾಂತರ ಕಳಿಸುತ್ತಾರೆ.

ಪಾರ್ಸಲ್ ತರುವ ಪೇದೆ ಮಾತ್ರ ವ್ಯಾನಿನಲ್ಲಿ ಬರುತ್ತಾನೆ. ಪಾರ್ಸಲ್ ಹೊತ್ತು ಮನೆಯ ಬಾಗಿಲಿಗೆ ಬರುತ್ತಾನೆ. ಅಂಚೆ ಮಾತ್ರ ವಿತರಣೆ ಮಾಡುವವ ರಸ್ತೆಯ ಬದಿಯ ಪೆಟ್ಟಿಗೆಯಲ್ಲಿ ಇಟ್ಟುಬಿಡುತ್ತಾನೆ; ದೊಡ್ಡ ಪಾರ್ಸಲ್ ಇದ್ದರೆ ಮಾತ್ರ ಜನರು ಕಛೇರಿಗೆ ಹೋಗಿ ಪೋಸ್ಟ್ ಮಾಡುತ್ತಾರೆ. ಒಂದು ವೇಳೆ ಆಕಸ್ಮಾತ್ ಸ್ಟಾಂಪ್ ಕಡಿಮೆ ಹಚ್ಚಿದ್ದರೆ, ಒಂದು ಸೂಚನೆಯ ಚೀಟಿ ಹಚ್ಚಿ

ವಿಳಾಸದಾರರಿಗೆ ಮರಳಿಸುತ್ತಾರೆ. ಇನ್ನು ಸ್ಟಾಂಪುಗಳು ಅನೇಕ ಸಾರ್ವಜನಿಕ ಸ್ಥಳಗಳಲ್ಲಿ ಅಂಗಡಿಗಳು, ಮಾಲ್‌ಗಳು, ಮುಂತಾದ ಬಳಿ ಆಟೋಮ್ಯಾಟಿಕ್ ಯಂತ್ರಗಳ ಮುಖಾಂತರ ಸಿಗುತ್ತವೆ, ಇಷ್ಟೆಲ್ಲಾ ಅನುಕೂಲವಿದ್ದರೂ ಪೋಸ್ಟಲ್ ವ್ಯವಸ್ಥೆ ತೃಪ್ತಿಕರವಾಗಿಲ್ಲ ಎಂದು ಸಾರ್ವಜನಿಕರು ಗೋಳಾಡುತ್ತಿದ್ದು, ವೈಯಕ್ತಿಕ ಒಡೆತನಕ್ಕೆ ಒಪ್ಪಿಸಿಕೊಡಲು ಸರ್ಕಾರವನ್ನು ಕೇಳುತ್ತಿದ್ದಾರೆ.

"ದೂರವಾಣಿ" ವ್ಯವಸ್ಥೆ ಸಹ ವೈಯಕ್ತಿಕ ಒಡೆತನಕ್ಕೆ ಸೇರಿದೆ. ಅನೇಕ ಟೆಲಿಫೋನ್ ಸಂಸ್ಥೆಗಳಿವೆ. ಅವರು ಹಣಕೊಟ್ಟು ಬಿಟ್ಟರೆ ಒಂದು ವಾರದೊಳಗೆಲ್ಲಾ ಬಂದು ಸಂಪರ್ಕ ಮಾಡಿಕೊಡುತ್ತಾರೆ. ಸಾಕಷ್ಟು ಸ್ಪರ್ಧೆ ಇರುವುದರಿಂದ ಕೆಟ್ಟರೆ ತೀವ್ರವಾಗಿ ರಿಪೇರಿ ಮಾಡಿಕೊಡುತ್ತಾರೆ. ಟೆಲಿಫೋನ್ ಪಾಯಿಂಟ್ ತೆಗೆದು ಕೊಳ್ಳುವುದಾಗಲೀ ಅಥವಾ ಅನೇಕ ಟೆಲಿಫೋನ್ ಇರಿಸಿಕೊಳ್ಳುವುದಾಗಲೀ ಇಲ್ಲಿ ಏನೂ ಕಷ್ಟವಿಲ್ಲ. ಫೋನ್‌ಗಳು ವಿವಿಧ ಆಕಾರಗಳಲ್ಲಿ ತಯಾರಾಗಿ ಸ್ಪರ್ಧೆಗೆ ಇಳಿಯುತ್ತಲೇ ಇರುತ್ತವೆ. ಹೆದ್ದಾರಿಯ ಬದಿಯಲ್ಲಿ ಸಾಕಷ್ಟು ಫೋನುಗಳು, ಸಾರ್ವಜನಿಕ ಸ್ಥಳಗಳಲ್ಲಿ, ಪ್ರೇಕ್ಷಣೀಯ ತಾಣಗಳಲ್ಲಿ ಹೀಗೆ ಹೆಜ್ಜೆ ಹೆಜ್ಜೆಗೂ ದೂರವಾಣಿ ಸಲಕರಣೆ ಇರುತ್ತದೆ. ಸಾಮಾನ್ಯವಾಗಿ ಪ್ರತಿಯೊಂದು ಮನೆಗೂ ಫೋನು ಇದ್ದೇ ಇರುತ್ತದೆ. ಅದು ಇಲ್ಲಿ ಜೀವನಾವಶ್ಯಕತೆ. ಬಹಳಷ್ಟು ಕೆಲಸಗಳು ಫೋನಿನ ಮುಖಾಂತರವೇ ಆಗಿ ಬಿಡುವುದರಿಂದ, ಎಂಥ ಕನಿಷ್ಟ ಸಂಬಳದವರೂ ಫೋನ್ ಹೊಂದಿಯೇ ಹೊಂದುತ್ತಾರೆ. ನಮ್ಮ ದೇಶದಂತೆ ವರ್ಷಗಟ್ಟಳೆ ಕಾಯುವು ದಾಗಲೀ, ಅದನ್ನು ಪಡೆಯುವುದಕ್ಕೂ ಬೇರೆಯವರ ಪ್ರಭಾವ, ವಿಟಾಮಿನ್ ಎಂ ಬಳಸುವ ಅವಶ್ಯಕತೆ ಇಲ್ಲಿ ಇಲ್ಲ. ನಮ್ಮಲ್ಲಿ ಪ್ರತಿಯೊಂದು ವಸ್ತುವನ್ನು ಪಡೆಯಲಿಕ್ಕೂ–ಸೀಮೆಎಣ್ಣೆ, ಸಕ್ಕರೆಯಿಂದ ಹಿಡಿದು ಸಿಮೆಂಟು, ಟೇಪ್‌ರೆಕಾರ್ಡರ್ ಗಳು, ದೂರವಾಣಿ, ಎಲ್ಲಕ್ಕೂ ವಿವಿಧ ರೀತಿಯ ಶಿಫಾರಸು ಬೇಕೇ ಬೇಕು. ನಾವು ಅಲ್ಲಿ ಪೋಸ್ಟ್ ಕಾರ್ಡನ್ನು ಬಳಸಿದಷ್ಟು ಸಲೀಸಾಗಿ ಇಲ್ಲಿ ಫೋನು ಬಳಸುತ್ತಾರೆ ಮತ್ತು ಇಡೀ ದೇಶದ ತುಂಬೆಲ್ಲ, ಸಣ್ಣ ಊರುಗಳಿಂದ ಹಿಡಿದು ದೊಡ್ಡ ನಗರಗಳ ವರೆಗೆ ನೇರ ಸಂಪರ್ಕ ವ್ಯವಸ್ಥೆ ಇದೆ. ಯಾವ ವಿಳಂಬವೂ ಇಲ್ಲದೆ ಎಷ್ಟು ದೂರಕ್ಕೆ ಬೇಕಾದರೂ ಮಾತನಾಡಬಹುದು.

ನಾವು ಎಲ್ಲಿಂದಲಾದರೂ ಮಾತನಾಡಬೇಕಾಗಿದೆ, ನಮ್ಮ ಬಳಿ ದುಡ್ಡಿಲ್ಲ ಎಂದಿಟ್ಟುಕೊಳ್ಳೋಣ. ಆಗ ಆಪರೇಟರ್‌ಗೆ ಇಂಥವರೊಡನೆ ಮಾತನಾಡಬೇಕಾಗಿದೆ. ಅವರ ನಂಬರಿಗೆ ಕಲೆಕ್ಟ್‌ಕಾಲ್ ಮಾಡಿಬಿಡಿರಿ ಎಂದರೆ ಸಾಕು, ಮಾತನಾಡಬಹುದು. ಇಷ್ಟು ಮಾತ್ರವಲ್ಲ ಪ್ರಯಾಣದಲ್ಲಿದ್ದಾಗ ಇನ್ನೊಂದೆಡೆಗೆ ಮಾತನಾಡಬೇಕಾದವನು

ತಾನು ಮಾತನಾಡಬೇಕಾಗಿರುವವರ ನಂಬರ್ ತಿಳಿಸಿ, ತನ್ನ ನಂಬರಿಗೆ ಛಾರ್ಜು ಮಾಡಲು ಹೇಳಿ, ಮಾತನಾಡಬಹುದು.

ಇಲ್ಲಿ ನೇರವಾದ ವ್ಯವಸ್ಥೆಗೆ ಕಡಿಮೆ ಬೆಲೆ. ಆಪರೇಟರ್ ಮುಖಾಂತರ ಮಾತ ನಾಡಿದರೆ ಜಾಸ್ತಿ ಬೆಲೆ. (ನಮ್ಮಲ್ಲಿ ಆಪರೇಟರ್ ಮುಖಾಂತರ ದೂರದ ಊರಿಗೆ ಮಾತನಾಡಿದರೆ ಕಡಿಮೆ ಬೆಲೆ, ನೇರವಾಗಿ ಮಾತನಾಡಿದರೆ ಜಾಸ್ತಿ ಬೆಲೆ) ಏಕೆಂದರೆ ಮನುಷ್ಯ ಶಕ್ತಿ ಇಲ್ಲಿ ಬಹಳ ತುಟ್ಟಿ. ನಾವು ದೂರದ ಊರಿಗೆ ಮಾತನಾಡಬೇಕಾದರೆ ಒಂದು ನಾಣ್ಯ ಹಾಕಿ ಡಯಲ್ ಮಾಡಬೇಕು. ಆಗ ಇನ್ನೆಷ್ಟು ಹಾಕಬೇಕೆಂದು ಒಂದು ಧ್ವನಿ ಹೇಳುತ್ತದೆ. ಅಷ್ಟು ನಾಣ್ಯ ಹಾಕಲೇ ಬೇಕು. ನಾವು ನಾಣ್ಯ ಹಾಕುತ್ತ ಹೋದಂತೆ ಆ ಧ್ವನಿ ಗುರುತಿಸಿ! ಇನ್ನು ಇಷ್ಟು ಹಾಕಿ ಎಂದು ಜಾಸ್ತಿ ಹಾಕಿದರೆ ವಾಪಸ್ಸು ನಾಣ್ಯ ಕೊಡುತ್ತಗೆ, ಸರಿಯಾಗಿ ಹಾಕಿದರೆ ಧನ್ಯವಾದ ಎಂದು ಹೇಳಿ ಲೈನ್ ಕನೆಕ್ಷ ಕೊಡುತ್ತದೆ. ಇದೇನು ಕಂಪ್ಯೂಟರ್ ವ್ಯವಸ್ಥೆಯೋ ಅಥವಾ ಆಪರೇಟರ್ ನೋಡಿಕೊಳ್ಳುವರೋ, ನಾವು ಇಷ್ಟೇ ನಾಣ್ಯ ಹಾಕಿದೆವು ಎಂಬುದು ಹೇಗೆ ಗುರುತಿಸಲ್ಪಡುವುದೋ ಎಂಬುದು ಆಶ್ಚರ್ಯದ ಸಂಗತಿ. ದೂರವಾಣಿ ವ್ಯವಸ್ಥೆ ಅತ್ಯಂತ ಸುಗಮವಾಗಿದೆ ಎಂದೇ ಇಲ್ಲಿ ಜೀವನ ಆರಾಮದಾಯಕ–ಇಲ್ಲವಾದರೆ ಇನ್ನೂ ದುರ್ಭರವಾಗುತ್ತದೆ. ವೈಯಕ್ತಿಕ ಒಡೆತನದ ಸ್ಪರ್ಧೆ ಇದೆ ಎಂತಲೇ ಉತ್ಕೃಷ್ಟ ಸೇವೆ, ಸಲಕರಣೆ ಲಭ್ಯವಾಗುತ್ತವೆ.

ವಿಮಾನ ಸೌಲಭ್ಯವೂ ಅಷ್ಟೆ. ಅನೇಕ ಕಂಪನಿಗಳು ಅನೇಕ ಲೈನುಗಳನ್ನು ನಡೆಸುತ್ತವೆ. ನಮ್ಮಲ್ಲಿ ರಾಷ್ಟ್ರೀಕರಣವಾಗುವ ಮುನ್ನ ಕೆಲವು ಲಕ್ಸುರಿ ಬಸ್‌ಗಳು ಓಡುತ್ತಿದ್ದವಷ್ಟೆ. ಆ ರೀತಿ ಇಲ್ಲಿ ವಿಮಾನಗಳು ಓಡುತ್ತವೆ. ಯುನೈಟೆಡ್ ಏರ್‌ಲೈನ್ಸ್, ಡೆಲ್ಟಾ, ಬ್ರಾನಿಷ್, ಈಸ್ಟರ್ನ್ ಏರ್‌ಲೈನ್ಸ್, ಟಿ. ಡಬ್ಲ್ಯು. ಎ. ಪನಾಮ, ಪಾನ್ ಅಮೆರಿಕಾ ಮುಂತಾದ ಹಲವಾರು ಕಂಪೆನಿಗಳು, ವಿಮಾನಗಳನ್ನು ನಡೆಸುತ್ತವೆ. ಇಲ್ಲಿ ಬಸ್‌ಗಳಿಗಿಂತಲೂ ಪ್ಲೇನ್‌ಗಳಿಗೇ ರಷ್ ಜಾಸ್ತಿ. ಬಹುಪಾಲು ಜನ ಕಾರನ್ನು ಇಟ್ಟಿರುತ್ತಾರೆ. ದೂರದ ಯಾನಕ್ಕೆ ವಿಮಾನ ಬಳಸುತ್ತಾರೆ. ಕಾರಿನ ಸೌಕರ್ಯ ಇಲ್ಲದವರು, ತೀರಾ ಬಡತನದಲ್ಲಿ ಇದ್ದವರು, ಒಬ್ಬೊಬ್ಬರೇ ಡ್ರೈವ್ ಮಾಡಲಿಚ್ಛಿಸದೆ ಇದ್ದವರು ಬಸ್ ಪ್ರಯಾಣ ಕೈಗೊಳ್ಳುತ್ತಾರೆ. ವಿಮಾನಗಳಿಗೆ ದಿನಗಟ್ಟಳೆ, ತಿಂಗಳುಗಟ್ಟಳೆ ಇಲ್ಲಿ ಕಾಯಬೇಕಾಗಿಲ್ಲ ಹನ್ನೆರಡು ಗಂಟೆಗೆ ವಿಮಾನ ಹೊರಡುತ್ತಿದ್ದರೆ ಹನ್ನೊಂದಕ್ಕೆ ನಾವು ಆ ತಾಣಕ್ಕೆ ಹೋದರೆ ಸಾಕು. ಯಂತ್ರಗಳ ಮುಖಾಂತರ ಸೆಕ್ಯುರಿಟಿ ಚೆಕ್ ಮಾಡಿಬಿಡುವರು- ಕೆಲವೊಮ್ಮೆ ಬಸ್ಸಿನಲ್ಲಿ ಟಿಕೆಟ್ಟು ಕೊಟ್ಟಂತೆ, ವಿಮಾನದಲ್ಲಿ ಹತ್ತಿ ಕುಳಿತಾಗ ಟಿಕೆಟ್ಟು ಕೊಡುವರು. ಡಿಸೆಂಬರ್ 20 ರಂದು

ಇದ್ದ ಕನ್ನಡ ಕೂಟದ ಕಾರ್ಯಕ್ರಮಕ್ಕೆ ಕಾರಿನಲ್ಲಿ ಹೋಗಿ, ಮತ್ತೆ ವಾಪಸ್ಸು ವಾಷಿಂಗ್ಟನ್‌ಗೆ ಬರುವಾಗ ವಿಮಾನದಲ್ಲಿ ಬಂದೆವು. ಆಗ ನಮ್ಮನ್ನು ಕಳಿಸಲು ಬಂದಿದ್ದ ಡಾ॥ ಲಿಂಗರಾಜ್‌ರವರು ಹೇಳಿದರು : "ಭಾನುವಾರ ಮಧ್ಯಾಹ್ನ 12 ರ ಒಳಗೆ ಹೋದರೆ ರಿಯಾಯಿತಿ ದರವಿದೆ. ಇದು ಬಸ್ ಟಿಕೇಟಿನಷ್ಟು ಸೋವಿಯಾಗು ತ್ತದೆ ಅಷ್ಟರ ಒಳಗೆ ನಾವು ಟಿಕೆಟ್ ಕೌಂಟರ್‌ನ ಬಳಿ ಇದ್ದರೆ ಸಾಕು. ಒಂದು ವೇಳೆ ಒಂದು ವಿಮಾನ ತುಂಬಿ ಹೋದರೆ, ಮಿಕ್ಕಿನ ಪ್ರಯಾಣಿಕರು ಮೂವರೇ ಇರಲಿ, ನಾಲ್ವರೇ ಇರಲಿ ಇನ್ನೊಂದು ವಿಮಾನ ಬಿಡುವರು. ಕೆಲವೊಮ್ಮೆ ಮೂವರು–ನಾಲ್ವರಿ ಗಾಗಿ ವಿಮಾನ ಹೊರಡಿಸಿದರೆ ಅವರಿಗೆ ಗಿಟ್ಟಲಿಕ್ಕಿಲ್ಲ. ಆದರೆ ಈ ಲೈನಿನ ಬಗ್ಗೆ ಜನರಲ್ಲಿ ವಿಶ್ವಾಸ ಬೆಳೆಯುತ್ತದೆ"

ನಮ್ಮ ದೇಶದಲ್ಲಿ ಎಲ್ಲವೂ ವಿಚಿತ್ರ. ಬೆಂಗಳೂರಿನಿಂದ ಬೊಂಬಾಯಿಗೆ ದೆಹಲಿಗೆ ಹೋಗಲು ವಾರಗಟ್ಟಳೆ ಕಾಯಬೇಕು. ಇಷ್ಟೆಲ್ಲ ಡಿಮ್ಯಾಂಡ್ ಇದ್ದರೂ ವಿಮಾನಗಳ ಸಂಖ್ಯೆಯನ್ನು ಹೆಚ್ಚು ಮಾಡರು. ಇಂಡಿಯನ್ ಏರ್‌ಲೈನ್ಸ್ ಬಗ್ಗೆ ಜನರಲ್ಲಿ, ಮುಖ್ಯ ವಾಗಿ ವಿದೇಶಿಯರಲ್ಲಿ, ವಿದೇಶದಲ್ಲಿರುವ ಭಾರತೀಯರಲ್ಲಿ ತುಂಬಾ ಜಿಗುಪ್ಸೆ ಬೆಳೆಯು ತ್ತಿದೆ. ಸೀಟುಗಳಿಲ್ಲ ಎಂದು ಮುಖಕ್ಕೆ ಹೊಡೆದಂತೆ ಹೇಳುತ್ತಾರೆ. ಅಷ್ಟು ಬೇಡಿಕೆ ಇದ್ದರೆ ಇನ್ನೊಂದು ವಿಮಾನ ಏಕೆ ಹೊರಡಿಸಬಾರದು? ಕಂಪನಿಗೆ ಹಣ ಸಿಗುತ್ತೆ. ಅನೇಕರಿಗೆ ಕೆಲಸ ಸಿಗುತ್ತದೆ. ಪ್ರಯಾಣಿಕರಿಗೆ ಅನುಕೂಲವಾಗುತ್ತದೆ. ಇತ್ತೀಚೆ ಗೇನೋ ಅದರಲ್ಲಿಯೂ ಲಂಚದ ವ್ಯವಹಾರ ನಡೆಯುತ್ತದೆ ಎಂಬ ಸುದ್ದಿ ಇಲ್ಲಿ ಹರಡಿದೆ. ಹಣಕೊಟ್ಟವರಿಗೆ ಬೇಗ ವಿಮಾನದ ಸೀಟು ದೊರೆಯುತ್ತದಂತೆ. ನಾವು ಬರುವ ದಿನ ಸಹ ಸೀಟುಗಳಿಲ್ಲ ಎಂದು, ಅದಕ್ಕೂ ದೊಡ್ಡವರ ಪ್ರಭಾವ ಬಳಸಬೇಕಾ ಯಿತು. ಆದರೆ ವಿಮಾನ ಹಾರುವಾಗ ಇನ್ನೂ ಸಾಕಷ್ಟು ಆಸನಗಳು ಖಾಲಿಯಾಗಿಯೇ ಇದ್ದವು. ಆದರೆ ಅಮೆರಿಕಾದಲ್ಲಿ ಗ್ರಾಹಕರಿಗೆ ತುಂಬಾ ಬೆಲೆ, ಮಾನ್ಯತೆ. ಹೀಗಾಗಿ ಕೇವಲ ದೂರವಾಣಿ ಮುಖಾಂತರ ರಿಸರ್ವೇಷನ್ ಮಾಡಿಬಿಡುತ್ತಾರೆ.

ಒಂದೊಂದು ಟಿಕೆಟ್ಟು ವಿತರಣೆ ಮಾಡಲು ನಮ್ಮಲ್ಲಿ ಎಷ್ಟೋ ವಿಳಂಬ. ಇಲ್ಲಿ ಚಕಚಕ ಯಂತ್ರದಂತೆ ಕೆಲಸ ಮಾಡುತ್ತಾರೆ. ಫೋನ್ ಹಿಡಿದು ಯಾರೊಡನೆಯೋ ಹರಟೆ ಕೊಚ್ಚುವುದನ್ನು ಅಲ್ಲಿ ಕಂಡರೆ; ಇಲ್ಲಿಮಾತಿಲ್ಲ ಕಥೆಯಿಲ್ಲ ಮೌನವಾಗಿ ಕೆಲಸ ಮಾಡುವರು. ಎಂಟು ಗಂಟೆ ದುಡಿತವೆಂದರೆ ನಿಜಕ್ಕೂ ಎಂಟುಗಂಟೆ ದುಡಿಯಲೇ ಬೇಕು. ಅರ್ಧಗಂಟೆ ಮಧ್ಯಾಹ್ನದ ಊಟಕ್ಕೆ. ಹೀಗೆ ಎಂಟೂವರೆ ಗಂಟೆಗಳು ಓರ್ವನು ತನ್ನ ಕಾರ್ಯಗಾರದಲ್ಲಿ ಕಾಲಕಳೆಯಲೇ ಬೇಕು. ಇಲ್ಲಿ ಕಾಲಕಳೆಯು ದೆಂದರೆ ನಮ್ಮಲ್ಲಿಯಂತೆ ಸಮಯ ಹರಣವಲ್ಲ, ಕೆಲಸ ಮಾಡಲೇ ಬೇಕು. ಕೆಲಸ

ಮಾಡುವವ ಮತ್ತು ಗ್ರಾಹಕರ ನಡುವೆ ಸಂಪರ್ಕವೇ ಇರದು. ಹೆಚ್ಚು ಕಾಲ ಕಾಯಿಸದೆ ಕೆಲಸ ನಡೆಯುತ್ತಿರುತ್ತದೆ. ಸಾಮಾನ್ಯವಾಗಿ ಸಾರ್ವಜನಿಕ ಕ್ಷೇತ್ರಗಳಲ್ಲಿ ಕೆಲಸಮಾಡುವವರು - ಮ್ಯೂಸಿಯಮ್, ಬ್ಯಾಂಕ್, ವಿಮಾನಯಾನ, ದೂರವಾಣಿ, ಮುಂತಾದ ಕ್ಷೇತ್ರಗಳವರು, ಬಹಳ ಸೌಜನ್ಯ ಶೀಲರು, ತಾಳ್ಮೆಯುಳ್ಳವರು, ಹಸನ್ಮುಖಿಗಳೂ ಇರುತ್ತಾರೆ. ಜನರನ್ನು ಎಷ್ಟೋ ದಿನದ ಪರಿಚಯದವರೇನೋ ಎಂಬಂತೆ ಸ್ವಾಗತಿಸಿ, ನಗುತ್ತ ಕೆಲಸ ಮಾಡುವರು. ನಮ್ಮಲ್ಲಿ ಸರ್ಕಾರಿ ಅಧಿಕಾರಿಗಳ ಕಛೇರಿ ಬಾಗಿಲು ಕಾಯುವ ಕಾವಲುಗಾರನ ಠೀವಿಯೇ ಇಲ್ಲಿ ಅಧಿಕಾರಿಗಳಿಗಿರದು. ಅಷ್ಟು ಸೌಜನ್ಯಶೀಲರಿವರು.

ಬಸ್ ಸಂಚಾರ ವ್ಯವಸ್ಥೆ ಸಹ ವೈಯಕ್ತಿಕ. ಇಡೀ ದೇಶದ ತುಂಬೆಲ್ಲ ಕೆಲವು ಬಸ್ ಲೈನ್‌ಗಳ ಜಾಲ ಹಬ್ಬಿದೆ. ಒಂದೊಂದು ಸಣ್ಣ ಹಳ್ಳಿಗೂ ಬಸ್ಸಿನ ವ್ಯವಸ್ಥೆ ಇದೆ. ವಿಮಾನದ ಸೀಟುಗಳಂತೆ ಬಸ್‌ಗಳ ಆಸನಗಳು ಬಹಳ ಆರಾಮದಾಯಕವಾಗಿಯೂ, ಎತ್ತರವಾಗಿಯೂ, ಮೆತ್ತಗೂ ಇರುತ್ತವೆ. ಬಸ್ಸಿನಲ್ಲಿಯೇ ಹಿಂಬದಿಯ ಬಲಮೂಲೆಯಲ್ಲಿ ಒಂದು ಶೌಚಾಲಯ ಸಹ ಇರುತ್ತದೆ. ಸೀಟುಗಳ ಸಂಖ್ಯೆಗಿಂತ ಒಬ್ಬ ಪ್ರಯಾಣಿಕನನ್ನೂ ತೆಗೆದುಕೊಳ್ಳುವುದಿಲ್ಲ. ಹಾಗಾದರೆ ಒಂದು ಬಸ್ಸಿಗಿಂತ ಜಾಸ್ತಿಯಾದರೆ ಬಿಟ್ಟು ಹೋಗುವರೇ? ಐದು ನಿಮಿಷಗಳಲ್ಲೇ ಇನ್ನೊಂದು ಬಸ್ಸು ತಯಾರು. ಒಬ್ಬ ಪ್ರಯಾಣಿಕನನ್ನೂ ವಾಪಸ್ಸು ಕಳಿಸರು. ಸಾಲ್ಟ್ ಲೇಕ್ ಸಿಟಿಯಿಂದ ಲಾಸ್ ಏಂಜಲೀಸ್‌ಗೆ ನಾವು ಪ್ರಯಾಣ ಹೊರಟಾಗ ಒಂದು ಬಸ್ಸು ಸಾಲದಾಯಿತು. ತಕ್ಷಣವೇ ಇನ್ನೊಂದು ಬಸ್ ಸಿದ್ಧವಾಗಿ ಬಂದಿತು. ಅಂದು ಹೋಗಲಿ, ಇನ್ನೊಂದು ದಿನ ಹೆಚ್ಚಾದ ನಾಲ್ಕೇ ನಾಲ್ಕು ಪ್ರಯಾಣಿಕರಿಗಾಗಿ ಇನ್ನೊಂದು ಬಸ್ ಹೊರಟಿತು. ಪ್ರಯಾಣಿಕರು ಇರಲಿಲ್ಲವೆಂದೋ ಅಥವಾ ನಾಲ್ಕಾರು ಜನವೆಂದೋ ಬಸ್ ತಪ್ಪಿಸುವಂತಿಲ್ಲ. ತಪ್ಪಿಸಿದರೆ ಯಾರು ಬೇಕಾದರೂ ಬಸ್ ಮಾಲೀಕರನ್ನು ಕೋರ್ಟಿಗೆ ಎಳೆಯಬಹುದು ಮತ್ತು ಸರ್ಕಾರ ಬಸ್ ಲೈನನ್ನು ರದ್ದು ಪಡಿಸಬಹುದು.

ಕಾಯಿದೆಯ ಪಾಲನೆ ನಿಜಕ್ಕೂ ಅದ್ಭುತ. ವೇಗ ಮಿತಿ ಗಂಟೆಗೆ 55 ಮೈಲಿ. ಎಂಥದೇ ಪ್ರಸಂಗದಲ್ಲಿಯೂ ಯಾವ ಡ್ರೈವರನೂ ಆ ಮಿತಿ ದಾಟಿ ಓಡಿಸಲಿಲ್ಲ. ನಾನು ಸಾವಿರಾರು ಮೈಲಿಗಳಷ್ಟಾದರೂ ಬಸ್ ಪ್ರಯಾಣ ಮಾಡಿದೆ. "ಗ್ರೇ ಹೌಂಡ್" ಎಂಬ ಲೈನಿನಲ್ಲಿ. ಇದರ ಜಾಲ ನಾಡಿನಾದ್ಯಂತ ಹಬ್ಬಿದೆ. ಆದರೆ ಒಮ್ಮೆಯಾದರೂ ಒಬ್ಬ ವಾಹನ ಚಾಲಕನು ಕುಡಿದಿದ್ದುದನ್ನು ನಾನು ಕಾಣಲಿಲ್ಲ. ಈ ದೇಶದ ಜನ ಮುಕ್ಕಾಲು ಪಾಲು ಕುಡಿಯುತ್ತಾರೆ ಎಂದು ನಾವು ನೀವು ಕೇಳಿ ಬಲ್ಲೆವು ಆದರೆ ಒಂದು ದಿನವೂ

ಒಬ್ಬ ಬಸ್ ಚಾಲಕನಾಗಲೀ, ಅಧಿಕಾರಿಯಾಗಲೀ ಕುಡಿದುದನ್ನು ಕಾಣಲಿಲ್ಲ. ಚಾಲಕರು ವಿಪರೀತ ಕುಡಿದು ಅಪಘಾತ ಮಾಡಿರುವ, ಮಾಡುವ ಪ್ರಸಂಗ ನಮ್ಮಲ್ಲಿ ತೀರಾ ಹೇರಳ. ಇಲ್ಲಿ ಬೃಹತ್ ಟ್ರಕ್ ನಡೆಸುವವರೂ ಸಹ ಕುಡಿದು ಗಾಡಿ ಓಡಿಸರು.

ಇಷ್ಟು ಮಾತ್ರವಲ್ಲ ಓರ್ವ ಚಾಲಕನೂ ಸಿಗರೇಟು ಸೇದಿದ್ದನ್ನೂ (ಬಸ್ಸಿನಲ್ಲಿ) ನಾನು ಕಾಣಲಿಲ್ಲ. ಇಲ್ಲಿಯ ನಿಯಮದ ಪ್ರಕಾರ ಬಸ್ಸಿನ ಮುಂಬದಿಯ ಆಸನಗಳಲ್ಲಿ ಸಿಗರೇಟು ಸೇದುವಂತಿಲ್ಲ ಸೇದುವವರು ಹಿಂದಿನ ಮೂರು ನಾಲ್ಕು ಸಾಲಿನ ಆಸನಗಳಲ್ಲಿ ಮಾತ್ರ ಸೇದಬೇಕು. ಆ ಭಾಗದಲ್ಲಿ ಹೊಗೆಯನ್ನು ಹೊರಹಾಕುವ ವ್ಯವಸ್ಥೆ ಇದ್ದಿರಬಹುದು. ಕೆಲವು ರಾಜ್ಯಗಳಲ್ಲಿ ಅಂದರೆ ಉಟಾಹ, ಉರೇಗಾನ್ ಮತ್ತು ಕ್ಯಾಲಿಫೋರ್ನಿಯಗಳಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಸಿಗರೇಟು ಸೇದುವಂತಿಲ್ಲ. ಹೀಗಾಗಿ ಈ ಮೂರು ರಾಜ್ಯಗಳ ಬಸ್ಸುಗಳಲ್ಲಿ ಸೇದುವ ಅವಕಾಶವಿಲ್ಲ. ಚಟ ಉಳ್ಳವರು ಬಸ್ ನಿಂತಾಗ ಇಳಿದು, ಹೊರಗೆ ಹೋಗಿ ಸೇದಬೇಕು. ನಾವು ರಾಜ್ಯವನ್ನು ಬಿಟ್ಟು ಉಟಾಹ ರಾಜ್ಯದ ಗಡಿ ಸೇರುತ್ತಿದ್ದಂತೆಯೇ ಚಾಲಕನು ತನ್ನ ಬಳಿ ಇರುವ ಮೈಕ್ರೋಫೋನಿನಲ್ಲಿ ವಿನಂತಿಸಿಕೊಂಡ. "ನಾವೀಗ ಉಟಾಹ ರಾಜ್ಯದ ಗಡಿಯೊಳಗೆ ಪ್ರವೇಶಿಸುತ್ತಿದ್ದೇವೆ. ದಯವಿಟ್ಟು ಯಾರೂ ಸೇದಬಾರದು. ಈ ರಾಜ್ಯದ ನಿಯಮ ನಾವು ಪಾಲಿಸಬೇಕು." ಇಂಥ ಪ್ರಜ್ಞೆ ಎಷ್ಟು ಜನರಲ್ಲಿದ್ದೀತು! ನಮ್ಮ ಬಸ್‌ಗಳಲ್ಲಿ No Smoking ಬೋರ್ಡಿನ ಕೆಳಗೇ ಕುಳಿತು ಸೇದುವ ಪ್ರಯಾಣಿಕರು, ಚಾಲಕರೇ ಸಾಕಷ್ಟು ಸಿಗುತ್ತಾರೆ. "ಇನ್‌ಸ್ಪೆಕ್ಟರ್ ಇಲ್ಲ. ಕಾಯಿದೆ ಮುರಿದರೇನಾಗುತ್ತದೆ" ಎಂಬ ಔದಾಸೀನ್ಯ.

ಬಸ್ ಚಾಲಕರು ಬಹಳ ಸಾತ್ವಿಕರು, ಸಜ್ಜನರು. ಅಂಥವರನ್ನೇ ಸಂದರ್ಶಿಸಿ ಜವಾಬ್ದಾರಿ ಸ್ಥಾನಗಳಿಗೆ ಆರಿಸುತ್ತಾರೆ. ಬಸ್ಸಿನ ಮುಂಭಾಗದಲ್ಲಿ ಒಂದು ಬೋರ್ಡ್ ಇರುತ್ತದೆ. ಅದರಲ್ಲಿ ಚಾಲಕನ ಹೆಸರು ಇರುತ್ತದೆ. ಈ ಡ್ರೈವರ್ ತುಂಬಾ ಜವಾಬ್ದಾರಿಯವನು, ಜಾಗರೂಕನೂ, ಆತ್ಮೀಯನೂ, ನಂಬಿಗಸ್ಥನೂ ಇದ್ದಾನೆ ಎಂಬ ಶಬ್ಧಗಳಿರುತ್ತವೆ. ನಿಜ. ಒರಟುತನ, ಉದ್ಧಟತನ ಏನೂ ಇಲ್ಲ. ನಗುನಗುತ್ತಾ ಪ್ರಯಾಣಿಕರನ್ನು ಸ್ವಾಗತಿಸುವರು. ವಯಸ್ಸಾದವರಿಗೆ, ಮಕ್ಕಳಿಗೆ ಹತ್ತಲು ಇಳಿಯಲು ಸಹಾಯ ಮಾಡುವರು. ಇಲ್ಲಿ ಚಾಲಕನೊಬ್ಬನೇ ಎಲ್ಲವನ್ನು ನಿರ್ವಹಿಸುವನು. ಕಂಡಕ್ಟರ್, ಸಹಾಯಕ ಯಾರೂ ಇರುವುದಿಲ್ಲ. ಪ್ರತಿಯೊಂದು ಬಸ್ಸಿಗೂ ರೇಡಿಯೋ ಮೈಕ್ ಇರುತ್ತದೆ. ಬಸ್ ಕೆಟ್ಟರೆ ಅದರ ಮುಖಾಂತರ ಡಿಪೋಗೆ ಮಾತನಾಡಿ ಸಹಾಯ ಪಡೆಯುವನು. ಬಸ್ ಕೆಡುವ ಪ್ರಶ್ನೆಯೇ ಇಲ್ಲ. ಹತ್ತು-ಹನ್ನೆರಡು ತಾಸಿನ ಪ್ರಯಾಣ ಪೂರೈಸುತ್ತಿದ್ದಂತೆಯೇ ಬಸ್ ಗ್ಯಾರೇಜಿಗೆ ಹೋಗಿ ಪರೀಕ್ಷೆ ಮಾಡಿಸಿ

ಕೊಂಡು ಬರುತ್ತದೆ. ತೂಕವಾದ, ವಿಶಾಲವಾದ ಬಸ್ಸಿನಲ್ಲಿ ಹೋಗುವಾಗ ಲೋಟದಲ್ಲಿ ತುಂಬಿಟ್ಟ ನೀರೂ ತುಳುಕದು. ಅಷ್ಟು ಗಂಭೀರವಾಗಿ ಆದರೆ ವೇಗವಾಗಿ ಹೋಗುವ ಬಸ್ಸಿನಲ್ಲಿ ಕುಳಿತು ಕಣ್ಮುಚ್ಚಿದರೆ ನಾವು ವಿಮಾನದಲ್ಲಿ ಹೋಗುತ್ತಿದ್ದೇವೆ ಎನ್ನಿಸುವುದು.

ಬಸ್ ನಿಲ್ದಾಣಗಳಲ್ಲಿ ಈ ಕಂಪೆನಿಯವರೇ ಹೊಂದಿರುವ ಕಟ್ಟಡಗಳುಂಟು. ಅಲ್ಲಿ ಶೌಚಾಲಯ, ಅಲಂಕರಿಸಿಕೊಳ್ಳಲು ಕನ್ನಡಿ ಸುಧಾರಿಸಿಕೊಳ್ಳಲು ಆಸನಗಳು ಇರುವುದರ ಜೊತೆಗೆ ರೆಸ್ಟೋರಾಂಟು ಇರುತ್ತವೆ. ಸಾಮಾನು ಖರೀದಿಸಲು ಅಂಗಡಿಗಳು ಮತ್ತು ಕಾಯುವ ಅವಧಿ ವಿಪರೀತ ಇದ್ದರೆ ಬೇಸರವಾಗಬಾರದೆಂದು ಮೋಜಿನ ಆಟಗಳ ವ್ಯವಸ್ಥೆ ಇರುತ್ತದೆ. ನಾಣ್ಯ ಹಾಕಿ ನೋಡಬಹುದಾದ ಟೆಲಿವಿಷನ್ ಇರುತ್ತದೆ.

ಸ್ವಯಂಚಾಲಿತ ಯಂತ್ರಗಳಿಂದ ತಂಪು ಪಾನೀಯಗಳು, ಐಸ್‌ಕ್ರೀಮ್, ಬಿಸಿ ಬಿಸಿ ಕಾಫಿ, ಟೀ, ಆಲೂಗಡ್ಡೆ ಚಿಪ್ಸ್, ಹುರಿದ ಶೇಂಗಾಬೀಜ, ವಿವಿಧ ರೀತಿಯ ತಿಂಡಿಗಳೂ ಎಲ್ಲ ದೊರೆಯುತ್ತವೆ. ನಾಣ್ಯ ಹಾಕಿ ಗುಂಡಿ ಒತ್ತಿದರೆ ಸಾಮಾನುಗಳು ಕೈಗೆ ಸಿಗುತ್ತವೆ. ಜನರು ಸುಲಭವಾಗಿ ತಮಗೆ ಬೇಕಾದ್ದನ್ನು ಆರಿಸಿಕೊಳ್ಳುತ್ತಾರೆ. ಹಾಲು ಕಾಫಿ ಮುಂತಾದವುಗಳಿಗಾಗಿ ಪರದಾಡಬೇಕಾಗಿಲ್ಲ.

ಬಸ್ ಚಾಲಕರು ರಾತ್ರಿಯ ವೇಳೆ ವಾಹನ ಓಡಿಸಬೇಕಾದಾಗ ದೀರ್ಘಅವಧಿವರೆಗೆ ನಡೆಸಲು ಅವಕಾಶವಿರದು. ರಸ್ತೆಯ ಮೇಲೆ ದೃಷ್ಟಿ ನೆಟ್ಟು ನೇರ ರಸ್ತೆಯ ಮೇಲೆ ಸಾಗುವುದು ಕಣ್ಣಿಗೆ ಜೊಂಪು ಬರುವ ಸಾಧ್ಯತೆ ಇರುವುದರಿಂದ ಬೇಗನೇ ಚಾಲಕನನ್ನು ಬದಲಾಯಿಸುವರು ಓವರ್ ಟೈಮ್ ಮಾಡುತ್ತೇವೆಂದರೆ ಅದಕ್ಕೆ ಅವಕಾಶನೀಡರು. ಸತತವಾಗಿ ನಾಲ್ಕು ಗಂಟೆ ಕಾಲ ವಾಹನವನ್ನು ಓಡಿಸದೆ ವಿಶ್ರಾಂತಿ ಪಡೆಯಲು ಪ್ರಚಾರ ಮಾಡುವವರು. ಅಲ್ಲದೆ ಆಲ್ಕೋಹಾಲ್ ಮುಂತಾದ ಮಾದಕ ಪೇಯಗಳನ್ನು ಕುಡಿದವನಿಗೆ ಗಾಡಿ ನಡೆಸಲು ಅವಕಾಶ ನೀಡರು.

ಇನ್ನು ಸಮಯ ಪ್ರಜ್ಞೆಯಂತೂ ಅದ್ಭುತ. ಗಡಿಯಾರದ ಮುಳ್ಳು ನಿಗದಿಪಡಿಸಿದ ಅಂಕೆ ತಲುಪುತ್ತಲೇ ಬಸ್ಸು ಹೊರಡುವುದು. ಏನಾದರೂ ಕಾರಣಗಳಿಂದ ತಡವಾದರೂ ದಾರಿಯಲ್ಲಿ ಮೇಕಪ್ ಮಾಡುವರು. ಹಿಮಸುರಿತ, ಜಾರು ರಸ್ತೆಯಿದ್ದಾಗ ಮಾತ್ರ ತೀವ್ರತರ ಎಚ್ಚರಿಕೆಯಿಂದ ಗಾಡಿ ನಡೆಸಬೇಕಾದ್ದರಿಂದ ಪ್ರಯಾಣವು ವಿಳಂಬವಾಗುವ ಸಾಧ್ಯತೆಯಿದೆ.

ಬೇಕಾದರೆ ಮೊದಲೇ ಸೂಚನೆ ನೀಡಬೇಕು. ಹೆದ್ದಾರಿಯನ್ನು ತೊರೆದು ಹೊರ ಹೋಗಲು Exitಗಳಿರುತ್ತವೆ. ಅವುಗಳ ಮುಖಾಂತರವೇ ಹೋಗಬೇಕು. ಇಂತಹ ಹೊರದ್ವಾರಗಳ ಬಗ್ಗೆ ಸೂಚನೆ ಹಲವಾರು ಮೈಲಿ ದೂರದಿಂದಲೇ ಸಿಕ್ಕುತ್ತದೆ. ಸೈನ್ ಬೋರ್ಡುಗಳು ಅತಿ ಎತ್ತರದಲ್ಲಿ ತೂಗು ಹಾಕಲ್ಪಟ್ಟಿರುತ್ತವೆ.

ಅವುಗಳ ಮೇಲೆ ಪ್ರಖರವಾದ ಪ್ರಕಾಶವು ಬಿದ್ದಿರುತ್ತದೆ. ಹೀಗಾಗಿ ದೂರದಿಂದಲೇ ಅಕ್ಷರಗಳನ್ನು ಸುಲಭವಾಗಿ ಓದಬಹುದು. ರಸ್ತೆಗಳ ಬದಿಯಲ್ಲಿ ರಿಫ್ಲೆಕ್ಟರ್ ಲೈಟುಗಳು ಮತ್ತು ರಿಫ್ಲೆಕ್ಟರ್ ಪೇಂಟ್, ಪಟ್ಟಿಗಳು ಇರುತ್ತವೆ. ಅವುಗಳ ಮೇಲೆ ವಾಹನಗಳ ಬೆಳಕುಬಿದ್ದಾಗ ಅವು ಅತ್ಯಂತ ಸ್ಪಷ್ಟವಾಗಿ ಕಾಣುತ್ತವೆ.

ವಾಹನಗಳು ತುಂಬಾ ಭಾರವಾಗಿಯೂ, ಸದೃಢವಾಗಿಯೂ ಇರುವುದರಿಂದ ಮತ್ತು ರಸ್ತೆಗಳು ನೇರವಾಗಿ ಸಮವಾಗಿ ಇರುವುದರಿಂದ ವಾಹನಗಳು ಗಂಟೆಗೆ 55 ಮೈಲಿ ವೇಗದಲ್ಲಿ ಓಡಿದರೂ ನಮಗೆ ವೇಗವೇ ತಿಳಿಯದು. ಒಂದು ದಿನ ಪಯಣಿಸುವಾಗ ಕೇಳಿದೆ ; 'ಇದೇಕಿಷ್ಟು ನಿಧಾನವಾಗಿ ಗಾಡಿಯನ್ನು ನಡೆಸುತ್ತಿರುವಿರಿ ?' ಎಂದು. ಅವರು ನಕ್ಕು ; ಮೀಟರ್ ನೋಡಿರಿ ಎಂದರು. 55 ಮೈಲಿ ವೇಗದಲ್ಲಿದ್ದರೂ ವಾಹನದ ವೇಗವೇ ಗೊತ್ತಾಗುತ್ತಿರಲಿಲ್ಲ.

55 ಹೆಚ್ಚಿನ ವೇಗ ಮಿತಿ, 35 ಕಡಿಮೆ ವೇಗ ಮಿತಿ. ಶಾಲೆ ಮತ್ತು ಸಾರ್ವಜನಿಕ ಓಡಾಟದ ಜಾಗಗಳಲ್ಲಿ ಮಾತ್ರ ತೀರಾ ಕಡಿಮೆ. ವೇಗವನ್ನು ರಾಡಾರ್ ಮುಖಾಂತರ ಪರೀಕ್ಷಿಸಲಾಗುತ್ತದೆ. ಒಂದೊಂದು ರಾಡಾರ್ ಅಷ್ಟಷ್ಟು ಮೈಲಿ ದೂರವನ್ನು ಪರೀಕ್ಷಿಸುತ್ತವೆ. ವಾಹನಗಳು ವೇಗಮಿತಿ ದಾಟಿ ಓಡುತ್ತಿದ್ದಂತೆಯೇ ಪೊಲೀಸ್ ಕಾರುಗಳು ಹಾಜರು.

ಹೆದ್ದಾರಿಗಳಲ್ಲಿ ಸದಾ ಪೋಲೀಸ್ ಪಹರೆ ಸಂಚಾರ ನಡೆಯುತ್ತಲೇ ಇರುತ್ತದೆ. 'ರಸ್ತೆಗಳು ಖಾಲಿ ಇದ್ದಾಗಲೂ 55 ಮೈಲಿಯನ್ನೇಕೆ ಮೀರಬಾರದು' ಎಂದು ಕೇಳಿದೆ. ಆ ವೇಗ ಅತ್ಯಂತ ಅಪಾಯಕಾರಿ ಎಂದು ಓರ್ವರು ಉತ್ತರಿಸಿದರು. ರಸ್ತೆಯ ಹತ್ತಿರದಲ್ಲಿ ಹೋಟೆಲ್, ರೆಸ್ಟುರಾಂಟು, ಮೋಟೆಲ್‌ಗಳು ವಿಪರೀತ ಇರುತ್ತವೆ. ಪ್ರಯಾಣಿಕರಿಗೆ ಉಳಿದುಕೊಳ್ಳಲು ತೊಂದರೆಯೇ ಇಲ್ಲ. ರೆಸ್ಟುರಾಂಟುಗಳಲ್ಲಿ ಕೇವಲ ತಿನಿಸಿನ ವ್ಯವಸ್ಥೆ, ಹೋಟೆಲಿನಲ್ಲಿ ಊಟ ಮತ್ತು ವಸತಿ, ಮೋಟೆಲ್‌ಗಳಲ್ಲಿ ಊಟ ವಸತಿ ಜೊತೆಗೆ ಕಾರುಗಳನ್ನು ನಿಲ್ಲಿಸಲೂ ಸ್ಥಳಾವಕಾಶ ಉಂಟು. ಅನುಕೂಲತೆಗಳು ಅಸಂಖ್ಯಾತ.

ಅಮೆರಿಕಾದೇಶ ಸಂಚಾರದ 4 ತಿಂಗಳ ಅವಧಿಯಲ್ಲಿ ಪವನವಾಹನ, ಬಸ್ಸು, ಕಾರು, ಭೂಗರ್ಭದ ಸಬ್‌ವೇ ಎಲ್ಲದರಲ್ಲೂ ನಾನು ಸಂಚರಿಸಿದೆ. ಒಮ್ಮೊಮ್ಮೆ, ಧಾರ್ಮಿಕಾಸಕ್ತಿ ಇರುವ ಒಂದೊಂದು ಕುಟುಂಬವನ್ನು ಸಂದರ್ಶಿಸಲು ನಾನು 200–300 ಮೈಲಿ ಪಯಣಿಸಬೇಕಾಯಿತೆಂದರೆ ಆಶ್ಚರ್ಯವಲ್ಲವೆ? ಆದರೆ ಅಲ್ಲಿ ವಾಹನಗಳೂ ಚೆನ್ನಾಗಿದ್ದು ರಸ್ತೆಗಳೂ ಚೆನ್ನಾಗಿರುತ್ತಿದ್ದುದರಿಂದ ಪ್ರಯಾಣದ ಆಯಾಸ ಅಷ್ಟಾಗಿ ಗೋಚರವಾಗುತ್ತಿರಲಿಲ್ಲ.

ವಸ್ತು ಪ್ರದರ್ಶನ ಶಾಲೆಗಳಂತೆ ಕಾಣುವ ಅಮೆರಿಕಾ ದೇಶದ ಷಾಪಿಂಗ್ ಸೆಂಟರ್‌ಗಳು ತುಂಬಾ ವೈಭವ ಪೂರ್ಣವಾಗಿಯೂ, ಸುವ್ಯವಸ್ಥಿತವಾಗಿಯೂ ಇರುತ್ತವೆ. ಅಲ್ಲಿ ಒಂದು ಹಳ್ಳಿಯನ್ನು ಕಂಡರೆ ನಾವು ಕಾಣುವುದಿಷ್ಟೆ ಷಾಪಿಂಗ್ ಸೆಂಟರ್, ಗ್ಯಾಸ್ ಸ್ಟೇಷನ್ (ಅವರು ಪೆಟ್ರೋಲ್ ಬಂಕಿಗೆ ಗ್ಯಾಸ್ ಸ್ಟೇಷರ್ಷ ಅನ್ನುತ್ತಾರೆ. ಗ್ಯಾಸೋಲಿನ್ ಹೋಗಿ ಗ್ಯಾಸ್ ಎಂಬುದೇ ಪ್ರಯೋಗದಲ್ಲಿದೆ. ಪೆಟ್ರೋಲ್ ದ್ರವ ಆದನ್ನು ಗ್ಯಾಸ್ ಎಂದೇಕೆ ಕರೆಯುವಿರಿ ಎಂದು ಕೇಳಿದೆನೊಮ್ಮೆ ನಿಜ, ಆದು ತಪ್ಪು ಪ್ರಯೋಗ ಆದರೂ ಬಳಕೆಯಲ್ಲಿದೆ ಎಂದರು) ಒಂದು ಚರ್ಚ್, ಇಣಫಾರ್‌ಮೇಷರ್ಷ ಸೆಂಟರು ಮತ್ತು ಪೋಸ್ಟ್ ಆಫೀಸು ಮನೆಗಳು ಚದುರಿದಂತೆ ಇರುತ್ತವೆ. ಹೆಚ್ಚಿನ ಜನ ಸಬ್‌ಅರ್ಬ್‌ಗಳಲ್ಲಿ, ಎಸ್ಟೇಟ್‌ಗಳಲ್ಲಿ ಇರುವುದೇ ಜಾಸ್ತಿ.

ನಗರಗಳಲ್ಲಿ ಕಾಣಬರುವ ಷಾಪಿಂಗ್ ಸೆಂಟರು ವಿಸ್ತಾರವಾದ ಕಟ್ಟಡಗಳಿಂದ ಕೂಡಿರುತ್ತವೆ. ಅದರಲ್ಲಿ ಮಾಲ್‌ಗಳಿರುತ್ತವೆ. ಮಾಲ್ ಎಂದರೆ ನಮ್ಮಲ್ಲಿ ಜನತಾ ಬಜಾರ್ ಅಥವಾ ಕಾಂಪ್ಲೆಕ್ಸ್‌ಗಳಿಗೆ ಹೋಲಿಸಬಹುದು. ಅಲ್ಲಿ ಎಲ್ಲಾ ಬಗೆಯ ಸಾಮಾನುಗಳೂ ಒಂದೇ ಎಡೆಯಲ್ಲಿ ದೊರೆಯುತ್ತವೆ. ದವಸ ಧಾನ್ಯ, ಬಟ್ಟೆ–ಬರೆ, ಪೀಠೋಪಕರಣ, ವಾಚು–ಒಡವೆಗಳು, ಎಲ್ಲವೂ ಒಂದೇ ಎಡೆಯಲ್ಲಿ ಇರುವುದರಿಂದ ಅಲೆದಾಟವು ತಪ್ಪುತ್ತದೆ. ಷಾಪಿಂಗ್ ಸೆಂಟರ್‌ಗಳಲ್ಲಿ ಒಂದರೊಳಗಿಂದ ಇನ್ನೊಂದು ಅಂಗಡಿಗೆ ಹೋಗುವುದು ಮಾತ್ರವಲ್ಲ, ಎಲ್ಲ ಸಾಮಾನುಗಳು ಕೈಗೆ ಎಟುಕುವಂತೆ ಇರುತ್ತವೆ. ಕಳ್ಳತನ ಹೇಗಾಗುವುದಿಲ್ಲವೋ ಎಂದು ಆಶ್ಚರ್ಯವೆನಿಸುತ್ತದೆ. ಬೇಕಾದ ಎಲ್ಲ ಸಾಮಾನುಗಳನ್ನು ಹೊಂದಿಸಿಕೊಂಡು ತಳ್ಳುವ ಗಾಡಿಗಳಲ್ಲಿ ಇರಿಸಿಕೊಂಡು ಬಂದು ಕೌಂಟರಿನಲ್ಲಿ ಕೊಟ್ಟರೆ ಮೆಷಿನ್ ಮುಖಾಂತರ ಬಿಲ್ ಮಾಡುತ್ತಾರೆ.

ಬ್ಯಾಂಕಿಂಗ್ ವ್ಯವಸ್ಥೆ ತೀರಾ ಅಚ್ಚುಕಟ್ಟು. ಅಮೆರಿಕಾದ ಪೋಸ್ಟ್ ಆಫೀಸುಗಳು ನಮ್ಮ ದೇಶದಂತೆ ಸೀಮಿತವಾದ ಕೆಲಸ ಮಾಡುತ್ತವೆ. ಇಂಗ್ಲೆಂಡಿನ ಪೋಸ್ಟ್ ಆಫೀಸುಗಳು ಅನೇಕ ಬೇರಿತರ ಸಾಮಾನುಗಳನ್ನು ಮಾರುತ್ತವೆ. ಮತ್ತು

ಸೇವಿಂಗ್ಸ್ ಬ್ಯಾಂಕ್ ಖಾತೆ ಹೊಂದಿರುತ್ತವೆ. ಅಮೆರಿಕಾದಲ್ಲಿ ಪೋಸ್ಟಾಫೀಸ್‌ಗಳು ಬ್ಯಾಂಕ್ ವ್ಯವಹಾರ ಹೊಂದಿಲ್ಲ. ಸೇವಿಂಗ್ಸ್ ಬ್ಯಾಂಕುಗಳೇ ಅಲ್ಲದೆ ದೊಡ್ಡ ದೊಡ್ಡ ಬ್ಯಾಂಕುಗಳು ರಾಷ್ಟ್ರೀಯ, ಅಂತರರಾಷ್ಟ್ರೀಯ ವ್ಯವಹಾರ ಹೊಂದಿರುತ್ತವೆ. ಬ್ಯಾಂಕುಗಳಲ್ಲಿ ಉತ್ತಮವಾದ ಸಿಬ್ಬಂದಿ ಇರುತ್ತದೆ. ಯಾರನ್ನೂ ಕಾಯಿಸದೆ, ತಡಮಾಡದೆ ಕೆಲಸ ಮಾಡಿಕೊಡುತ್ತಾರೆ. ಕಾರಿನಲ್ಲಿ ಕುಳಿತೇ ವ್ಯವಹಾರ ಮಾಡಲು ಸಹ ವ್ಯವಸ್ಥೆ ಇರುತ್ತದೆ. ಒಂದು ಯಂತ್ರದ ಬಳಿಗೆ ಕಾರು ಬಂದು ನಿಲ್ಲುತ್ತಲೇ ಅದರಿಂದ ಒಂದು ಡಬ್ಬಿ ಬರುತ್ತದೆ. ಅದರೊಳಕ್ಕೆ ಚೆಕ್ಕು ಬರೆದು ಹಾಕಿ, ಅದನ್ನು ಮುಚ್ಚಬೇಕು. ಅಲ್ಲಿಂದ ಬ್ಯಾಂಕಿನ ಒಳಕ್ಕೆ ಆ ಚೆಕ್ಕು ಹೋದಾಗ ಬ್ಯಾಂಕ್ ಕ್ಯಾಷಿಯರ್ ಪಡೆದುಕೊಂಡು, ಹಣವನ್ನು ಆ ಡಬ್ಬಿಯಲ್ಲಿ ಹಾಕಿ ಮರಳಿಸುತ್ತಾಳೆ. ಅದನ್ನು ಪಡೆದು ಇವರು ಹೋಗಬಹುದು. ಕಾರಿನಿಂದ ಇಳಿಯುವದೂ ಇಲ್ಲಿ ಬೇಕಾಗದು.

ಇಷ್ಟು ಮಾತ್ರವಲ್ಲ, 24 ಗಂಟೆ ಬ್ಯಾಂಕ್ ಸರ್ವಿಸ್ ಇರುವ ಬ್ಯಾಂಕುಗಳಿವೆ. ಅಲ್ಲಿ ಯಾವಾಗ ಬೇಕಾದರೂ ಹಣವನ್ನು ಪಡೆಯಬಹುದು. ಕಂಪ್ಯೂಟರ್ ಸಹಾಯದಿಂದ ಇಲ್ಲಿ ಹಣ ದೊರೆಯುತ್ತದೆ. ಒಂದು ಗುಪ್ತವಾದ ಹೆಸರು ಅಥವಾ ಕೋಡ್ ನಂಬರನ್ನು ಯಂತ್ರಕ್ಕೆ ಕೊಟ್ಟಿರಲಾಗುತ್ತದೆ. ಎಷ್ಟೊತ್ತಿನಲ್ಲಿ ಹಣ ಬೇಕಾದರೂ ನಾವು ಹೋಗಿ ಯಂತ್ರದ ಗುಂಡಿ ಒತ್ತಬೇಕು. ಆಗ ಅದು ನಮ್ಮ ಕೋಡ್ ನಂಬರನ್ನು ಕೇಳುತ್ತದೆ. ಕೋಡ್ ನಂಬರನ್ನು ಒತ್ತಿದರೆ ಆಗ ಅದು ಎಷ್ಟು ಬೇಕು ಎಂದು ಕೇಳುತ್ತದೆ. ಇಲ್ಲಿ ಕೇಳುತ್ತದೆ ಎಂದರೆ ಅದು ಮಾತಾಡುತ್ತದೆ ಎಂದು ಅರ್ಥವಲ್ಲ. ಅಕ್ಷರಗಳು ಕಾಣಿಸಿಕೊಳ್ಳುತ್ತವೆ. ಇಷ್ಟು ಮೊತ್ತ ಬೇಕು ಎಂದು ಹೇಳಿದರೆ ಅಷ್ಟು ಹಣವನ್ನು ಒಂದು ಕೊಳವೆಯ ಮೂಲಕ ಉದುರಿಸುತ್ತದೆ. ಎಷ್ಟು ಬೇಕೋ ಅಷ್ಟನ್ನು ನಿಖರವಾಗಿ ಎಣಿಸಿಕೊಡುತ್ತದೆ. ಮನುಷ್ಯರಿಗಿಂತಲೂ ವೇಗವಾಗಿ, ನಿಖರವಾಗಿ, ಕೆಲಸ ಮಾಡುವ ಈ ಯಂತ್ರವನ್ನು ನೋಡಿದರೆ ವಿಜ್ಞಾನದ ಒಂದು ಪವಾಡವಿದು ಎನ್ನಿಸದಿರದು.

ಮಾಯಾಲೋಕ :—ಸ್ವಯಂಚಾಲಿತ ಯಂತ್ರಗಳು ಕೆಲಸ ಮಾಡುವ ಪರಿಯನ್ನು ನೋಡಿದರೆ ಈ ದೇಶವೊಂದು ಮಾಯಾಲೋಕ ಎನ್ನಿಸುತ್ತದೆ. ಹೆಚ್ಚಿನ ದೇಶಗಳನ್ನು ತಿರುಗದ ಅಥವಾ ಭಾಷೆ ಬರದ ಅಥವಾ ವೈಜ್ಞಾನಿಕ ತಿಳುವಳಿಕೆ ಅಷ್ಟಿಲ್ಲದ ಜನರೇನಾದರೂ ಅಲ್ಲಿಗೆ ಹೋದರೆ ಇದೊಂದು ಜಾದೂಲೋಕ ಎಂದು ಅಚ್ಚರಿಯ ಕಡಲಲ್ಲಿ ತೇಲುತ್ತಾರೆ. 24 ತಾಸಿನ ಸರ್ವಿಸಿರುವ ಬ್ಯಾಂಕಿಗೆ ಹೋಗಿ ಕೋಡ್ ನಂಬರ್ ಒತ್ತಿ ಹಣ ಪಡೆಯುವುದು, ರಬ್ಬರ್ ಪಟ್ಟಿಯ ಮೇಲೆ ಕಾಲಿಡುತ್ತಿದ್ದಂತೆಯೇ ಬಾಗಿಲು ತನ್ನಿಂದ ತಾನೇ ತೆರೆದುಕೊಳ್ಳುವುದು, ಮುಂತಾದವು ತುಂಬಾ ತಮಾಷೆ

ಯಾಗಿ ಕಾಣುವವು. ಇನ್ನೊಂದು ಗರೇಜಿನ ಬಾಗಿಲು ತೆರೆಯುವುದು. ಮನೆಯ ಬಳಿ ಕಾರು ಬರುತ್ತಿದ್ದಂತೆಯೇ, ನೂರು ಗಜದಿಂದಲೇ ಒಂದು ರೇಡಿಯೋ ವೇವ್ ಯಂತ್ರವನ್ನು ಸ್ಪರ್ಶಿಸಿದರೆ ಗರೇಜಿನ ಬಾಗಿಲು ತನ್ನಿಂದ ತಾನೇ ತೆರೆಯುವುದು ಮತ್ತೆ ಹೊರಗೆ ಹೋಗುವಾಗ ಕಾರನ್ನು ಹೊರಗೆ ತೆಗೆದುಕೊಂಡು ಆ ಯಂತ್ರವನ್ನು ಒತ್ತಿದರೆ ಬಾಗಿಲು ತನ್ನಿಂದ ತಾನೇ ಮುಚ್ಚುವುದು. ವೇವ್ ಲೆನ್ತ್ ಸಹಾಯದಿಂದ ಹೀಗೆ ನಿಯಂತ್ರಿಸಲಾಗುತ್ತದೆ. ಗರೇಜ್ ಬಾಗಿಲನ್ನು ನಿಯಂತ್ರಿಸುವ ವೇವ್‌ಲೆನ್ತ್ ಮತ್ತು ಬಾಗಿಲು ತೆರೆಯಲು ಉಪಯೋಗಿಸುವ 'ಕೀಲಿಕೈ'ನಂತಹ ವಸ್ತುವಿನ ವೇವ್‌ಲೆನ್ತ್ ಒಂದೇ ಇರುತ್ತದೆ. ಆದರೆ ನೋಡುವವರಿಗೆ ಮಾತ್ರ ಜಾದೂ ಕಟ್ಟಿಗೆಯಿಂದ ತೆಗೆದಂತೆ ಆಗುತ್ತದೆ. ಮಾತನಾಡುವ ಕೆಲವು ಗೊಂಬೆಗಳದು, ಉಸಿರಾಡುವ ಗೊಂಬೆಗಳದೂ ಅಂಥದೊಂದು ಅದ್ಭುತವೇ.

ಸಾಲ್ಟ್‌ಲೇಕ ಸಿಟಿಯಲ್ಲಿ ಮಾರ್ಮೋನ್ ಎಂಬ ಜನಾಂಗದ ಒಂದು ದೇವಾಲಯದಲ್ಲಿ ಓರ್ವ ರಾಜಕುಮಾರನ ಮೂರ್ತಿಯಿದೆ. ಅದು ಕಣ್ಣನ್ನು ಪಿಳುಕಿಸುತ್ತ ಮಾತನಾಡುವುದು ಅತ್ಯಂತ ಸ್ವಾಭಾವಿಕವಾಗಿ ಕಾಣುತ್ತದೆ. ವಾಲ್ಟ್ ಡಿಸ್ನಿ ಲ್ಯಾಂಡಿನಲ್ಲಿ ಇಂತಹ ಅದ್ಭುತಗಳು ಅನೇಕ. ಅವನ್ನು ಇನ್ನೊಂದು ಸ್ವತಂತ್ರ ಲೇಖನದಲ್ಲಿ ಬರೆದು ವಿವರಿಸುವೆ. ಲಂಡನ್ನಿನ ಮೇಡಮ್ ಟ್ಯುಸೇಡ್ಸ್ ಎಂಬ ಮ್ಯೂಸಿಯಮ್‌ನಲ್ಲಿ ಮಲಗಿರುವ ಓರ್ವ ತರುಣಿಯ ಗೊಂಬೆ ಇದೆ. ಅದು ಸಹ ಅತ್ಯಂತ ಸ್ವಾಭಾವಿಕವಾಗಿ ಉಸಿರಾಡುವಂತೆ ತೋರುತ್ತದೆ. ಬೃಹತ್ ಯಂತ್ರಗಳ ಮುಖಾಂತರ ಕಟ್ಟಡ ಕಟ್ಟುವುದು, ನೆಲ ಅಗೆಯುವುದು, ಉಳುವುದು, ಬಿತ್ತುವುದು, ಕೊಯ್ಯುವುದು-ಮುಂತಾದುದೆಲ್ಲ ವೈಜ್ಞಾನಿಕ ಅಚ್ಚರಿ ಎನಿಸುತ್ತದೆ. ಟೆಲಿವಿಷನ್ ಮೂಲಕ ಸಣ್ಣ ವಯಸ್ಸಿನಲ್ಲೇ ಮಕ್ಕಳು ವಿಶೇಷ ಜ್ಞಾನವನ್ನು ಸಂಪಾದಿಸುತ್ತಾರೆ. ಯಂತ್ರಗಳ ಸಹಾಯದಿಂದ ಜನರು ಬೇಗಬೇಗನೇ ಕೆಲಸಗಳನ್ನು ನಿರ್ವಹಿಸುವರಲ್ಲದೆ, ಅಚ್ಚುಕಟ್ಟಾಗಿಯೂ ಚೆನ್ನಾಗಿಯೂ ಮಾಡುವರು.

ಅಡಿಗೆಯ ಸಲಕರಣೆಗಳು, ಒಲೆಗಳು, ಬಟ್ಟೆ ತೊಳೆಯುವ-ಒಣಗಿಸುವ ಯಂತ್ರಗಳು ಒಂದೊಂದೂ ಗೃಹಿಣಿಯರ ಪರಿಶ್ರಮ ಕಡಿಮೆ ಮಾಡುತ್ತವೆ. ಕಪ್ಪಿನಲ್ಲಿ ಹಾಕಿಟ್ಟು ಸ್ವಿಚ್ ಒತ್ತಿದರೆ ಗಾಜಿನ ಕಪ್ಪು ಬಿಸಿಯಾಗದೆ, ಕೇವಲ ಒಳಗಣ ವಸ್ತುಗಳಾದ ಕಾಫಿ, ಹಾಲು ಮಾತ್ರ ಬಿಸಿಯಾಗುತ್ತವೆ. ಡಿಷ್ ವಾಷರ್ ಮೆಷಿನಲ್ಲಿ ಪಾತ್ರೆ, ಲೋಟ. ತಟ್ಟೆ ಎಲ್ಲ ಪೇರಿಸಿಟ್ಟು ಸ್ವಿಚ್ ಒತ್ತಿದರೆ, ಅದೇ ಸ್ವಚ್ಛವಾಗಿ ತೊಳೆದು ಇಟ್ಟು ಬಿಡುತ್ತದೆ. ಇನ್ನು ನೀರಂತೂ ಸದಾಕಾಲ ಬರುತ್ತದೆ. ಬಿಸಿ

ನೀರು ಸಹ ಸದಾಕಾಲ ದೊರೆಯುತ್ತದೆ. ಹೆಚ್ಚು ಯಂತ್ರೀಕರಣ ಹೊಂದಿರುವ ಆ ನಾಡಿನಲ್ಲಿ ಎಲ್ಲದಕ್ಕೂ ಯಂತ್ರಗಳ ಬಳಕೆ.

ವಿಮಾನದ ಸೀಟುಗಳನ್ನು ಸ್ಥಿರೀಕರಿಸುವಾಗಲೂ ಅಷ್ಟೇ ಕಂಪ್ಯೂಟರ್ ಸಹಾಯವಿದೆ ಅಲ್ಲಿ. ಉದಾಹರಣೆಗೆ ಈಸ್ಟರ್ನ್ ಏರ್‌ಲೈನ್ಸ್ ಶಾಖೆಗೆ ಹೋಗುತ್ತೇವೆನ್ನಿ. ಅಲ್ಲಿ ನಮ್ಮ ಸೀಟನ್ನು ವಿಶಿಷ್ಟ ಫ್ಲೈಟಗೆ ಬುಕ್ ಮಾಡುತ್ತೇವೆ ಅನ್ನಿ. ಇನ್ನೊಂದು ಊರಿನಲ್ಲಿ ನೀವು ಕೇಳಿದರೆ ಎರಡು ನಿಮಿಷದಲ್ಲಿ ನಿಮ್ಮ ಹೆಸರು ಕೇಳಿ ಕಂಪ್ಯೂಟರ್ ಸಹಾಯದಿಂದ ನಿಮ್ಮ ಸೀಟು ಸ್ಥಿರೀಕರಣಗೊಂಡಿರುವುದನ್ನು ಹೇಳುತ್ತಾರೆ. ಅಮೆರಿಕಾದ ತುಂಬೆಲ್ಲ ಇರುವ ಈಸ್ಟರ್ನ್ ಏರ್ ಲೈನ್‌ಗಳ ಮಧ್ಯೆ ಸಂಪರ್ಕ ವ್ಯವಸ್ಥೆ ಇರುತ್ತದೆ. ಕಂಪ್ಯೂಟರ್‌ಗಳು ನಮಗೆ ಸೀಟು ಬುಕ್ ಮಾಡುವುದರಿಂದ ಇಲ್ಲಿ ಇಂಡಿಯನ್ ಏರ್ ಲೈನ್ ಆಫೀಸಿನಲ್ಲಿ ಕಾಯಬೇಕಾದಂತೆ ಕಾಯಬೇಕಾಗಿಲ್ಲ, ಮನುಷ್ಯರ ಮರ್ಜಿ ಹಿಡಿಯಬೇಕಾಗಿಲ್ಲ, ವಶೀಲಿ ಮಾಡಿಸಬೇಕಾಗಿಲ್ಲ. ಸೀಟು ಎಷ್ಟಿವೆ ಎಂಬ ಬಗ್ಗೆ ಮುಚ್ಚುಮರೆಯಿಲ್ಲ.

ಒಮ್ಮೆ ಕಾರಿನಲ್ಲಿ ಸಂಚರಿಸುತ್ತಿದ್ದಾಗ ಒಂದು ದೊಡ್ಡ ಗೋಪುರ ನೋಡಿದೆ. ಅದರಲ್ಲಿ ಸತತವಾಗಿ ವೇಳೆ, ದಿನಾಂಕ, ಹವಾಮಾನ ಮುಂತಾದ್ದು ಗೋಚರಿಸುತ್ತಿತ್ತು. ಆಮೇಲೆ 90 ಸಾವಿರದ ಒಂದು ಅಂಕಿ ಗೋಚರಿಸಿತು. ಇದೇನು ಎಂದು ಕೇಳಿದೆ. ನಮ್ಮ ವಾಹನದ ಚಾಲಕರು ಹೇಳಿದರು, 'ಜನವರಿ ಒಂದರಿಂದ ಈ ವರೆಗೆ ತಯಾರಾಗಿರುವ ಕಾರುಗಳ ಸಂಖ್ಯೆ ಎಂದರು. ಒಂದು ಕಾರು ಸಂಪೂರ್ಣ ಸಿದ್ಧವಾಗಿ ವಿಶಿಷ್ಟವಾದ ಒಂದು ಪಟ್ಟಿಯ ಮೇಲೆ ದಾಟ ಮುಂದೆ ಸಾಗುತ್ತಿದ್ದಂತೆಯೇ ಇಲ್ಲಿ ರೆಕಾರ್ಡ್ ಆಗುತ್ತದಂತೆ. ಹೀಗೆ ಯು. ಎಸ್. ಎ ನಲ್ಲಿ ಎಷ್ಟು ಕಾರು ತಯಾರಕ ಕಂಪೆನಿಗಳಿದ್ದಾವೋ ಅಲ್ಲೆಲ್ಲ ತಯಾರಾಗಿ ಹೊರಬರುವ ಕಾರುಗಳ ಸಂಖ್ಯೆ ನಿಮಿಷ ನಿಮಿಷಕ್ಕೂ ರೆಕಾರ್ಡ್ ಆಗುತ್ತದೆ.

ವೈದ್ಯಕೀಯ ಸೌಲಭ್ಯ

ವೈದ್ಯಕೀಯ ಸೌಲಭ್ಯವೂ ಇಲ್ಲಿ ವೈಯಕ್ತಿಕ ಒಡೆತನಕ್ಕೆ ಸೇರಿದೆ. ಇಲ್ಲಿ ಕಾಯಿಲೆ ಬರಬಾರದು, ಬಂದರೆ ತುಂಬಾ ಖರ್ಚು ಎನ್ನುತ್ತಾರೆ. ಒಂದು ನಗೆಯ ಮಾತಿದೆ ಇಲ್ಲಿ, ಈ ದೇಶದಲ್ಲಿ ಬದುಕುವುದೂ ವೆಚ್ಚದಾಯಕ, ಸಾಯುವುದು ಇನ್ನೂ ವೆಚ್ಚದ ಬಾಬ್ತು ; ಸತ್ತರೆ ತುಂಬಾ ಖರ್ಚು. ಇಂಚು ಇಂಚಿಗೂ ಬೆಲೆ ಜಾಸ್ತಿಯಿರುವ ಇಲ್ಲಿ ಹುಗಿಯಲಿಕ್ಕೆ ಸ್ಥಳಕೊಳ್ಳಬೇಕು. ಅನೇಕರು ಸಾಯುವ ಮುನ್ನವೇ ಸ್ಥಳ ರಿಸರ್ವ್ ಮಾಡಿರುತ್ತಾರೆ. ಸತ್ತ ನಂತರದ ಕ್ರಿಯೆಗಳಿಗೂ ತುಂಬಾ ಖರ್ಚು.

ಹೆಣದ ಪೆಟ್ಟಿಗೆಯ ಬೆಲೆ 100 ಡಾಲರಿನಿಂದ 6000 ಡಾಲರಿನವರೆಗೆ. Funeral homes ಎಂಬ ಸಂಸ್ಥೆಗಳು ದೊಡ್ಡ ವ್ಯಾಪಾರಿ ಸಂಸ್ಥೆಗಳು. ಅಲ್ಲಿ ಸತ್ತವರಿಗೆ ಸಂಸ್ಕಾರ ಮಾಡುವ ವ್ಯವಸ್ಥೆ ಇದೆ. ವಿದ್ಯುತ್ ಚಿತೆಗಳೂ ಉಂಟು. ಈಗ ಭೂಮಿಯು ತುಂಬಾ ದುರ್ಲಭವಾಗುತ್ತಿರುವುದರಿಂದ ಹಲವಾರು ಅಂತಸ್ತುಗಳ ಸಮಾಧಿ ಇವೆ, ಶವಗಳಿಗಾಗಿ ಒಂದು ಮನೆ ಕಟ್ಟಿಸಿ ಅಲ್ಲಿ ಷೆಲ್ಫ್‌ಗಳನ್ನು ಮಾಡಿ, ಶವದ ಪೆಟ್ಟಿಗೆಯನ್ನು ಷೆಲ್ಫ್‌ನಲ್ಲಿ ತೂರಿಸಿ, ಸಿಮೆಂಟು ಹಾಕಿ ಸೀಲ್ ಮಾಡುವರಂತೆ. ಹೀಗಾಗಿ ಒಂದೊಂದು ಬಿಲ್ಡಿಂಗ್‌ನಲ್ಲೇ ನೂರಾರು ಶವಗಳನ್ನು ಸಮಾಧಿ ಮಾಡುವರು.

ವೈದ್ಯಕೀಯ ಸೌಲಭ್ಯವು ತೀರಾ ವೆಚ್ಚದಾಯಕವಿದ್ದರೂ ತುಂಬಾ ವ್ಯವಸ್ಥಿತ. ಇದೊಂದು ದೊಡ್ಡ ಬಿಸಿನೆಸ್. ಈ ಬಗ್ಗೆ ಅನೇಕ ಮೋಜಿನ ಕಥೆಗಳಿವೆ. ಓರ್ವ ವೈದ್ಯ ಓರ್ವ ನರ್ಸಳೊಡನೆ ಪ್ರೇಮ ವ್ಯವಹಾರದಲ್ಲಿ ತೊಡಗಿದ. ಮುಂದೆ ಭಿನ್ನಾಭಿಪ್ರಾಯ ಬಂದು ಕೈಬಿಟ್ಟ, ಆವಳು ಪರಿಹಾರ ಧನ ಕೇಳ ಹೊರಟಾಗ ಹೇಳಿದನಂತೆ, "ಹುಷಾರ್ ನಿನ್ನ ಕೈಯಿಂದ ಕನ್‌ಸಲ್ಟೇಷನ್ ಫೀ ಪಡೆದಿಲ್ಲ. ಆದನ್ನೆಲ್ಲ ಮಾಫಿ ಮಾಡಿದ್ದೇನೆ...". ವೈದ್ಯರು ಅನೇಕರು ಯಾವ ಮುಲಾಜಿಲ್ಲದೆ ರೋಗಿಯ ಜೇಬಿನ ಸೈಜ್ ನೋಡಿಯೇ ಚಿಕಿತ್ಸೆ ಮಾಡುವುದು. ಮತ್ತು ಹೆಲ್ತ್ ಇನ್ಶೂರೆನ್ಸ್ ಇಲ್ಲಿ ಬೇಕೇ ಬೇಕು. ಕಡ್ಡಾಯವಾಗಿ ಎಲ್ಲರೂ ಹೆಲ್ತ್ ಇನ್ಶೂರೆನ್ಸ್ ಮಾಡುತ್ತಾರೆ. ಕಾಯಿಲೆಯಾದಾಗ ಚಿಕಿತ್ಸೆಯ ವೆಚ್ಚವನ್ನು ಕಂಪೆನಿ ಕೊಡುತ್ತದೆ. ಹೆರಿಗೆ ಸಹ ಅಲ್ಲಿ ತುಂಬಾ ತುಟ್ಟಿ, ಅಲ್ಲಿ ಮಕ್ಕಳು ಹುಟ್ಟಿದರೆ ಅವರಿಗೆ ನಾಗರಿಕತ್ವ ತೊಂದರೆಯಿಲ್ಲದೆ ಸಿಗುತ್ತದೆ ಎಂದು ಭಾರತೀಯರು ಅಲ್ಲೇ ಹೆರಿಗೆಗೆ ಇಚ್ಛಿಸುತ್ತಾರೆ. ಆದರೆ ಲೆಕ್ಕ ಹಾಕಿದರೆ ಇಲ್ಲಿಗೆ ಬಂದು ಹೆರಿಗೆ ಮಾಡಿಸಿಕೊಂಡು ಹೋದರೆ ಎಷ್ಟು ವೆಚ್ಚವಾಗುತ್ತದೋ ಆದಕ್ಕಿಂತಲೂ ಹೆಚ್ಚಿನ ವೆಚ್ಚವಂತೆ ಅಲ್ಲಿ ಹೆರಿಗೆಯಾದರೆ.

ಡಾಕ್ಟರ್ಸ್ ಆಫೀಸ್ ಎಂದು ಸಂಬೋಧನೆ ಮಾಡುತ್ತಿದ್ದುದರಿಂದ ಕುತೂಹಲಿತಳಾಗಿ ನ್ಯಾಷ್‌ವೀಲ್ ಎಂಬಲ್ಲಿ ನಾನು ಡಾ॥ ಚನ್ನಬಸಪ್ಪನವರ ಕಾರ್ಯಾಲಯ ನೋಡಿದೆ. ಅಲ್ಲಿ ಏನಿದ್ದರೂ ಸಲಹೆ ಮತ್ತು ಪರೀಕ್ಷೆಗಳು ನಡೆಯುತ್ತವೆ. ಚಿಕಿತ್ಸೆಗೆ ಆಸ್ಪತ್ರೆಗಳಿಗೇ ಹೋಗಬೇಕು. ಪ್ರತಿಯೊಬ್ಬ ವೈದ್ಯರೂ ಒಂದು ಆಸ್ಪತ್ರೆಗೆ ಹೊಂದಿಯೇ ಇರಬೇಕು. ಆದರೆ ಓರ್ವ ರೋಗಿ ಒಬ್ಬರೇ ವೈದ್ಯರ ಬಳಿ ಖಾಯಂ ಆಗಿ ಇರುತ್ತಾರೆ. ರೋಗಿಯ ಸಂಪೂರ್ಣ ತಿಳುವಳಿಕೆ ವೈದ್ಯರಿಗಿರುತ್ತದೆ. ಇವರ ವಿಶೇಷ ಪರಿಣತಿಗೆ ಸಂಬಂಧಿಸಿದ ಖಾಯಿಲೆಯಾದರೆ ಆ ರೋಗಿಯನ್ನು ಆ ಚಿಕಿತ್ಸೆ ಮಟ್ಟಿಗೆ ಇನ್ನೊಬ್ಬರಿಗೆ ವಹಿಸುತ್ತಾರೆ. ಒಬ್ಬ ರೋಗಿಯನ್ನು ವೈದ್ಯನು ಗುತ್ತಿಗೆ ಹಿಡಿದ ಮೇಲೆ ಅವನ ಸಂಪೂರ್ಣ ಹೊಣೆಗಾರಿಕೆ ವೈದ್ಯನದು. ಎಷ್ಟು ಹೊತ್ತಿನಲ್ಲಿ ಕರೆದರೂ

ಚಿಕಿತ್ಸೆ ನೀಡಲೇಬೇಕು. ಏನಾದರೂ ಖಾಯಿಲೆ ಅಧಿಕವಾದರೆ ರೋಗಿಯನ್ನು ಆಸ್ಪತ್ರೆಗೆ ಸೇರಿಸಲಾಗುತ್ತದೆ. ಆದರೆ ಈ ಕುಟುಂಬ ವೈದ್ಯರೇ ಅಲ್ಲಿಗೆ ಹೋಗಿ ಚಿಕಿತ್ಸೆ ನೀಡಬೇಕು. ತಪ್ಪಿಸಿಕೊಳ್ಳಲು ಬರದು. ತುರ್ತು ಪರಿಸ್ಥಿತಿಯಲ್ಲಿ ತಪ್ಪಿಸಿ ಕೊಂಡರೆ ವೈದ್ಯರನ್ನು ಕೋರ್ಟಿಗೆ ಎಳೆಯಲಾಗುತ್ತದೆ, ಅವರು ಅಪಾರ ದಂಡ ತೆರಬೇಕು. ಊಟ-ನಿದ್ರೆ ಮರೆತು ಎಷ್ಟು ಹೊತ್ತಿನಲ್ಲಿ call ಬಂದರೂ ಸಿದ್ಧರಿರ ಬೇಕು. 'ಅ' ವೈದ್ಯನಿಗೆ ಸಂಬಂಧಿಸಿದ ರೋಗಿ 'ಉ' ಆಸ್ಪತ್ರೆಯಲ್ಲಿ ಇದ್ದಾನೆಂದು ಭಾವಿಸಿದರೆ, ನಮ್ಮಲ್ಲಿಯಾದರೆ ಆಯಾ ಪಾಳಿಯ ಮೇಲೆ ಇರುವವರು ನೋಡಿ ಮನಸ್ಸಿಗೆ ಬಂದಂತೆ ಔಷಧಿ ಕೊಟ್ಟು ಬಿಡುತ್ತಾರೆ. ಅಲ್ಲಿ ಹಾಗಲ್ಲ. ಕೇವಲ ಪ್ರಥಮ ಚಿಕಿತ್ಸೆ ಮಾತ್ರ ಮಾಡಿ, ಅವರ ವೈದ್ಯರನ್ನೇ ಕರೆಯುತ್ತಾರೆ.

ಒಂದು ದಿವಸ ಅದೇ ನ್ಯಾಷ್‌ವೀಲ್‌ನಲ್ಲಿ ಶ್ರೀಮತಿ ಮಂಗಲಾ ಚನ್ನಬಸಪ್ಪ ಅವರ ಮನೆಯಲ್ಲಿ ಇದ್ದೆವು. ಒಂದು ವಾಕಿ-ಟಾಕಿ ಇರಿಸಿಕೊಂಡು, ಡಾಕ್ಟರು ನಮ್ಮೊಡನೆ ಮಾತನಾಡುತ್ತ ಕುಳಿತಿದ್ದರು. ಅದು ಬೀಪ್ ಬೀಪ್ ಎಂದು ಶಬ್ದ ಮಾಡಿದಾಗ ಆಲಿಸಿದರು. ತುರ್ತುಕರೆ ಬಂದಿತ್ತು, ಆಫೀಸ್ ಸೆಕ್ರೆಟರಿ ಓರ್ವ ರೋಗಿ ಯನ್ನು ದಾಖಲೆ ಮಾಡಿದ್ದಾಗಿಯೂ ಅಲ್ಲಿಗೆ ವೈದ್ಯರು ಹೋಗಬೇಕೆಂಬುದಾಗಿಯೂ ಹೇಳಿದಳು. ಇದು ಹೇಗೆ ಎಂದು ಕೇಳಿದೆ. ಹಗಲು ವೇಳೆಯಲ್ಲಿ ಓರ್ವ ಕಾರ್ಯಾಲಯ ಕಾರ್ಯದರ್ಶಿನಿ ಕೆಲಸ ಮಾಡುವಳು. ಸಾಮಾನ್ಯವಾಗಿ ವೈದ್ಯರು ತಮ್ಮ ಮನೆಯ ಫೋನು ನಂಬರು ಬೇರೆಯವರಿಗೆ (ಸ್ನೇಹಿತರನ್ನು ಬಿಟ್ಟು) ಕೊಡರು. ಮನೆಯ ನಂಬರಿಗೆ ಕಾರ್ಯದರ್ಶಿನಿ ಮಾತ್ರ ಸಂಪರ್ಕಿಸುವಳು-ರಾತ್ರಿಯ ವೇಳೆಯಲ್ಲಿ ಓರ್ವ ಪಾರ್ಟ್ ಟೈಂ ಉದ್ಯೋಗಸ್ಥೆ ತಮ್ಮ ಮನೆಯಲ್ಲಿ ಫೋನು ಇರಿಸಿಕೊಂಡು, ರೋಗಿಗಳಿಂದ ಎಮರ್ಜೆನ್ಸಿ ಕರೆ ಬಂದಾಗ ಈ ಡಾಕ್ಟರನ್ನು ವಾಕಿ-ಟಾಕಿ ಮೂಲಕ ಸಂಪರ್ಕಿಸುವಳು. ಇವರು ಮನೆಯಲ್ಲೇ ಇರಲಿ, ಕಾರಿನಲ್ಲೇ ಹೋಗುತ್ತಿರಲಿ, ಯಾವುದಾದರೂ ಸಭೆಯಲ್ಲೇ ಇರಲಿ ಆ ಯಂತ್ರವನ್ನು ಜೊತೆಗೆ ಒಯ್ಯುವರು. ಅದು ಬೀಪ್ ಬೀಪ್ ಧ್ವನಿ ಮಾಡುತ್ತದೆ. ಆಲಿಸಿದಾಗ ಕಾರ್ಯದರ್ಶಿನಿ ರೋಗಿಯ ವಿವರ ತಿಳಿಸುವಳು. ಇದು ರೇಡಿಯೋ ಧ್ವನಿ ವ್ಯವಸ್ಥೆಯಂತೆ ಕೆಲಸ ಮಾಡುವ ವೈರ್ ಲೆಸ್ ಸಾಧನ. ಇದರ ಮುಖಾಂತರ ದೂರದಲ್ಲಿದ್ದವರನ್ನು ಸಂಪರ್ಕಿಸಬಹುದು. ಕರೆ ಮುಟ್ಟಿದ ತಕ್ಷಣ ವೈದ್ಯರು ಎಲ್ಲಿದ್ದರೂ ಓಡಿಬರಬೇಕು.

ರೋಗಿಗಳು ಕೋರ್ಟಿಗೆ ಎಳೆದಾರೆಂಬ ಭಯ ವೈದ್ಯರಿಗೆ ಬಹಳ. ಭಾರತೀಯ ವೈದ್ಯರು ಹೆಚ್ಚಿನ ಮಮತೆಯಿಂದ, ವೈಯಕ್ತಿಕ ಆಸಕ್ತಿ ತೆಗೆದುಕೊಂಡು ರೋಗಿ ಗಳನ್ನು ನೋಡಿಕೊಳ್ಳುವ ಕಾರಣ ಇವರ ಬಗ್ಗೆ ರಾಜಕಾರಣಿಗಳಿಗೆ, ಸರ್ಕಾರಕ್ಕೆ

ತುಸು ಅಸೂಯೆ ಇದ್ದರೂ, ಅಮೆರಿಕನ್ ಜನರಲ್ಲಿ ಒಳ್ಳೆಯ ಅಭಿಪ್ರಾಯವಿದೆ. ಹೀಗಾಗಿ ಕೇವಲ ವ್ಯವಹಾರ ದೃಷ್ಟಿಯಿಂದ ವೈದ್ಯಕೀಯ ವೃತ್ತಿಯನ್ನು ಮಾಡದೆ ನಿಷ್ಠೆಯಿಂದ ಮಾಡುವ ಭಾರತೀಯ ವೈದ್ಯರಿಗೆ ಉತ್ಪನ್ನವೂ ಚೆನ್ನಾಗಿದೆ.

ವೈದ್ಯರನ್ನು ಭೇಟಿಯಾಗಲು ಮೊದಲೇ ಸಂದರ್ಶನದ ವೇಳೆ ಗೊತ್ತುಪಡಿಸಬೇಕು. ನಮ್ಮಲ್ಲಿಯ ಹಾಗೆ ಇದ್ದಕ್ಕಿದ್ದಂತೆಯೇ ಹೋಗಿ ತೋರಿಸಿಕೊಳ್ಳಲು ಸಾಧ್ಯವಿಲ್ಲ. ಒಮ್ಮೆ ಏನೋ ಕಾಯಿಲೆಯಿಂದ ಬಳಲುವ ಓರ್ವ ರೋಗಿ ವೈದ್ಯರನ್ನು ಅಪಾಯಿಂಟ್‌ಮೆಂಟ್ ಕೇಳಿದಳು. ಅವರು ಹದಿನೈದು ದಿನಗಳಾನಂತರ ಕೊಟ್ಟರು. ಅಷ್ಟರಲ್ಲಿ ನಾನು ಸತ್ತುಹೋಗುತ್ತೇನೆ; ಬಾಧೆ ತಡೆದುಕೊಳ್ಳಲಾರೆ ಎಂದಳು. ಆಗ ವೈದ್ಯರು ಶಾಂತವಾಗಿಯೇ ಹೇಳಿದರು, "ಪರವಾಗಿಲ್ಲ; ಅಪಾಯಿಂಟ್‌ಮೆಂಟ್ ಕ್ಯಾನ್ಸಲ್ ಮಾಡುತ್ತೇವೆ."

ಇಂಥ ವಿಚಿತ್ರ ಪದ್ಧತಿ ನಗೆ ತರಿಸುತ್ತದೆ. ಆದರೆ ತ್ವರಿತ ಚಿಕಿತ್ಸೆ ಬೇಕಾದಲ್ಲಿ ನೀಡುತ್ತಾರೆ. ತ್ವರಿತವಾಗಿ ಬರುವ ಅಂಬ್ಯುಲೆನ್ಸ್ ನೆರವು ಜೀವಕ್ಕೆ ಅಲ್ಲಿರುವ ಬೆಲೆಯನ್ನು ಸ್ಪಷ್ಟೀಕರಿಸುತ್ತವೆ. ಕೆಲವು ಬೃಹತ್ ಆಸ್ಪತ್ರೆಗಳ ಬಿಸಿಲು ಮಾಳಿಗೆ ಮೇಲೆ ಹೆಲಿಕಾಪ್ಟರುಗಳು ನಿಲ್ಲಲು ಅನುಕೂಲವಿರುತ್ತದೆ. ಯಾರಾದರೂ ಪರಿಣಿತರನ್ನು ಕರೆತರಲು ಹೆಲಿಕಾಪ್ಟರ್ ಬಳಸುತ್ತಾರೆ. ಸರ್ಕಾರಿ ಆಸ್ಪತ್ರೆಗಳಲ್ಲಿಯೂ ವೈದ್ಯರು ದಕ್ಷ ಚಿಕಿತ್ಸೆ ನೀಡುತ್ತಾರೆ. ರೋಗಿಯ ಆಸ್ಪತ್ರೆ ರೂಮು ಬಾಡಿಗೆ ನರ್ಸಿಂಗ್ ವೆಚ್ಚವನ್ನು ಆಸ್ಪತ್ರೆ ಪಡೆದರೆ ತನ್ನ ಚಿಕಿತ್ಸೆಯ ಹಣವನ್ನು ಡಾಕ್ಟರ್ ಪಡೆಯುತ್ತಾನೆ. ಹೆಲ್ತ್ ಇನ್ಶ್ಯೂರೆನ್ಸ್ ಇದ್ದವರು ಅದರಿಂದ ಹಣ ಪಡೆದರೆ ಇಲ್ಲದವರು ತಮ್ಮ ಸ್ವಂತ ಶಕ್ತಿಯಿಂದ ಕೊಡಬೇಕು. ಇಂಗ್ಲೆಂಡಿನಲ್ಲಿ ವೈದ್ಯಕೀಯ ಚಿಕಿತ್ಸೆ ಎಷ್ಟು ಸೋವಿಯೋ ಇಲ್ಲಿ ಅಷ್ಟೇ ತುಟ್ಟಿ. ಆದರೆ ವೈದ್ಯರು ಮಾತ್ರ ಯಾವುದೇ ಕಾಲದಲ್ಲಿಯಾದರೂ ನೆರವು ನೀಡುತ್ತಾರೆ.

ಹೀಗೆ ಸರ್ವರಂಗಗಳಲ್ಲೂ ವೈಯಕ್ತಿಕ ಒಡೆತನ ತುಂಬಿ ಜೀವನವು ವೆಚ್ಚದಾಯಕವಾದರೂ, ಸುವ್ಯವಸ್ಥಿತ ಸ್ಥಿತಿಯಲ್ಲಿ ಇರುತ್ತದೆ. ಈ ವ್ಯವಸ್ಥೆ, ಕಾಯಕನಿಷ್ಠೆ ನಮ್ಮಲ್ಲಿ ಬರುವುದೆಂತು, ಎಂದು? ಎಂಬುದೇ ನಮ್ಮ ಸಮಸ್ಯೆ. (ಸಶೇಷ)

ಆಶೆಗೆ ಸತ್ತುದು ಕೋಟಿ!
ಆಮಿಷಕ್ಕೆ ಸತ್ತುದು ಕೋಟಿ!
ಹೊನ್ನು ಹೆಣ್ಣು ಮಣ್ಣಿಗೆ ಸತ್ತುದು ಕೋಟಿ!
ಗುಹೇಶ್ವರಾ! ನಿನಗಾಗಿ ಸತ್ತವರನಾರನೂ ಕಾಣೆ

—ಅಲ್ಲಮ ಪ್ರಭು

ಇದುವೇ ಮಾನವ ಜಗತ್ತು

—ಮಾತಾಜಿ

ಬಾಳ ಬುತ್ತಿ :

"ಮುಳುಗುತ್ತಿದ್ದವರನ್ನು ಸಾವಿನ ದವಡೆಯಿಂದ ಪಾರು ಮಾಡಿದ. ಆದರೆ ಆತನ ಕಿಸೆಯಿಂದ ಸಾವಿರ ರೂಪಾಯಿ ಹಣ ಅಪಹರಣವಾಯಿತು." ದಿನಾಂಕ 29-3-1981 ಭಾನುವಾರದ ಪತ್ರಿಕೆಯಲ್ಲಿ ಓದಿ, ಮೈನಡುಕ. ಶೀರ್ಷಿಕೆಯೂ ಅಷ್ಟೇ ಪರಿಣಾಮಕಾರಿಯಾಗಿದೆ "ಪ್ರಾಣರಕ್ಷಕನ ಜೇಬಿಗೆ ಕತ್ತರಿ". ಇದೇ ಈ ಲೋಕದ ನಡೆಯೆ? ಮಾರ್ಚ್ 8 ರಂದು ಹೊನ್ನಾವರದಲ್ಲಿ ಶರಾವತಿ ಪ್ರವಾಹ ಉಕ್ಕಿ ಹರಿಯಿತು. ಸಂತ್ರಸ್ಥರಿಗೆ ಪರಿಹಾರಧನ ವಿತರಣೆ ಮಾಡುತ್ತಿದ್ದ ಗೋವಿಂದನಾಯಕ ಎಂಬ ಓರ್ವ ಸಮಾಜ ಕಾರ್ಯಕರ್ತ, ದೋಣಿದಾಂಟಿಸುವಾಗ ದೋಣಿ ಮುಳುಗುವಂತಾದ್ದರಿಂದ ಅನೇಕರನ್ನು ರಕ್ಷಿಸತೊಡಗಿದರು. ಹಾಗೆ ರಕ್ಷಿಸಲ್ಪಟ್ಟ ಓರ್ವ ಹಳ್ಳಿಗ ಕಾರ್ಯಕರ್ತನ ಜೇಜಿನಲ್ಲಿದ್ದ ಹಣವನ್ನು ಲಪಟಾಯಿಸಿದ. ಸಂಶಯ ಬಂದು ಅವನ ಮನೆಗೆ ದಾವಿಸಿದಾಗ ತೊಯ್ದ ನೋಟನ್ನು ಎಣಿಸುತ್ತಲ್ಲಿದ್ದ ಆ ಭೂಪ.

ಇದು ತಮಾಷೆಯಿಂದ ನಗುವಂಥದಲ್ಲ. ಗಂಭೀರವಾಗಿ ಆಲೋಚಿಸುವಂಥಾದ್ದು! ಮನುಷ್ಯನ ಗುಣವು ಇಷ್ಟೆಯೇ? ಬೇರಿತರ ಎಲ್ಲ ಪ್ರಾಣಿಗಳಿಗಿಂತಲೂ ಹೀನನಾದ 'ಕೃತಘ್ನ' ಮನುಷ್ಯನೆ? ಮಾನವೀಯತೆ, ಔದಾರ್ಯ, ಸಹಾಯ ಮಾಡಬೇಕೆಂಬ ಗುಣ-ಇವನ್ನು ಇಂದಿನ ಜಗತ್ತಿನಲ್ಲಿ ಮರೆತು ಬಿಡುವುದು ಒಳ್ಳೆಯದೆನಿಸುತ್ತದೆ. "ಸ್ವಾರ್ಥಿಯಾದಷ್ಟೂ ಮನುಷ್ಯ ಸುಖಿಯಾಗುವನೇನೋ, ನಿಸ್ವಾರ್ಥಿಯಾದಷ್ಟೂ ದುಃಖಿಯಾಗುವನೇನೋ" ಎಂಬ ಸಂದೇಹ ಬರತೊಡಗಿದೆ. "ಒಳ್ಳೆಯವರೇ ಕಷ್ಟವನ್ನು ಅನುಭವಿಸುವರು, ಕೆಟ್ಟವರೇ ಸುಖವಾಗಿರುವರು. ಈ ಲೋಕದಲ್ಲಿ ನ್ಯಾಯಕ್ಕೆ ಬೆಲೆ ಎಲ್ಲಿದೆ?" ಎಂದು ಯಾರಾದರೂ ಕೇಳಿದರೆ ನಾನು ಸಾಮಾನ್ಯವಾಗಿ ಉತ್ತರಿಸುತ್ತಿದ್ದೆ. 'ತನ್ನ ಆತ್ಮ ತೃಪ್ತಿಗಾಗಿ ತಾನು ಒಳ್ಳೆಯವನಾಗಿರಬೇಕು, ಒಳ್ಳೆಯದನ್ನು ಮಾಡಬೇಕು.'

ಈ ತತ್ತ್ವಜ್ಞಾನ ಎಷ್ಟು ಸಮರ್ಥನೀಯ? ತನ್ನ ಆತ್ಮ ತೃಪ್ತಿಗಾಗಿ ಮನುಷ್ಯ ಒಳ್ಳೆಯವನಾಗಿದ್ದು, ಒಳ್ಳೆಯದು ಮಾಡಬೇಕು–ನಿಜ ಆದರೆ ತನ್ನ ಒಳ್ಳೆಯತನಕ್ಕೆ ಪ್ರತಿಯಾಗಿ ಉಪಕಾರ ಮಾಡಿಸಿಕೊಂಡವರಿಂದ ಅಪಕಾರ ಹೊಂದಿದರೆ ಎಷ್ಟು ದಿವಸಗಳ ಕಾಲ ಒಳ್ಳೆಯದನ್ನು ಮಾಡಬೇಕೆಂಬ ಆಕಾಂಕ್ಷೆ ಇರುವುದು.

ನನ್ನ ಹೃದಯ ಬಲು ಮೃದು. ಕಷ್ಟದಲ್ಲಿರುವ ಯಾರಾದರೂ ಬಂದು ಎರಡು ಹನಿ ಕಣ್ಣೀರು ಹಾಕಿದರೆ ಸಾಕು. ಆದರಲ್ಲಿಯೂ ಅನಾಥರು, ದುಃಖಿತರು, ನಿರಾಶ್ರಿತರೂ ಬಂದು ಕೇಳಿದರೆ ಬಲು ಬೇಗ ಮೆದುವಾಗಿ ಬಿಡುತ್ತೇನೆ. ಈ ಜಗತ್ತಿನಲ್ಲಿ ಶೋಷಿತ ವರ್ಗಕ್ಕೆ ಸೇರಿದ ಸ್ತ್ರೀಯರಿಗಾಗಿ ಏನಾದರೂ ಉಪಕಾರಮಾಡಬೇಕೆಂಬ ಆಕಾಂಕ್ಷೆ ನನ್ನದು. ಆದರೆ ಆ ರೀತಿ ಆಶ್ರಯ ಪಡೆದು, ನಾಲ್ಕಾರು ದಿನದಲ್ಲಿಯೇ ಉಂಡು ತಿಂದು ಮರಳಿ ವಾಪಸ್ಸು ದ್ರೋಹ ಬಗೆಯುತ್ತಿದ್ದಂತೆಯೇ ಮನಸ್ಸು ತೀವ್ರವಾದ ಆಘಾತಕ್ಕೊಳಗಾಗುತ್ತದೆ. ಈ ಜಗತ್ತಿನಲ್ಲಿ ಲಕ್ಷ ಲಕ್ಷಗಟ್ಟಳೆ ಸಂಪಾದಿಸುವ ಸಿರಿವಂತರಿದ್ದಾರೆ. ಭವ್ಯ ಹರ್ಮ್ಯಗಳನ್ನು ಕಟ್ಟಿಕೊಂಡು ತಮ್ಮಷ್ಟಕ್ಕೆ ತಾವೇ ಬದುಕುವವರಿದ್ದಾರೆ. ಅಂಥ Self-Centred ಬಾಳಿನಿಂದ ಪ್ರಯೋಜನವೇನು? ನಾಲ್ವರಾದರೂ ಉದ್ಧಾರವಾಗಲಿ ಎಂಬ ಆಕಾಂಕ್ಷೆ ತಾಳಿ ಸಂಕಟದಲ್ಲಿದ್ದವರಿಗೆ ಆಶ್ರಯ ನೀಡುವುದುಂಟು. ಆದರೆ ನದಿಯಲ್ಲಿ ಮುಳುಗುವವನನ್ನು ರಕ್ಷಿಸಿದವನ ಪರಿಹಾರ ಧನದ ಗಂಟನ್ನೇ ಹೊಡೆದ ಕೃತಘ್ನನಂತೆ, ಅನೇಕರು ಸಂಕಟಕಾಲದಲ್ಲಿ ಆಶ್ರಯಕೊಟ್ಟುದನ್ನು ಸಂಪೂರ್ಣ ಮರೆತು, ಅನ್ನವಿಟ್ಟ ಕೈಗೇ ಕಚ್ಚುವುದುಂಟು.

ಇನ್ನು ಕೆಲವರು ಅಧ್ಯಾತ್ಮ ಜೀವಿಗಳು, ಸಾಧಕರು ಎಂದು ಆಶ್ರಯ ಬೇಡಿ ಬರುವುದುಂಟು. ದೇವರಿಗಾಗಿ, ಧರ್ಮಕ್ಕಾಗಿ ಬದುಕನ್ನು ಮುಡಿಪಿಟ್ಟು ಬರುವವರು ತೀರಾ ಕ್ವಚಿತ್ ಎಂದು ಮರುಕದಿಂದ ಆಶ್ರಯಕೊಟ್ಟರೆ, ಎಲ್ಲಾ ಸೌಲಭ್ಯಗಳನ್ನು ಪಡೆದು, ಉಂಡು ತಿಂದು ಜ್ಞಾನ ಪಡೆದು ಮತ್ತೆ ದ್ರೋಹ ಮಾಡುವುದುಂಟು. ಆದ್ದರಿಂದ ಇನ್ನು ಮೇಲೆ ಸಹಾಯ ಮಾಡುವವರೇ, ದ್ರೋಹಿಗಳಿದ್ದಾರೆ ಎಚ್ಚರಿಕೆ! ತೀರಾ ಮೃದುವಾಗಬೇಡಿ. ನಿಮ್ಮ ಮೃದುಗುಣ ನಿಮಗೆ ಅಳಿವನ್ನುಂಟು ಮಾಡುತ್ತದೆ ಎಂದು ಕೃತಘ್ನರ ಈ ಜಗತ್ತಿನಲ್ಲಿ ಹೇಳಬೇಕಾಗುತ್ತದೆ.

ಎಂತಹ ತಪ್ಪಿಗೂ ಕ್ಷಮೆಯನ್ನೀಯುವ ಒಂದು ನ್ಯಾಯಾಲಯವಿದೆ,
ಅದು ಮಾತ್ರ ಹೃದಯ.
ಲಾಭಕ್ಕಿಂತಲೂ ಕರ್ತವ್ಯ ಮುಖ್ಯ, ಜಯಕ್ಕಿಂತಲೂ ಸಾಧನೆ ಮುಖ್ಯ,
ಫಲಕ್ಕಿಂತಲೂ ಶ್ರಮಿಸುವುದು ಮುಖ್ಯ, ಮಾತಿಗಿಂತಲೂ ಕೃತಿ ಮುಖ್ಯ.

—ವೇದ

ದೂರವಾಣಿ : 82335

ವಿಶ್ವ ಕಲ್ಯಾಣ ಮಿಷನ್ ವಿದ್ಯಾಸಂಸ್ಥೆಯ ಪ್ರಕಟಣೆ.

ಬಸವ ಮಂಟಪ, ಕಾರ್ಡ್‌ರಸ್ತೆ, 2ನೇ ಬ್ಲಾಕು, ರಾಜಾಜಿನಗರ,
ಬೆಂಗಳೂರು-560010.

ಶಿಕ್ಷಕರ ಕಾರ್ಯಕ್ಕೆ ಅರ್ಜಿ

ವಿಶ್ವಕಲ್ಯಾಣ ಮಿಷನ್ ವಿದ್ಯಾಸಂಸ್ಥೆಯು ನಡೆಸುತ್ತಿರುವ ಶ್ರೀ ಬಸವಭಾರತಿ ಉನ್ನತ ಪ್ರೈಮರಿ ಮತ್ತು ಪ್ರೌಢ ಶಾಲೆಗಳಿಗೆ; ಮತ್ತು ಅಕ್ಕಮಹಾದೇವಿ ನರ್ಸರಿ ಮತ್ತು ಪ್ರೈಮರಿ ಶಾಲೆಗಳಿಗೆ ಶಿಕ್ಷಕರಾಗಿ ಸೇರ ಬಯಸುವವರಿಗೆ ಕೆಳಕಂಡ ಅವಕಾಶಗಳಿವೆ.

ಬಸವ ಭಾರತಿ ರೆಸಿಡೆನ್ಷಿಯಲ್ ಪ್ರೌಢಶಾಲೆ

1. ಮುಖ್ಯೋಪಾಧ್ಯಾಯರ ವೃತ್ತಿ. ಬಿ.ಎ.ಬಿ.ಎಡ್. ಅಥವಾ ಬಿ.ಎಸ್‌ಸಿ. ಬಿ.ಎಡ್. ಆಗಿ 5 ವರ್ಷಗಳ ಕಾಲ. ಮಾನ್ಯತೆ ಪಡೆದ ಶಾಲೆಯಲ್ಲಿ ಕಲಿಸಿದ ಅನುಭವ. (ಪುರುಷರು ಅಥವಾ ಸ್ತ್ರೀಯರು ಯಾರಾದರೂ ಆಗಬಹುದು).
2. ಪಿ. ಸಿ. ಎಂ. ವಿಷಯಗಳೊಡನೆ ಬಿ.ಎಸ್.ಸಿ. ಬಿ ಎಡ್. ಮಾಡಿಕೊಂಡ ಪದವೀಧರರು.
3. ಪೂರ್ಣಾವಧಿಯ ಕನ್ನಡ ಪದವೀಧರರು. ಕನ್ನಡ ವಿಷಯದೊಡನೆ ಚರಿತ್ರೆ, ಅರ್ಥಶಾಸ್ತ್ರ ಮಾಡಿಕೊಂಡು, ಬಿ.ಎಡ್. ಪರೀಕ್ಷೆ ಪಾಸಾದವರು.
4. ಫಿಸಿಕಲ್ ಇನ್‌ಸ್ಟ್ರಕ್ಟರ್. ದೈಹಿಕ ಶಿಕ್ಷಣದ ಡಿಪ್ಲೊಮಾ ಪಡೆದವರು.
5. ಹಿಂದಿ, ಚರಿತ್ರೆ, ಸಂಸ್ಕೃತ ಜೋಡಣೆಯ ಮೇಲೆ ಬಿ.ಎ ಬಿ.ಎಡ್.ಆದವರು. (ಅಥವಾ ಹಿಂದೀ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದವರು)

ಬಸವ ಭಾರತಿ ಉನ್ನತ ಪ್ರೈಮರಿ ಶಾಲೆ

1. ಟಿ.ಸಿ.ಹೆಚ್. ಪಾಸಾಗಿ, ಕನಿಷ್ಟ 5 ವರ್ಷ ಸರ್ಕಾರಿ ಮಾನ್ಯತೆ ಪಡೆದ ಶಾಲೆಯಲ್ಲಿ ಉಪಾಧ್ಯಾಯರಾಗಿ ಕೆಲಸ ಮಾಡಿರುವವರು ಉನ್ನತ ಪ್ರೈಮರಿ ಶಾಲೆಗೆ ಮುಖ್ಯೋಪಾಧ್ಯಾಯರಾಗಿರಬೇಕು.
2. ಆಂಗ್ಲ ಮಾಧ್ಯಮದಲ್ಲಿ ಕಲಿಸಬಲ್ಲ ಟಿ.ಸಿ.ಹೆಚ್. ಪಾಸಾದ ಇಬ್ಬರು ಶಿಕ್ಷಕರು ಅದಕ್ಕಿಂತಲೂ ಹೆಚ್ಚಿನ ಪದವೀ ಪಡೆದು, ಆಂಗ್ಲ ಮಾಧ್ಯಮದಲ್ಲಿ ಬೋಧಿಸುವ ಶಕ್ತಿ ಮತ್ತು ಆಸಕ್ತಿ ಇದ್ದವರು.

ವಿಶೇಷ ಸೂಚನೆಗಳು

1. ಶಿಕ್ಷಕ ವೃತ್ತಿಯಲ್ಲಿ ವಿಶೇಷ ಆಸಕ್ತಿಯಿರುವ ಅಧ್ಯಾತ್ಮ ಪ್ರವೃತ್ತಿಯ ಶಿಕ್ಷಕರಿಗೆ ಆದ್ಯತೆಯುಂಟು.
2. ಪುರುಷರಿರಲಿ, ಸ್ತ್ರೀಯರಿರಲಿ ಉಭಯತರೂ ಅರ್ಜಿ ಸಲ್ಲಿಸಬಹುದು. ವಿವಾಹಿತರಾದ ಶಿಕ್ಷಕರಿದ್ದು ಪತಿ-ಪತ್ನಿಯರಿಬ್ಬರೂ ಪದವೀಧರರಾಗಿದ್ದರೆ ಉಭಯರಿಗೂ ಕಾಯಕ ನೀಡಲು ಆದ್ಯತೆಯುಂಟು.
3. ಬಸವ ಗಂಗೋತ್ರಿಯ ಆವರಣದಲ್ಲಿ ಇರಲು ಅವಕಾಶ ಉಂಟು. ಅಥವಾ ಅತ್ಯಂತ ಸನಿಹದ ಕೆಂಗೇರಿಯಲ್ಲಿ ಮನೆ ಮಾಡಿ, ಬೆಂಗಳೂರಿನಲ್ಲಿ ಮನೆ ಮಾಡಿ ದಿನನಿತ್ಯ ಸಿಟಿ ಬಸ್ಸಿನಲ್ಲಿ ಬಂದು ಹೋಗಬಹುದು.
4. ಸಮರ್ಥವಾಗಿ ಕಲಿಸಬಲ್ಲ ಬೆಂಗಳೂರು ವಾಸಿಗಳಿಗೆ ಆದ್ಯತೆಯುಂಟು. ಅರ್ಜಿಸಲ್ಲಿಸಲು ಕಡೆಯ ದಿನಾಂಕ 30ನೇ ಏಪ್ರಿಲ್ 1981.

ಶ್ರೀ ಅಕ್ಕಮಹಾದೇವಿ ನರ್ಸರಿ ಮತ್ತು ಪ್ರೈಮರಿ ಶಾಲೆ

1. ನರ್ಸರಿ ಟ್ರೈನಿಂಗ್ ಪಡೆದ ಇಂಗ್ಲಿಷ್ ಮಾಧ್ಯಮದಲ್ಲಿ ಕಲಿಸಬಲ್ಲ ಓರ್ವ ಶಿಕ್ಷಕಿ.
2. ಟಿ.ಸಿ.ಹೆಚ್. ಟ್ರೈನಿಂಗ್ ಪಡೆದ, ಇಂಗ್ಲಿಷ್ ಮಾಧ್ಯಮದಲ್ಲಿ ಕಲಿಸಬಲ್ಲ ಓರ್ವ ಶಿಕ್ಷಕಿ. (ಇನ್ನೂ ಹೆಚ್ಚಿನ ಶಿಕ್ಷಣವನ್ನು ಪಡೆದಿದ್ದರೂ ಸಂತೋಷ.)

ಬೆಂಗಳೂರು ರಾಜಾಜಿನಗರದ ಆಸುಪಾಸಿನಲ್ಲಿ ವಾಸಿಸುವ ಶಿಕ್ಷಕಿಯರಿಗೆ ಆದ್ಯತೆಯುಂಟು.

ಆದ್ಯತೆಯ ನಿಯಮಗಳು

1. ಜಾತಿಯ ನಿರ್ಬಂಧವಿಲ್ಲ. ಹರಿಜನ-ಗಿರಿಜನರಿಗೆ ಮೀಸಲು ಸ್ಥಾನವುಂಟು ಪರಿಶಿಷ್ಟಜಾತಿ-ಪರಿಶಿಷ್ಟ ವರ್ಗದವರಿಗೆ ವಿಶೇಷ ಆದ್ಯತೆ.
2. ಶಾಲೆಯ ಕ್ಯಾಂಪಸ್ಸಿನಲ್ಲಿ ಬೀಡಿ-ಸಿಗರೇಟು, ಕುಡಿತ ಮುಂತಾದ ಯಾವುದೇ ದುಶ್ಚಟಗಳಿಗೆ ಅವಕಾಶವಿಲ್ಲ.
3. ಶಿಕ್ಷಕ ವೃತ್ತಿಯಲ್ಲಿ ವಿಶೇಷವಾದ ನಿಷ್ಠೆಯಿದ್ದು, ಶ್ರದ್ಧಾಭಾವದಿಂದ ಮಕ್ಕಳ ಬೆಳವಣಿಗೆಯಲ್ಲಿ ಆಸಕ್ತಿ ಇದ್ದವರು.
4. ಶಾಲೆಯ ಕ್ಯಾಂಪಸ್ಸಿನಲ್ಲಿ ಇರಲಿಚ್ಛಿಸುವವರಿಗೆ ವಿಶೇಷ ಆದ್ಯತೆ ಇದೆ.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ,
ವಿಶ್ವ ಕಲ್ಯಾಣ ಮಿಷನ್, ವಿದ್ಯಾ ಸಂಸ್ಥೆ.

ಬಸವ ಜಯಂತಿ

ಪ್ರಬಂಧ ಸ್ಪರ್ಧೆ

ಶ್ರೀ ಬಸವೇಶ್ವರ ಫಿಲೋಸಾಫಿಕಲ್ ಅಂಡ್ ಕಲ್ಚರಲ್ ಸೊಸೈಟಿ ಮತ್ತು ಮಹಾರಾಷ್ಟ್ರ ವೀರಶೈವ ಸಭಾ, ಪುಣೆ ಇವರ ಪರಸ್ಪರ ಸಹಕಾರದೊಡನೆ ಶ್ರೀ ಬಸವೇಶ್ವರರ 849 ನೆಯ ಜಯಂತಿಯನ್ನು ಮುಂಬೈಯಲ್ಲಿ ಮೇ 3, 1981 ರಂದು ಆಚರಿಸಲಿದ್ದು ಅದರ ಅಂಗವಾಗಿ ಪ್ರಬಂಧ ಸ್ಪರ್ಧೆಯೊಂದನ್ನು ಏರ್ಪಡಿಸಲಾಗಿದೆ. Life and work of Basaveswara ಎಂಬ ವಿಷಯದ ಬಗ್ಗೆ ಇಂಗ್ಲಿಷ್, ಹಿಂದಿ, ಕನ್ನಡ ಮತ್ತು ಮರಾಠಿ-ಈ ನಾಲ್ಕೂ ಭಾಷೆಗಳಲ್ಲಿ ಯಾವುದಾದರೊಂದರಲ್ಲಿ 1500 ಪದಗಳನ್ನು ಮೀರದಂತೆ 25-4-1981ರೊಳಗೆ ತಲ್ಪುವಂತೆ ಪ್ರಬಂಧ ಬರೆದು ಕೆಳಕಂಡ ವಿಳಾಸಕ್ಕೆ ಕಳಿಸಬಹುದು. ತಲಾ 250/- ರೂಗಳ ಬಹುಮಾನವಿದೆ ಮತ್ತು ವೀರಶೈವ ದರ್ಶನದಲ್ಲಿ ಇದು ಪ್ರಕಟಗೊಳ್ಳುತ್ತದೆ. ಪ್ರವೇಶ ಧನವಿಲ್ಲ. ಎಲ್ಲರಿಗೂ ಭಾಗವಹಿಸಲು ಮುಕ್ತ ಅವಕಾಶ.

Dr. V.G. Mhetras c/o
Maharashtra Institute of Labour Studies
D. C. Road, Parel, Bombay-400 012

ಬಾಯಿದ್ದವನಿಗೆ ಸೋಲಿಲ್ಲವೆಂಬುದು ನಿಜವೇ ಆದರೂ ಬಾಯಿಯನ್ನು ಸಂಯಮದಲ್ಲಿಟ್ಟುಕೊಳ್ಳಲಾರದವನು ಸಂಕಟಕ್ಕೊಳಗಾಗುತ್ತಾನೆ.

—ಪರಮಹಂಸರು

"ನಾನೆಂಬ ಅಹಂಕಾರದಲ್ಲಿ ನಾನುಂಡೆನಾದರೆ
ನನಗದೇ ಭಂಗ. ಸ್ತುತಿನಿಂದೆಗೆ ನೊಂದೆನಾದರೆ
ಅಂಗೈಯಲ್ಲಿರ್ಪ ಗುಹೇಶ್ವರಲಿಂಗಕ್ಕೆ ದೂರ."

—ಪ್ರಭುದೇವ

The religion that is afraid of science dishonours God and commits suicide

—Emerson

ಶ್ರೀ ಬಸವ ಭಾರತಿ ಉನ್ನತ ಪ್ರೈಮರಿ ಮತ್ತು ಪ್ರೌಢಶಾಲೆ

(ಇಂಗ್ಲೀಷ್ ಮತ್ತು ಕನ್ನಡ ಮಾಧ್ಯಮ)

ಸರ್ಕಾರದಿಂದ ಮಾನ್ಯತೆ ಪಡೆದ ಬಾಲಕರ ರೆಸಿಡೆನ್ಸಿಯಲ್ ಶಾಲೆ

ಸಹೃದಯರಾದ ಪಾಲಕರೇ,

ಪರಮಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಸಂಸ್ಥಾಪಿಸಿರುವ ವಿಶ್ವಕಲ್ಯಾಣ ಮಿಷನ್ ವಿದ್ಯಾಸಂಸ್ಥೆಯು ಆದರ್ಶ ಶಿಕ್ಷಣ ನೀಡುವ ಸದುದ್ದೇಶದಿಂದ 1981ನೇ ಸಾಲಿನಲ್ಲಿ 5,6,7,8 ಮತ್ತು 9ನೆಯ ತರಗತಿಗಳನ್ನು ಆರಂಭಿಸಿದೆ. ಇದರಲ್ಲಿ ಇಂಗ್ಲೀಷ್ ಮತ್ತು ಕನ್ನಡ ಮಾಧ್ಯಮಗಳು ಎರಡೂ ಲಭ್ಯವಿವೆ. ಜೊತೆಗೆ ವಿದ್ಯಾರ್ಥಿಗಳಿಗೆ ಶಾಲೆಯ ಆವರಣದಲ್ಲಿಯೇ ಊಟ-ವಸತಿ ಸೌಕರ್ಯವಿದೆ. ತಮ್ಮ ಮಕ್ಕಳಿಗೆ ಆದರ್ಶ ಶಿಕ್ಷಣವನ್ನು ಕೊಡಬಯಸುವ ತಂದೆ ತಾಯಿಗಳ ಆಕಾಂಕ್ಷೆಗಳನ್ನು ಶ್ರೀ ಬಸವ ಭಾರತಿ ವಿದ್ಯಾಲಯವು ಪೂರೈಸಲು ಇಚ್ಛಿಸುತ್ತದೆ. ಇದು ಬೆಂಗಳೂರಿನಿಂದ 21 ಕಿ. ಮಿ. ದೂರದಲ್ಲಿ ಕುಂಬಳಗೋಡಿನ ಬಳಿ, ಬೆಂಗಳೂರು-ಮೈಸೂರು ಹೆದ್ದಾರಿಯ ಮೇಲಿರುವ 33 ಎಕರೆ ವಿಸ್ತೀರ್ಣವುಳ್ಳ ಸುಂದರವಾದ ಆವರಣದಲ್ಲಿದೆ.

ಪ್ರವೇಶಪತ್ರ, ಫೀಸು, ನಿಯಮಾವಳಿ, ಊಟ-ವಸತಿ ಸೌಕರ್ಯ ಇತ್ಯಾದಿ ವಿವರಗಳಿಗೆ ಬೆಳಗ್ಗೆ 10-30 ರಿಂದ ಸಂಜೆ 5-30ರವರೆಗೆ ಆಫೀಸಿನಲ್ಲಿ ಸಂದರ್ಶಿಸಿರಿ ಅಥವಾ ಪ್ರಾಸ್‌ಪೆಕ್ಟಸ್ ಮತ್ತು ಪ್ರವೇಶಪತ್ರವನ್ನು ತರಿಸಿಕೊಳ್ಳುವವರು 5 ರೂ. ಗಳನ್ನು ಈ ಕೆಳಕಂಡ ವಿಳಾಸಕ್ಕೆ ಎಂ. ಓ. ಮಾಡಿರಿ. ಪ್ರವೇಶಪತ್ರ ಕಳಿಸಲು ಕೊನೆಯ ದಿನ ಹೈಯರ್ ಪ್ರೈಮರಿಗೆ 30 ಏಪ್ರಿಲ್, ಪ್ರೌಢಶಾಲೆಗೆ ಮೇ 15, 1981.

ಪ್ರವೇಶ ಪರೀಕ್ಷೆಗಳು ಉನ್ನತ ಪ್ರೈಮರಿಗೆ ಮೇ 15 ಪ್ರೌಢಶಾಲೆಗೆ ಮೇ 22

ವ್ಯವಹರಿಸುವ ವಿಳಾಸಗಳು :

ಸೋದರಿ ಲೋಹಿತಾದೇವಿ, ಕರೆಸ್ಪಾಂಡೆಂಟ್, ಶ್ರೀ ಬಸವ ಭಾರತಿ ವಿದ್ಯಾಲಯ,
ಬಸವಗಂಗೋತ್ರಿ, ಕುಂಬಳಗೋಡು-560074, ಮೈಸೂರು-ಬೆಂಗಳೂರು ಹೆದ್ದಾರಿ,
ಬೆಂಗಳೂರು ದಕ್ಷಿಣ ತಾಲ್ಲೋಕು. ದೂರವಾಣಿ : 34

ಮತ್ತು

ಶರಣ ಮಹಾದೇವಸ್ವಾಮಿ

ಬಸವ ಮಂಟಪ, 24, II ಬ್ಲಾಕು, ಕಾರ್ಡ್ ರೋಡ್,
ರಾಜಾಜಿನಗರ, ಬೆಂಗಳೂರು-560 010, ದೂರವಾಣಿ : 82335

VISHWAKALYANA MISSION EDUCATION SOCIETY'S

(Regd. Charitable Society)

SHRI BASAVA BHARATI VIDYALAYA

(English and Kannada Media)

RESIDENTIAL SCHOOL FOR BOYS

(Recognised by the Govt. of Karnataka)

An Appeal

Dear Parents,

Vishwakalyana Mission, a sacred institution established by Her Holiness Jagadguru Mathe Mahadevi, with an intension to impart an ideal and integral education through both Kannada and English media, has opened Higher Primary and High School sections (only for boys) It provides good residential facilities. In order to fulfill the ambitions of the parents who aspire for excellent education of their children, it appoints elevated and experienced teachers. For the year 1981-82, students are admitted to 5th, 6th, 7th, 8th and 9th standards.

The school, which is situated in a beautiful campus of 33 acres of land, is 21 k.m. far from the city on Bangalore-Mysore highway.

You can have details personally or by post from our office between 10-30 a.m. to 5-30 p.m. For the prospectus and application forms which is same for all standards, send Rs. 5-00 (Rupees five only) by M. O. to the below mentioned addresses. Last date for submitting the duly filled applications, for higher primary is 30-4-1981 and for high school 15-5-1981.

Entrance examinations; for higher primary-15 May, 1981 for high school-22 May, 1981.

Sister Lohita, correspondent Basava Bharati Vidyalaya,
Basava Gangothri Campus, Kumbalgodu-560074
Bangalore South, Mysore-Bangalore Road, Phone : 34

and

Shri Mahadevaswamy

24, Basava Mantapa, II Block, Chord Road,
Rajajinagar, Bangalore-560 010. Phone : 82335

ಕಲ್ಯಾಣ ಕಿರಣಕ್ಕೆ ಆದ ಹೊಸ ಆಜೀವ ಸದಸ್ಯರ ಬಳಗ

ಶರಣ/ಶರಣೆಯರುಗಳಾದ

೧. ಎಂ. ಎನ್. ಸೌಭಾಗ್ಯವತಿ ದೇವಿ,
   ಕೆ. ಸದಾಶಿವ ದೇವರು, ಹಿರಿಯೂರು,
   ಚಿತ್ರದುರ್ಗಜಿಲ್ಲೆ.
೨. ಸಿ. ಕೆ. ಜಾದವ್, ಚಿಂಚೋಳಿ
೩. ಸೋಮಶೇಖರ, ಕಿರಾಣಿ ಅಂಗಡಿ, ಪೋಲಕ್‌ಪಳ್ಳಿ
   ಚಿಂಚೋಳಿ ತಾಲ್ಲೂಕು.
೪. ಕೆ. ಗುರುಮಲ್ಲಪ್ಪ, ಮೈಸೂರು.
೫. ಟಿ. ಹಾಲಮ್ಮ, ಶಿವಮೊಗ್ಗ.

ಜ್ಞಾನದಾನ

ಪೂಜ್ಯ ದಯಾನಂದ ಸ್ವಾಮೀಜಿಯವರು ಮಂಡ್ಯದಲ್ಲಿ ಪ್ರವಚನ ಮಾಡಿದಾಗ, ಶರಣ ಸಿದ್ಧರಾಮಣ್ಣನವರು ಮತ್ತು ಅವರ ಕುಟುಂಬದವರೆಲ್ಲರೂ ಅನನ್ಯವಾಗಿ ಎಡೆಬಿಡದೆ ಶ್ರದ್ಧೆಯಿಂದ ಪ್ರವಚನ ಕೇಳಿ ವಿಶ್ವಕಲ್ಯಾಣ ಮಿಷನ್ ಧ್ಯೇಯೋದ್ಧೇಶಗಳನ್ನು ಅರಿತು ಸುಯಿಧಾನ ಸುಗ್ರಂಥಮಾಲೆಯ 38 ನೆಯ ಪುಷ್ಪವಾಗಿರುವ ವಿಶ್ವವಿಭೂತಿ ಬಸವಣ್ಣ ಹೊತ್ತಿಗೆಯ ದ್ವಿತೀಯ ಮುದ್ರಣಕ್ಕಾಗಿ 3000 ರೂ.ಗಳನ್ನು ಉದಾರವಾಗಿ ಧನಸಹಾಯ ಮಾಡಿದ್ದಾರೆ. ಅವರಿಗೆ ಮತ್ತು ಅವರ ಬಂಧು-ಬಾಂಧವರಿಗೆ ವಿಶ್ವಗುರು ಬಸವೇಶ್ವರರು ಅನುಗ್ರಹಿಸಲೆಂದು ಹಾರೈಸುವೆವು.

—ವಿಶ್ವಕಲ್ಯಾಣ ಮಿಷನ್
ಬೆಂಗಳೂರು-10.

ಹಂದಿಯೂ ಮದಕರಿಯೂ ಒಂದೇ ದಾರಿಯಲ್ಲಿ ಸಂಧಿಸಿದಾಗ, ಆನೆಯು ಪಕ್ಕಕ್ಕೆ ಸರಿದರೆ ಹಂದಿಯು ಸಿಂಹವಾಗಲು ಸಾಧ್ಯವೆ?

—ಅಕ್ಕಮಹಾದೇವಿ

ಬಚ್ಚಲನೀರು ತಿಳಿಯಾದರೇನು? ಗುಣವಿಲ್ಲದ ರೂಪವು ಇದ್ದರೇನು? ಸತ್ಪಾತ್ರಕ್ಕೆ ಸಲ್ಲದ ಹಣವಿದ್ದು ಪ್ರಯೋಜನವೇನು?


—ಬಸವಣ್ಣನವರು




ನ್ಯೂಯಾರ್ಕಿನಲ್ಲಿ ನಡೆದ ಪೂಜ್ಯ ಮಾತಾಜಿಯವರ ಜನ್ಮದಿನೋತ್ಸವ ಮತ್ತು ಬೀಳ್ಕೊಡುಗೆಯಂದು ಸಿಹಿ ವಿತರಣೆ ಮಾಡುತ್ತಿರುವ ಶ್ರೀಮತಿ ಜಯಾ ಡಾ|| ಶಿವಮೂರ್ತಿ, ಶ್ರೀಮತಿ ಸತ್ಯ ಡಾ|| ವಿಶ್ವನಾಥ್, ಮತ್ತು ಶ್ರೀಮತಿ ಉಮಾ ಡಾ|| ಲಿಂಗರಾಜ್.

ವಿಶ್ವಕಲ್ಯಾಣ ಮಿಷನ್,
ನಂ. 24, ಎರಡನೇ ಬ್ಲಾಕ್, ಕಾರ್ಡ್‌ರಸ್ತೆ,
ರಾಜಾಜಿನಗರ, ಬೆಂಗಳೂರು-10

Regd. No. KRNB 312
Licenced to post without pre-payment No. WPP-25



ಉತ್ತರ ಅಮೇರಿಕಾ ವೀರಶೈವ ಸಮ್ಮೇಳನದಂದು 29-11-1980 ಉದ್ಘಾಟನಾ ಭಾಷಣ
ಮಾಡುತ್ತಿರುವ ಪೂಜ್ಯ ಮಾತೆಯವರು



ಜನ್ಮದಿನೋತ್ಸವದಂದು ಫಲಪುಷ್ಪ ಕಾಣಿಕೆ ಅರ್ಪಿಸುತ್ತಿರುವ ಬಸವ ಇಂಟರ್‌ನ್ಯಾಷನಲ್ ಅಧ್ಯಕ್ಷೆ
ಶ್ರೀಮತಿ ಸತ್ಯ ಡಾ॥ ವಿಶ್ವನಾಥ್, ನ್ಯೂಯಾರ್ಕ್